# ತೈತ್ತಿರೀಯೋಪನ್ಯಾಸಮಂಜರಿ

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೨೦೦೦

**(ಉಪನಿಷತ್ತುಗಳ ಅಭಿಪ್ರಾಯವನ್ನು ಸರಳವಾದ ತಿಳಿಗನ್ನಡದಲ್ಲಿ ವಿವರಿಸುವ ಮಂಜರಿಗಳು :)**

**೧. ಈಶಾವಾಸ್ಯೋಪನ್ಯಾಸಮಂಜರಿ :** ಶ್ರೀಶ್ರೀಗಳವರು ೧೯೩೮ನೆಯ ಸೆಪ್ಟೆಂಬರ್‌ನಿಂದ ೧೯೩೯ನೆಯ ಆಗಸ್ಟ್‌ವರೆಗೆ ಅಧ್ಯಾತ್ಮ ಪ್ರಕಾಶದಲ್ಲಿ **'ಉಪನಿಷದ್ವಾಕ್ಯ'** ಗಳೆಂಬ ಹೆಸರಿನಲ್ಲಿ ಬರೆದಿರುವ ಲೇಖನಗಳನ್ನು ಪರಿಷ್ಕರಿಸಿ ಗ್ರಂಥರೂಪವಾದ ಮಂಜರಿಯಾಗಿ ಹೊರತಂದಿದೆ. ಮೂಲಮಂತ್ರಗಳನ್ನು ಕನ್ನಡದಲ್ಲಿ ಮುದ್ರಿಸಿ ತತ್ತ್ವವನ್ನು ಭಾಷ್ಯಾನುಸಾರವಾಗಿ ಪ್ರತಿಪಾದಿಸಿದೆ. ಈ ಗ್ರಂಥವನ್ನು ಓದಿ ಆಚಾರ್ಯಮುಖೇನ ಮೂಲಭಾಷ್ಯವನ್ನು ಅಧ್ಯಯನಮಾಡಿದರೆ ಹೆಚ್ಚು ಪ್ರಯೋಜನವನ್ನು ಪಡೆಯಬಹುದು. **(ಮೊದಲನೆಯ ಮುದ್ರಣ : ೧೯೯೨- ಪುಟಗಳು ಡೆಮ್ಮಿ ೪ + ೩೨)**

**೨. ಕೇನೋಪನ್ಯಾಸಮಂಜರಿ :** ಉಪನಿಷತ್ತಿನ ಸಾರವನ್ನು ಸುಲಭವಾಗಿ ತಿಳಿಯಬೇಕೆನ್ನುವವರಿಗೆ ಮೊದಲು ''ಮಂಜರಿ'' ಯನ್ನು ಓದಿ ಭಾಷ್ಯಾಧ್ಯಯನ ಮಾಡಿದರೆ ಹೆಚ್ಚಿನ ಪ್ರಯೋಜನವಾಗುವದು. ಕನ್ನಡದಲ್ಲಿ ಮೂಲಮಂತ್ರಗಳನ್ನು ಕೊಟ್ಟು ಭಾಷ್ಯಾನುಸಾರವಾಗಿ ತಾತ್ಪರ್ಯವನ್ನು ನಿರೂಪಿಸಿದೆ. ಇದು ಜಿಜ್ಞಾಸುಗಳಿಗೆ ಅತ್ಯಂತ ಉಪಯುಕ್ತವಾದ ಗ್ರಂಥ.

**(ಮೂರನೆಯ ಮುದ್ರಣ :೧೯೯೫ ಪುಟಗಳು ಡೆಮ್ಮಿ ೪ + ೪೮)**

**೩. ಕಾಠಕೋಪನ್ಯಾಸಮಂಜರಿ :** ಕಠೋಪನಿಷತ್ತಿನ ವಿವರಣೆಯನ್ನು ಭಾಷ್ಯಾನುಸಾರವಾಗಿ ತಿಳಿಗನ್ನಡದಲ್ಲಿ ಉಪನ್ಯಾಸರೂಪವಾಗಿ ವಿವರಿಸಿದೆ. ಯಮನು ನಚಿಕೇತನಿಗೆ ಉಪದೇಶಿಸಿದ ಆತ್ಮಸ್ವರೂಪ, ಅಧ್ಯಾತ್ಮಯೋಗ -ಇವುಗಳ ಮರ್ಮವನ್ನು ಸುಲಭ ರೀತಿಯಿಂದ ವರ್ಣಿಸಿದೆ.

**(ಎರಡನೆಯ ಮುದ್ರಣ : ೧೯೯೧ ಪುಟಗಳು ಡೆಮ್ಮಿ ೬+೨೫೮ )**

**೪. ಮುಂಡಕೋಪನ್ಯಾಸ ಮಂಜರಿ :** ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಉಪನಿಷತ್ ಭಾಷ್ಯಗಳನ್ನೆಲ್ಲ ಕನ್ನಡಿಸಿ ಪ್ರಕಟಿಸಿದ ಮೇಲೂ ತೃಪ್ತರಾಗದೆ ಜಿಜ್ಞಾಸುಗಳಿಗೆ ಶಾಸ್ತ್ರಾರ್ಥ ವಾದವಿವಾದಗಳು, ಖಂಡನಮಂಡನಗಳ ಗಡಿಬಿಡಿಯಿಲ್ಲದೆ ತಿಳಿಯಾದ ಭಾಷೆಯಲ್ಲಿಯೇ ಉಪನಿಷತ್ತುಗಳ ಸಾರವನ್ನು ತಿಳಿಯಿಸಬೇಕೆಂದು **ಮಂಜರಿ** ಎಂಬ ಹೆಸರಿನ ವಿವರಣ ರೂಪವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಜಿಜ್ಞಾಸುಗಳು ಶ್ರೀಶಾಂಕರಭಾಷ್ಯವನ್ನು ಓದುವ ಮೊದಲು, ಅಥವಾ ಅಧ್ಯಯನ ಮಾಡಿದಮೇಲೂ ಉಪನಿಷತ್ತಿನ ತಾತ್ಪರ್ಯವನ್ನು ಗ್ರಹಿಸಲು ಈ ಗ್ರಂಥ ಬಹಳ ಸಹಾಯಕವಾಗಿದೆ. **(ಮೂರನೆಯ ಮುದ್ರಣ : ೧೯೯೮ ಪುಟಗಳು ಡೆಮ್ಮಿ ೪ + ೮೮)**

**೫. ಪ್ರಶ್ನೋಪನ್ಯಾಸಮಂಜರಿ :** ಮುಂಡಕೋಪನಿಷತ್ತಿನ ವಿವರವೆಂದು ಈ ಉಪನಿಷತ್ತನ್ನು ಆಚಾರ್ಯರು ವರ್ಣಿಸಿದ್ದಾರೆ. ಇದರಲ್ಲಿ ಗುರುಶಿಷ್ಯಸಂವಾದರೂಪದಲ್ಲಿ ಪ್ರಾಣನ ಸ್ವರೂಪ, ಅವತಾರ -ಉತ್ಪತ್ತ್ಯಾದಿಗಳು, ಓಂಕಾರೋಪಾಸನೆ, ಷೋಡಶಕಲಪುರುಷನ ಜ್ಞಾನ- ಇವುಗಳನ್ನು ಬಹಳ ಚನ್ನಾಗಿ ವರ್ಣಿಸಿದೆ. ಶ್ರೀಗಳವರು ತಮ್ಮ ಉಪನ್ಯಾಸವಿವರಣೆಯಲ್ಲಿ ಉಪನಿಷತ್ತಿನ ಗ್ರಂಥಿಗಳನ್ನೆಲ್ಲ ಬಿಡಿಸಿ ತಿಳಿಸಿದ್ದಾರೆ. **( ಎರಡನೆಯ ಮುದ್ರಣ : ೧೯೯೬ ಪುಟಗಳು ಡೆಮ್ಮಿ ೪ + ೯೬)**

**೬. ಮಾಂಡೂಕ್ಯೋಪನ್ಯಾಸಮಂಜರಿ :** ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ೧೯೫೫ನೇ ಇಸವಿಯಲ್ಲಿ **'ಅಧ್ಯಾತ್ಮ ಪ್ರಕಾಶ'** ಮಾಸಪತ್ರಿಕೆಯಲ್ಲಿ ಸಂದೇಶರೂಪವಾಗಿ ಬರೆದಿದ್ದ ಹನ್ನೆರಡು ಲೇಖನಗಳ ಸಂಗ್ರಹವನ್ನು ಪರಿಷ್ಕರಿಸಿ **ಮಂಜರಿ**ಯಾಗಿ ಹೊರತಂದಿದೆ. ಇದರಲ್ಲಿ ಅಡಕವಾಗಿರುವ ಅವಸ್ಥಾತ್ರಯಪ್ರಕ್ರಿಯೆಯ ರಹಸ್ಯವು ಸಾಮಾನ್ಯಜಿಜ್ಞಾಸುಗಳಿಗೆ ಸರಳವಾಗಿಯೂ, ಶಾಸ್ತ್ರೀಯವಾಗಿಯೂ, ಅನುಭವಗಮ್ಯ ರೀತಿಯಾಗಿಯೂ ಅರ್ಥವಾಗುವಂತೆ ಪ್ರತಿಪಾದಿಸಿದೆ. ಬಹಳ ಅತ್ಯುತ್ತಮವಾದ ವಿಷಯಗಳನ್ನು ಹೊಂದಿದೆ. **(ಎರಡನೆಯ ಮುದ್ರಣ : ೧೯೮೨ ಪು. ಕ್ರೌನ್, ೪+೧೧೬)**

<u>ಅಧ್ಯಾತ್ಮಗ್ರಂಥಾವಳಿ</u>

# ತೈತ್ತಿರೀಯೋಪನ್ಯಾಸಮಂಜರಿ

(ತೈತ್ತಿರೀಯೋಪನಿಷತ್ತಿನ ಶಾಂಕರಭಾಷ್ಯಾನುಸಾರವಾದ ಸಾರಸಂಗ್ರಹ)

ಬರೆದವರು :
ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ
**ಹೆಚ್. ಎಸ್: ಲಕ್ಷ್ಮೀನರಸಿಂಹಮೂರ್ತಿ**

**ಕ್ರಮಾಂಕ ೨೧೪**

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೨೦೦೦

ಮೊದಲನೆಯ ಮುದ್ರಣ (೨೦೦೦ ಪ್ರತಿಗಳು)
೨೦೦೦

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೨೧೩, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೭೬೭೦೧೬

ಮುದ್ರಕರು :
**ಪ್ರಾಜ್ಞ ಪ್ರಿಂಟರ್ಸ್**
೨೨೨, ಗೌಡನಪಾಳ್ಯ ಮುಖ್ಯರಸ್ತೆ
ಬೆಂಗಳೂರು -೫೬೦ ೦೬೧
ದೂರವಾಣಿ : ೬೬೬೨೨೩೨

# ಮುನ್ನುಡಿ

ಉಪನಿಷತ್ತುಗಳಿಗೆ ಶಂಕರಭಾಷ್ಯನುಸಾರವಾಗಿ ಸರಳವಾದ ಅಭಿಪ್ರಾಯವನ್ನು ಪೂರ್ವಪಕ್ಷ-ಸಿದ್ಧಾಂತಗಳ ಗಡಿಬಿಡಿಯಿಲ್ಲದೆ ಮನನಮಾಡಲು ಇಚ್ಛಿಸುವ ವಾಚಕರ ಅನುಕೂಲಕ್ಕಾಗಿ ಪೂಜ್ಯ ಶ್ರೀಶ್ರೀಬ್ರಹ್ಮೀಭೂತಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು **'ಮಂಜರಿ'** ಗಳೆಂಬ ಹೆಸರಿನಿಂದ ಒಂದು ಗ್ರಂಥಮಾಲೆಯನ್ನು ಪ್ರಾರಂಭಿಸಿ ದಶೋಪನಿಷತ್ತುಗಳಲ್ಲಿ ಆರು ಉಪನಿಷತ್ತುಗಳಿಗೆ ಮಂಜರಿಗಳನ್ನು ಬರೆದು ವಾಚಕರಿಗೆ ಸಮರ್ಪಿಸಿದ್ದರು. ಈ ಗ್ರಂಥಮಾಲೆಯಲ್ಲಿ ಉಳಿದಿದ್ದ (೧) ಬೃಹದಾರಣ್ಯಕ (೨) ಛಾಂದೋಗ್ಯ (೩) ತೈತ್ತಿರೀಯ (೪) ಐತರೇಯ - ಈ ಉಪನಿಷತ್ತುಗಳಿಗೆ **'ಮಂಜರಿ'** ಗಳನ್ನು ಕಾರ್ಯಾಲಯದ ಪಂಡಿತರಾದ **ವೇ|| ಬ್ರ|| ಶ್ರೀ|| ಲಕ್ಷ್ಮೀನರಸಿಂಹಮೂರ್ತಿ**ಗಳನ್ನು ಬರೆದುಕೊಡುವಂತೆ ಕೇಳಿಕೊಳ್ಳಲಾಯಿತು. ಅದರಂತೆ ಅವರು ಈವರೆಗೆ ಬೃಹದಾರಣ್ಯಕ, ಛಾಂದೋಗ್ಯ- ಉಪನಿಷತ್ತುಗಳಿಗೆ ಬರೆದಿರುವ ಮಂಜರಿಗಳನ್ನು ಈಗಾಗಲೇ ಪ್ರಕಟಿಸಲಾಗಿದ್ದು **'ತೈತ್ತಿರೀಯೋಪನ್ಯಾಸಮಂಜರಿ'**ಯನ್ನು ಅವರಿಂದಲೇ ಬರೆಯಿಸಿ ಪ್ರಕಟಿಸಿ ಈಗ ವಾಚಕರಿಗೆ ಸಮರ್ಪಿಸುತ್ತಿದ್ದೇವೆ.

ಈ ಗ್ರಂಥದ ಸುಮಾರು ೨೮ ಪುಟಗಳಷ್ಟು ವಿಷಯಗಳನ್ನು ಪೂಜ್ಯ ಶ್ರೀಶ್ರೀಗಳವರೇ ಬರೆದಿದ್ದ ಕೈಬರಹಪ್ರತಿಯಿಂದ ಸಂಗ್ರಹಿಸಲಾಗಿದೆ. ಮುಂದಿನ ಭಾಗವು ಶ್ರೀಶ್ರೀಗಳವರಿಂದ ಬರೆಯಲ್ಪಡದೆ ನಿಂತಿರುವದನ್ನು ಗಮನಿಸಿ ಈಗ ಕಾರ್ಯಾಲಯದ ಪಂಡಿತರೇ ಗ್ರಂಥವನ್ನು ಮುಂದುವರೆಸಿ ಪೂರ್ಣಗೊಳಿಸಿರುತ್ತಾರೆ. ಮುಖ್ಯವಾಗಿ **'ಮಂಜರಿ ಗ್ರಂಥಮಾಲೆ'**ಯ ಉದ್ದೇಶಕ್ಕೆ ಅನುಗುಣವಾಗಿ ಶಂಕರಭಾಷ್ಯಾನುಸಾರವಾಗಿಯೇ ವಿಷಯಗಳನ್ನು ವಿವರಿಸಲಾಗಿದೆಯಾದರೂ ಕೆಲವು ಚರ್ಚಾಭಾಗಗಳನ್ನು ಕೈಬಿಡಲಾಗಿದೆ. ಆದರೆ ಇದರಿಂದ ಉಪನಿಷತ್ತಿನ ತಾತ್ಪರ್ಯಗ್ರಹಣ ಹಾಗೂ ಚಿಂತನೆಗೆ ಏನೂ ಕೊರತೆಯಾಗದಂತೆ ನೋಡಿಕೊಳ್ಳಲಾಗಿದೆ. ಈ ನಮ್ಮ ಸಾರಸ್ವತಸೇವೆಯನ್ನು ವಾಚಕರು ಸ್ವೀಕರಿಸಿ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಈ ಗ್ರಂಥವನ್ನು ಪೂರ್ಣಗೊಳಿಸಿ ಉಪಕರಿಸಿರುವ ಅಧ್ಯಾತ್ಮವಿದ್ಯಾಪ್ರವೀಣ ಪಂಡಿತ **ವೇ|| ಲಕ್ಷ್ಮೀನರಸಿಂಹಮೂರ್ತಿ**ಗಳವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಮರ್ಪಿಸಲಾಗಿದೆ..

ಇತಿ -

ಹೊಳೆನರಸೀಪುರ
ತಾ|| 29.7.2000

**ಅರಕಲಗೂಡು ತಾಂಡವೇಶ್ವರ**
ಕಾರ್ಯಕಾರಿಸಮಿತಿಯ ಅಧ್ಯಕ್ಷರು

# ತೈತ್ತಿರೀಯೋಪನ್ಯಾಸಮಂಜರಿ

## ಗ್ರಂಥಪ್ರಕಟನೆಗೆ ಧನಸಹಾಯ ನೀಡಿರುವ ಮಹನೀಯರುಗಳು

ಶ್ರೀಯುತರುಗಳಾದ,

| | | | |
|---|---|---|---|
| 1. | ಶ್ರೀಮತಿ ಜಯಲಕ್ಷ್ಮಿ - ಅನಂತ ಕೃಷ್ಣಯ್ಯ | ಬೆಂಗಳೂರು | ರೂ. ೫೦೧ |
| 2. | ಅಂತರಂಗ ಭಕ್ತರು | ಬೆಂಗಳೂರು | ರೂ. ೫೦೧ |
| 3. | ಎನ್. ರಾಮ 'ಎ' ರಾಜು | ಬೆಂಗಳೂರು | ರೂ. ೫೦೦ |
| 4. | ಪಿ.ಎಸ್. ಅಶ್ವತ್ಥ ನಾರಾಯಣರಾವ್ (ಮಾತಾಪಿತೃಗಳಾದ ಲಕ್ಷ್ಮೀ ದೇವಮ್ಮ - ಶ್ರೀಕಂಠಯ್ಯನವರ ಹೆಸರಿನಲ್ಲಿ) | ತುಮಕೂರು | ರೂ. ೨೫೦ |
| 5. | ಕೆ.ಟಿ. ಅನಂತಸುಬ್ಬರಾವ್ | ಬೆಂಗಳೂರು | ರೂ. ೨೫೦ |
| 6. | ಅಂತರಂಗ ಭಕ್ತರು | ಬೆಂಗಳೂರು | ರೂ. ೨೫೦ |

**ಮೇಲ್ಕಂಡ ದಾನಿಗಳಿಗೆಲ್ಲ ಕಾರ್ಯಾಲಯದ ಕೃತಜ್ಞತಾ ಪೂರ್ವಕ ವಂದನೆಗಳು**

--------

|| ಓಮ್ ||

# ತೈತ್ತಿರೀಯೋಪನ್ಯಾಸಮಂಜರಿ

## ಮಂಗಳ

**ಯಸ್ಮಾಜ್ಜಾತಂ ಜಗತ್ಸರ್ವಂ ಯಸ್ಮಿನ್ನೇವ ಪ್ರಲೀಯತೇ ।**
**ಯೇನೇದಂ ಧಾರ್ಯತೇ ಚೈವ ತಸ್ಮೈ ಜ್ಞಾನಾತ್ಮನೇ ನಮಃ ॥**

## ಅವತರಣಿಕೆ

ತೈತ್ತಿರೀಯೋಪನಿಷತ್ತು ಕೃಷ್ಣಯಜುರ್ವೇದದ ತೈತ್ತಿರೀಯಶಾಖೆಗೆ ಸೇರಿದ್ದು. ಯಜುರ್ವೇದವು ಶುಕ್ಲ, ಕೃಷ್ಣ - ಎಂಬ ಎರಡು ಶಾಖೆಗಳಾಗಿ ವಿಂಗಡವಾಗಿರುತ್ತದೆ. ಯಾಜ್ಞವಲ್ಕ್ಯರು ತಾವು ಅಧ್ಯಯನಮಾಡಿದ್ದ ವೇದವನ್ನು ಗುರುಗಳ ಆಜ್ಞೆಯಂತೆ ಕಕ್ಕಿದರೆಂದೂ ಕೆಲವು ಋಷಿಗಳು 'ತಿತ್ತಿರಿ' ಎಂಬ ಪಕ್ಷಿರೂಪದಿಂದ ಅದನ್ನು ಕೊಕ್ಕಿನಿಂದ ಕುಡಿದರೆಂದೂ ಒಂದು ಕಥೆಯಿದೆ. ಬಳಿಕ ಯಾಜ್ಞವಲ್ಕ್ಯರು ಸೂರ್ಯನಿಂದ ಪಡೆದುಕೊಂಡ ಯಜುರ್ವೇದವು ಶುಕ್ಲಯಜುರ್ವೇದವೆನಿಸಿಕೊಂಡಿತು - ಎಂದು ಆ ಕಥೆಯಲ್ಲಿದೆ. ಕಾರಣವು ಏನೇ ಇರಲಿ, ಕೃಷ್ಣಯಜುರ್ವೇದದಲ್ಲಿ ಸಂಹಿತಾಭಾಗವೂ ಬ್ರಾಹ್ಮಣಭಾಗವೂ ಸೇರಿಕೊಂಡಿರುವದರಿಂದ ಅದು ಕೃಷ್ಣ (ಕರಿಯ) ಯಜುರ್ವೇದವೆನಿಸಿಕೊಂಡಿರುತ್ತದೆ. **"ತಾನೀಮಾನಿ ಶುಕ್ಲಾನೀತಿ ಅವ್ಯಾಮಿಶ್ರಾಣಿ ಬ್ರಾಹ್ಮಣೇನ"** ಎಂದು ಬೃಹದಾರಣ್ಯಕದ ಕೊನೆಯ ಕಂಡಿಕೆಯ ಭಾಷ್ಯದಲ್ಲಿ ಶ್ರೀ ಶಂಕರಭಗವತ್ಪಾದರು ಇದೇ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ.

ಕೃಷ್ಣಯಜುರ್ವೇದದಲ್ಲಿಯೂ ಅನೇಕ ಉಪಶಾಖೆಗಳಿರುವದರಿಂದ ಪ್ರಕೃತವಾಗಿ ಉಪನಿಷತ್ತು ತೈತ್ತಿರೀಯಶಾಖೆಗೆ ಸೇರಿದ್ದು - ಎಂಬುದನ್ನು ತಿಳಿಸುವದಕ್ಕಾಗಿ ತೈತ್ತಿರೀಯೋಪನಿಷತ್ತು ಎಂಬ ಹೆಸರು ರೂಢವಾಗಿರುತ್ತದೆ. ಈ ಉಪನಿಷತ್ತಿನಲ್ಲಿ **ಶೀಕ್ಷಾವಲ್ಲಿ, ಬ್ರಹ್ಮಾನಂದವಲ್ಲಿ, ಭೃಗುವಲ್ಲಿ**- ಎಂಬ ಮೂರು ವಿಭಾಗಗಳಿವೆ. ಇದರ ಮುಂದಿನ ಭಾಗವು 'ನಾರಾಯಣಪನ್ನ'[1] ವೆಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಅದರಲ್ಲಿರುವ ಪುರುಷಯಜ್ಞದ ವಿಷಯವನ್ನು ಸೂತ್ರಭಾಷ್ಯದಲ್ಲಿ ವಿಚಾರಕ್ಕೆ ತೆಗೆದುಕೊಂಡಿರುವದು ಕಂಡುಬರುತ್ತದೆಯಾದರೂ ಶಂಕರಾಚಾರ್ಯರ ಹೆಸರಿನಿಂದ

---

1. 'ನಾರಾಯಣಪನ್ನ'ದ ವಿವರಣೆಯನ್ನು "ಮಹಾನಾರಾಯಣೋಪನಿಷತ್ತು" ಎಂಬ ಗ್ರಂಥರೂಪವಾಗಿ ಕಾರ್ಯಾಲಯದ ಮೂಲಕ ಪ್ರಕಟಿಸಲಾಗಿದೆ.

ಪೂರ್ಣವಾದ ಭಾಷ್ಯವು ಅದಕ್ಕೆ ಕಾಣಬರುತ್ತಿಲ್ಲ. ಆದ್ದರಿಂದ ಇಲ್ಲಿ ಹೇಳಿದ ಮೂರು ವಿಭಾಗಗಳ ಅಭಿಪ್ರಾಯವನ್ನೇ ಸರಳವಾದ ಕನ್ನಡದಲ್ಲಿ ವಿವರಿಸಲಾಗುವದು.

ಈ ಉಪನಿಷತ್ತಿನಲ್ಲಿರುವ ತೈತ್ತಿರೀಯಬ್ರಾಹ್ಮಣದ ಹಿಂದಿನ ಭಾಗದಲ್ಲಿ ನಿತ್ಯಕರ್ಮಗಳನ್ನು ವಿವರಿಸಿ ಹೇಳಿರುತ್ತಾರೆ. ಅವುಗಳನ್ನು ಅಧಿಕಾರಿಯಾದವನು ಅವಶ್ಯವಾಗಿ ಮಾಡಲೇಬೇಕು. ಮುಮುಕ್ಷುಗಳಿಗೆ ಹಿಂದೆ ಕೂಡಿಹಾಕಿಕೊಂಡಿರುವ ಪಾಪಗಳನ್ನು ನಾಶಪಡಿಸುವ ಮೂಲಕ ಚಿತ್ತಶುದ್ಧಿಯನ್ನುಂಟುಮಾಡುವದೆಂಬ ಫಲವೂ ಇದೆ. ಕಾಮ್ಯಕರ್ಮಗಳನ್ನೂ ಹಿಂದಿನ ಭಾಗದಲ್ಲಿ ಹೇಳಿರುತ್ತದೆ. ಅವುಗಳನ್ನು ಆಯಾ ಕಾಮಗಳನ್ನು ಪಡೆದುಕೊಳ್ಳಬೇಕೆಂಬ ಆಶಯುಳ್ಳವರು ಮಾಡಬೇಕು. **ಮುಮುಕ್ಷು** ಎಂದರೆ ಪರಮಪುರುಷಾರ್ಥವಾದ ಮೋಕ್ಷವನ್ನು ಬಯಸುವವನು ಮಾಡತಕ್ಕದ್ದಲ್ಲ. ಏಕೆಂದರೆ ಮಾಡಬಾರದು - ಎಂದು ಶಾಸ್ತ್ರದಲ್ಲಿ ಹೇಳಿರುವ ನಿಷಿದ್ಧಕರ್ಮಗಳು ಕೆಟ್ಟಜನ್ಮವನ್ನು ಪಡೆಯುವುದಕ್ಕೆ ಕಾರಣವಾಗುವಂತೆಯೇ ಕಾಮ್ಯಕರ್ಮಗಳೂ ಒಳ್ಳೆಯ ಜನ್ಮವನ್ನು ಪಡೆಯುವದಕ್ಕೆ ಕಾರಣವಾಗಿರುತ್ತವೆ. ಪುರುಷನು ಪ್ರಕೃತಿಯೇ ತಾನೆಂದು ತಪ್ಪಾಗಿ ಭಾವಿಸಿಕೊಂಡಿರುವದರಿಂದ ಸತ್ತ್ವರಜಸ್ತಮೋ ಗುಣಗಳ ಕಾರ್ಯವನ್ನು ಅನುಭವಿಸಬೇಕಾಗುತ್ತದೆ. ಆ ಗುಣಗಳ ಕಾರ್ಯದಲ್ಲಿ ಯಾವನಿಗೆ ಕಾಮವಿರುವದೋ ಅವನು ಒಳ್ಳೆಯ, ಅಥವಾ ಕೆಟ್ಟ ಅಥವಾ ಮಧ್ಯಮ ತರಗತಿಯ ಯೋನಿಗಳಲ್ಲಿ ಹುಟ್ಟುವದಕ್ಕೆ ಅವಕಾಶವನ್ನು ಕಲ್ಪಿಸಿದವನಾಗುತ್ತಾನೆ- ಎಂದು ''ಪುರುಷಃ ಪ್ರಕೃತಿಸ್ಥಃ'' (ಗೀ. ೧೩-೨೧) ಎಂಬ ಗೀತಾಶ್ಲೋಕದಲ್ಲಿ ಹೇಳಿರುತ್ತದೆ. ಧರ್ಮ, ಅರ್ಥ, ಕಾಮ- ಎಂಬ ಮೂರು ಪುರುಷಾರ್ಥಗಳು ಸಂಸಾರಿಗಳಿಗೆ ಅವಶ್ಯವಾಗಿ ಬಯಸತಕ್ಕವುಗಳಾಗಿರುತ್ತವೆ. ಧರ್ಮಕ್ಕೆ ವಿರುದ್ಧವಲ್ಲದ ಅರ್ಥವನ್ನೂ ಕಾಮವನ್ನೂ ಸಂಸಾರಿಗಳು ಬಯಸುವದು ಸ್ವಾಭಾವಿಕವಾಗಿರುತ್ತದೆ. ಆದರೆ ಯಾವ ಕರ್ಮಫಲವನ್ನೂ ಬಯಸುವದಕ್ಕೆ ಇಚ್ಛಿಸದೆ ಜನ್ಮಮರಣಪ್ರವಾಹವೆಂಬ ಸಂಸಾರದಿಂದ ಬಿಡುಗಡೆಯನ್ನು ಹೊಂದಬೇಕೆಂದು ಬಯಸುವವರು ಕಾಮ್ಯಕರ್ಮಗಳನ್ನು ಬಿಟ್ಟುಬಿಡಬೇಕು. ಏಕೆಂದರೆ ಕಾಮವೇ ಫಲಾಪೇಕ್ಷೆಯ ಕರ್ಮಕ್ಕೆ ಕಾರಣವಾಗಿರುತ್ತದೆ. ಇಂಥ ಫಲವು ಆಗಬೇಕು- ಎಂದು ಇಚ್ಛಿಸದೆ ಇರುವಾತನು ಯಾವ ಕರ್ಮವನ್ನೂ ಮಾಡಲಾರನು. ಆಗ ಅವನು ನೆಲೆನಿಲ್ಲುವನು. ಅದಕ್ಕೆ ಮೋಕ್ಷ, ಪರಮಪುರುಷಾರ್ಥ- ಎಂದು ಹೆಸರು. ಯಾರಿಗೆ ಎಲ್ಲಾ ಕಾಮಗಳೂ ಪ್ರಾಪ್ತವಾಗಿರುವವೋ ಅವರಿಗೆ ಏತರಲ್ಲಿಯೂ ಆಸೆಯಿರುವದಿಲ್ಲ. ಆದ್ದರಿಂದ ಅವರು ತಮ್ಮ ಸ್ವರೂಪಕ್ಕಿಂತ ಮತ್ತೆ ಬೇರೆಯಾದುದನ್ನು ಬಯಸುವದೇ ಇಲ್ಲ. ಆದ್ದರಿಂದಲೇ ಆತ್ಮಕಾಮರಾದವರು ಆಪ್ತಕಾಮರು- ಎಂದು ಶ್ರುತಿಯು ಹೇಳುತ್ತಿರುವದು. ಪ್ರಾಣಿಗಳೆಲ್ಲರ ಆತ್ಮನೇ ಬ್ರಹ್ಮವು. ಬ್ರಹ್ಮವನ್ನು ಅರಿತುಕೊಂಡವನಿಗೆ 'ಪರ'

(ಮಿಗಿಲಿಲ್ಲದ ಪುರುಷಾರ್ಥ) ಪ್ರಾಪ್ತಿಯಾಗುವದೆಂದು ಈ ಉಪನಿಷತ್ತಿನ ಎರಡನೆಯ ವಲ್ಲಿಯಲ್ಲಿ ಹೇಳಲಾಗುವದು. ಆದ್ದರಿಂದ ನಮ್ಮ ನಿಜವಾದ ಆತ್ಮನಾದ ಬ್ರಹ್ಮವನ್ನು ಅರಿತುಕೊಂಡರೆ ಅವಿದ್ಯೆಯು ತೊಲಗಿ ಪರಮಪುರುಷಾರ್ಥವು ದೊರಕುವದು - ಎಂಬಿದೇ ಉಪನಿಷತ್ ಸಿದ್ಧಾಂತವು. ಇದು ಮುಂದೆ ಬ್ರಹ್ಮವಲ್ಲಿಯಲ್ಲಿ ಸ್ಫುಟವಾಗುವದು.

## ಕರ್ಮವಾದಿಗಳ ಪೂರ್ವಪಕ್ಷ

ಈ ಉಪನಿಷತ್ತಿನಲ್ಲಿರುವ ಬ್ರಹ್ಮಜ್ಞಾನವು ಸ್ವತಂತ್ರವಾಗಿ ತಾನೇ ನೇರಾಗಿ ಪರಮಪುರುಷಾರ್ಥವನ್ನು ಕೊಡುವದೊ, ಅಥವಾ ಇದರ ಹಿಂದಿನ ಭಾಗದಲ್ಲಿರುವ ಕರ್ಮವೇ ಪರಮಪುರುಷಾರ್ಥವನ್ನು ಕೊಡುವದೊ ? ಎಂಬ ವಿಷಯಕ್ಕೆ ವಾದಿಗಳಲ್ಲಿ ಮತಭೇದವುಂಟಾಗಿರುತ್ತದೆ. ಒಂದೇ ವೇದದಲ್ಲಿ ಕರ್ಮವನ್ನೂ ಜ್ಞಾನವನ್ನೂ ಹೇಳಿರುವದರಿಂದ ಕರ್ಮಪ್ರತಿಪಾದಕವಾದ ಭಾಗಕ್ಕೂ ಜ್ಞಾನಪ್ರತಿಪಾದಕವಾದ ಭಾಗಕ್ಕೂ ವಿರೋಧವಿಲ್ಲದಂತೆ ಉಪನಿಷತ್ತಿಗೆ ಅರ್ಥವನ್ನು ಕಲ್ಪಿಸುವದೇ ಯುಕ್ತವಷ್ಟೆ! ಈ ಕಾರಣದಿಂದಲೇ ಕರ್ಮಪಕ್ಷಪಾತಿಗಳಾದ ವೇದಾಂತಿಗಳು ಕೆಲವರು ಹೀಗೆಂದು ವಾದಿಸುತ್ತಿದ್ದರು. ಪರಮಪುರುಷಾರ್ಥವೆಂಬುದು ನಮ್ಮಗಳ ಆತ್ಮನಾದ ಬ್ರಹ್ಮದಲ್ಲಿ ನೆಲೆನಿಲ್ಲುವದೆಂಬುದೇ ಸರಿ. ಆದರೆ ಅದಕ್ಕೆ ಸಾಧನವು ಬರಿಯ ಜ್ಞಾನವಲ್ಲ. ಏಕೆಂದರೆ ಆಗ ಕರ್ಮಗಳನ್ನು ವಿಧಿಸಿರುವ ವೇದಭಾಗವು ವ್ಯರ್ಥವಾದೀತು. ಕರ್ಮಗಳೆಲ್ಲವೂ ಬಂಧಕವಾಗಿರುವದಿಲ್ಲ. ಒಳ್ಳೆಯ ಫಲಗಳನ್ನು ಕೊಡುವ ಕಾಮ್ಯಕರ್ಮ, ಕೆಟ್ಟಫಲವನ್ನು ಕೊಡುವ ನಿಷಿದ್ಧಕರ್ಮ- ಇವು ಫಲಭೋಗಕ್ಕಾಗಿ ಜನ್ಮಾಂತರಗಳನ್ನು ಕೊಡುವವಾದ್ದರಿಂದ ಇವುಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾತ್ರ ಮಾಡುತ್ತಲೇ ಇರಬೇಕು. ನಿತ್ಯಕರ್ಮಗಳಿಗೆ ಫಲವೇ ಇಲ್ಲದಿದ್ದರೂ ಅವುಗಳನ್ನು ಮಾಡದಿದ್ದರೆ ಪ್ರತ್ಯವಾಯ (ದೋಷ) ವೆಂಬ ಅನಿಷ್ಟಫಲವು ಬರುವದು. ಆದ್ದರಿಂದ ಶಾಸ್ತ್ರೋಕ್ತವಾದ ನಿತ್ಯಕರ್ಮಗಳನ್ನು ಯಥಾವಿಧಿಯಾಗಿ ಮಾಡುತ್ತಾ ಇದ್ದರೆ ಮತ್ತೊಂದು ಜನ್ಮವನ್ನು ಪಡೆಯಬೇಕಾದ ಸಂಭವವಿರುವದಿಲ್ಲ. ಈ ಜನ್ಮವನ್ನು ಕೊಟ್ಟಿರುವ ಕರ್ಮಗಳ ಫಲವು ಈ ಜನ್ಮದಲ್ಲಿ ನಾವು ಸುಖದುಃಖಗಳನ್ನು ಅನುಭವಿಸುವದರಿಂದಲೇ ಸವೆದು ಹೋಗುವವು. ಆದ್ದರಿಂದ ಮತ್ತೊಂದು ಜನ್ಮವನ್ನು ಪಡೆಯುವದಕ್ಕೆ ಕಾರಣವೇ ಇರುವದಿಲ್ಲವಾದ್ದರಿಂದ ಮತ್ತೊಂದು ಜನ್ಮದ ಅಪೇಕ್ಷೆಯೂ ಇಲ್ಲದೆ ನಮ್ಮ ಆತ್ಮನಲ್ಲಿಯೇ ನಾವು ನೆಲೆನಿಲ್ಲುವೆವು. ಇದೇ ಮೋಕ್ಷವು- ಎಂಬುದು ಈ ವಾದಿಗಳ ಅಭಿಪ್ರಾಯವಾಗಿದೆ.

ಈ ವಾದವು ನೋಡುವದಕ್ಕೆ ಎಷ್ಟು ರಮಣೀಯವಾಗಿ ಕಂಡರೂ ಇದು ಯುಕ್ತಿಯ ಹೊಡೆತಕ್ಕೆ ನಿಲ್ಲುವಂತಿಲ್ಲ. ಏಕೆಂದರೆ ಹಿಂದೆ ಆಗಿಹೋಗಿರುವ ಅನೇಕ ಜನ್ಮಗಳಲ್ಲಿ ಮಾಡಿರುವ ಕರ್ಮಗಳು ಅನೇಕವಾಗಿರುತ್ತವೆ. ಅವುಗಳೊಳಗೆ ಕೆಲವಕ್ಕೆ ಮಾತ್ರ ಫಲವಾಗಿ ಈ ಜನ್ಮವು ಬಂದಿರುತ್ತದೆ. ಫಲವನ್ನು ಕೊಡದೆ ಇರುವ ಸಂಚಿತವಾದ ಕರ್ಮಗಳೂ ಎಷ್ಟೋ ಉಳಿದಿರುತ್ತವೆ. ಸಂಚಿತಕರ್ಮಗಳೊಳಗೆ ಒಂದಕ್ಕೊಂದು ವಿರುದ್ಧಫಲವುಳ್ಳ ಎಷ್ಟೋ ಕರ್ಮಗಳು ಅಡಕವಾಗಿರುತ್ತವೆ. ಅವುಗಳೊಳಗೆ ಒಂದೊಂದನ್ನೇ ಹತ್ತಾರು ಜನ್ಮಗಳಲ್ಲಿ ಫಲವುಂಡು ಸವೆಯಿಸ ಬೇಕಾಗಿರುತ್ತದೆ. ಉದಾಹರಣೆಗೆ ಬ್ರಹ್ಮಹತ್ಯೆಗೆ ಫಲವು ಧರ್ಮಶಾಸ್ತ್ರದಲ್ಲಿ ಹೀಗೆಂದು ಉಕ್ತವಾಗಿದೆ. ಬ್ರಹ್ಮಹತ್ಯೆ ಮಾಡಿದವನು ನಾಯಿ, ಹಂದಿ, ಕತ್ತೆ, ಕುರಿ - ಮೃಗ ಪಕ್ಷಿಗಳು ಮುಂತಾದ ಜನ್ಮಗಳನ್ನು ಪಡೆಯುವನು. ಹೀಗೆ ಒಂದೊಂದು ಕರ್ಮಕ್ಕೆ ಅನೇಕಜನ್ಮಗಳ ಫಲವಿರುವಲ್ಲಿ ಸಂಚಿತಕರ್ಮಗಳನ್ನೆಲ್ಲ ಒಂದೇ ಜನ್ಮದಲ್ಲಿ ಮುಗಿಸುವದಕ್ಕಾದೀತೆ ? ಎಂದಿಗೂ ಆಗಲಾರದು.

ಕೆಟ್ಟಕರ್ಮಗಳ ಫಲವು ಹೇಗೆ ಬೇರೆ ಬೇರೆಯ ಜನ್ಮಗಳಲ್ಲಿ ಭೋಗಿಸ ತಕ್ಕದ್ದೋ ಹಾಗೆಯೇ ಒಳ್ಳೆಯ ಕರ್ಮಗಳ ಫಲವೂ ಲೋಕಾಂತರಗಳಲ್ಲಿ ಅನುಭವಿಸಿದ ಮಾತ್ರದಿಂದ ಕರ್ಮಗಳ ಕಟ್ಟು ಕಳಚಿಹೋಗುವದೆಂದು ನಂಬುವದಕ್ಕೆ ಆಗುವದಿಲ್ಲ. ಏಕೆಂದರೆ : ''ಯಾವತ್ ಸಂಪಾತಮುಷಿತ್ವಾ'' ಎಂಬಿವೇ ಮುಂತಾದ ವಾಕ್ಯಗಳಲ್ಲಿ ಹೇಳಿರುವಂತೆ ಸ್ವರ್ಗಫಲವನ್ನನುಭವಿಸಿದವರು, ಕರ್ಮಶೇಷಕ್ಕೆ ಅನುಗುಣವಾಗಿ ಬ್ರಾಹ್ಮಣಾದಿಯೋನಿಗಳನ್ನು ಪಡೆಯುವರು- ಎಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ''ವರ್ಣಾ ಆಶ್ರಮಾಶ್ಚ......'' ಎಂಬ ಗೌತಮಸ್ಮೃತಿವಾಕ್ಯದಲ್ಲಿ ''ತನ್ನ ವರ್ಣದ ಹಾಗೂ ಆಶ್ರಮದ ಧರ್ಮಗಳನ್ನು ಮಾಡಿ ದೇಹತ್ಯಾಗಮಾಡಿದ ಬಳಿಕ ಕರ್ಮಫಲವನ್ನನುಭವಿಸಿ ಆಯಾ ಕರ್ಮಶೇಷಕ್ಕೆ ತಕ್ಕಂತೆ ಆಯಾ ದೇಶ, ಜಾತಿ, ಕುಲ, ಧರ್ಮ- ಇತ್ಯಾದಿಗಳುಳ್ಳವರಾಗಿ ಆಯಾ ಜನ್ಮವನ್ನು ಪಡೆಯುವರು-'' ಎಂದು ಹೇಳಿರುತ್ತದೆ. ಆದ್ದರಿಂದಲೂ ಕರ್ಮಗಳು ಉಳಿದಿರುತ್ತವೆ- ಎಂದು ಆಯಿತು.

ನಿತ್ಯಕರ್ಮಗಳಿಂದಲೇ ಆ ಸಂಚಿತಕರ್ಮಗಳೂ ಕ್ಷಯವಾಗಬಹುದಲ್ಲ ? ಎನ್ನುವದು ಸರಿಯಲ್ಲ. ಏಕೆಂದರೆ ಅವನ್ನು ಮಾಡದೆ ಇದ್ದರೆ ಪ್ರತ್ಯವಾಯ (ದೋಷ) ವುಂಟಾಗುವದೆಂದು ಶಾಸ್ತ್ರದಲ್ಲಿ ಹೇಳಿದೆ. ಪ್ರತ್ಯವಾಯವೆಂದರೆ ಮಾಡದೆ ಇರುವದ ರಿಂದ ಉಂಟಾಗುವ ದುಃಖವು. ಅದನ್ನು ಪರಿಹರಿಸುವದೇ ನಿತ್ಯಕರ್ಮಾನುಷ್ಠಾನದ ಫಲವೆಂದು ಈ ವಾದಿಗಳೂ ಒಪ್ಪಿರುವದರಿಂದ ಅನಾರಬ್ಧಕರ್ಮಗಳ ಫಲವು ನಿತ್ಯ ಕರ್ಮಗಳನ್ನು ಮಾಡಿದ್ದರಿಂದ ಹೋಗಲಾರದು. ಒಂದು ವೇಳೆ ಈ ಸಂಚಿತ

ಕರ್ಮಗಳೇ ನಿತ್ಯಾನುಷ್ಠಾನಗಳಿಂದ ಹೋಗುವವೆಂದು ಇಟ್ಟುಕೊಂಡರೂ ಕೆಟ್ಟಕರ್ಮಗಳ ಫಲವು ಹೋದಾವೇ ಹೊರತು ಪುಣ್ಯಕರ್ಮಫಲವು ಹೋಗಲಾರದು. ಏಕೆಂದರೆ ನಿತ್ಯಕರ್ಮವು ಶುಭಕರ್ಮವಾದ್ದರಿಂದ ಅದು ಪುಣ್ಯದ ಫಲವನ್ನು ಕಳೆಯಲಾರದು. ಕಾಮ್ಯಕರ್ಮಗಳ ಅನುಷ್ಠಾನದಿಂದಲೂ ಅವು ಹೋಗಲಾರವು.

ಆತ್ಮನನ್ನು ಅರಿತುಕೊಳ್ಳದವನಿಗಲ್ಲವೆ, ಆತ್ಮನಲ್ಲದ ಕಾಮಗಳ ಬಯಕೆ ಇದ್ದೀತು ? ಆತ್ಮನ ವಿಷಯದಲ್ಲಿ ಎಂದರೆ ತನ್ನ ವಿಷಯದಲ್ಲಿಯೇ ತನಗೆ ಕಾಮವಾಗುವದಕ್ಕೆ ಕಾರಣವಿಲ್ಲ. ಆದ್ದರಿಂಧ ಕಾಮ್ಯಕರ್ಮಗಳಿಂದಲೂ ಸಂಚಿತಕರ್ಮದ ಫಲವು ಸವೆಯಲಾರದು. ಅಂತೂ ನಿತ್ಯಕರ್ಮವನ್ನು ಮಾಡಿದ್ದರಿಂದಲೂ ಸಂಚಿತಕರ್ಮಫಲವು ಸವೆಯಲಾರದು. ಆದರೆ ಅದರಿಂದ ಒಂದು ವೇಳೆ ಮುಂದೆ ಆಗಲಿರುವ ದುಃಖದ ನಾಶವಾದೀತೇ ಹೊರತು ಹಿಂದೆ ಮಾಡಿದ- ಎಂದರೆ ಫಲವನ್ನು ಕೊಡದೆ ಉಳಿದಿರುವ ಕರ್ಮಗಳನ್ನು ಅದು ಎಂದಿಗೂ ನಾಶಮಾಡಲಾರದು. ಹೊಸದಾಗಿ ದೋಷವನ್ನೂ ಉಂಟುಮಾಡಲಾರದು. ಕರ್ಮವನ್ನು ಮಾಡದೆ ಇರುವದೆಂಬ ಅಭಾವದಿಂದ ಭಾವರೂಪವಾದ ಪ್ರತ್ಯವಾಯವು ಹೇಗೆ ತಾನೆ ಉಂಟಾದೀತು ? ಆದ್ದರಿಂದ ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ಬರಿಯ ನಿತ್ಯಕರ್ಮಗಳನ್ನು ಮಾಡುತ್ತಿದ್ದರೆ ಈ ಒಂದು ಜನ್ಮವು ಮುಗಿದಮೇಲೆ ಮತ್ತೇನನ್ನೂ ಮಾಡದೆ ಇದ್ದರೂ ಮುಕ್ತಿಯು ತಾನೇ ಸಿದ್ಧವಾಗುವದೆಂಬ ಏಕಭವಿಕವಾದವು ಯುಕ್ತಿಯುಕ್ತವಲ್ಲ. ಈವರೆಗೆ ವರ್ಣಿಸಿದ ವಾದವು ವೇದಾಂತಿಗಳು ಹೇಳುವಂತೆ ಆತ್ಮರೂಪದಲ್ಲಿ ನೆಲೆನಿಲ್ಲುವದೇ ಮೋಕ್ಷವೆಂಬುದನ್ನು ಒಪ್ಪದೆ ಇರುವವರ ವಾದವಾಗಿದೆ. ಆದರೆ ವೇದಾಂತಿಗಳ ಮತವನ್ನು ಸ್ವಲ್ಪವೂ ಒಪ್ಪದೆ ಇರುವ ಕರ್ಮಮೀಮಾಂಸಕರ ವಾದವೂ ಒಂದುಂಟು. ಅವರ ಅಭಿಪ್ರಾಯವೇನೆಂದರೆ : ಮೋಕ್ಷವೆಂದರೆ ಪರಮಾನಂದವು. ಮಿಗಿಲಿಲ್ಲದ ಸುಖವೇ ''ಸ್ವರ್ಗ''ವಾದ್ದರಿಂದ ಸ್ವರ್ಗವೇ ಮೋಕ್ಷವು. ಆ ಸ್ವರ್ಗವು ಕರ್ಮದಿಂದಲೇ ಸಿಕ್ಕುವದೆಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಕರ್ಮದಿಂದಲೇ ಮೋಕ್ಷವು ಸಿದ್ಧವಾಗುತ್ತದೆ- ಹೀಗೆಂಬುದು ಅವರ ತೀರ್ಮಾನವಾಗಿರುತ್ತದೆ.

ಈ ವಾದದಲ್ಲಿ ಬ್ರಹ್ಮವಲ್ಲಿಯಲ್ಲಿ ಹೇಳಿರುವ ಬ್ರಹ್ಮವಿದ್ಯೆಗೆ ಪ್ರಯೋಜನವೇನು? ಎಂಬುದು ಸ್ಪಷ್ಟವಾಗಿಲ್ಲ. ಬ್ರಹ್ಮವಿದ್ಯೆಯೆಂದರೆ ಉಪಾಸನೆಯೇ ಆಗಿರುವದರಿಂದ ಅದೂ ಒಂದು ಬಗೆಯ ಉಪಾಸನೆಯೆಂದೇ ಈ ವಾದಿಗಳ ಅಭಿಪ್ರಾಯವಿದ್ದರೂ ಇರಬಹುದು. ಸೂತ್ರಭಾಷ್ಯದಲ್ಲಿ ಒಂದನೆಯ ಅಧ್ಯಾಯದ ಒಂದನೆಯ ಪಾದದ ನಾಲ್ಕನೆಯ ಸೂತ್ರದಲ್ಲಿ ಒಂದನೆಯ ವರ್ಣಕದಲ್ಲಿ ಪೂರ್ವಪಕ್ಷಿಗಳು ವಿಧಿಯ ಸಂಪರ್ಕವಿಲ್ಲದ್ದು ವೇದವೇ ಆಗಲಾರದು- ಎಂದು ವಾದಿಸಿರುತ್ತಾರೆ. ಜ್ಞಾನಕಾಂಡದಲ್ಲಿ ಹೇಳಿರುವದು ಉಪಾಸನಾವಿಧಿಗೆ ಶೇಷವಾದ ದೇವತೆಯನ್ನೊ, ಕರ್ತೃವನ್ನೊ

ಹೇಳಿದೆ - ಎಂದಿಟ್ಟುಕೊಂಡರೆ ಸಾಕಾಗಿದೆ- ಎಂದೂ ವಾದಿಸಿದ್ದಾರೆ. ಆ ವಾದಿಗಳೇ ಇವರೊ, ಅಥವಾ ಅವರೊಳಗಿನ ಒಂದು ಪ್ರಭೇದಕ್ಕೆ ಸೇರಿದವರೋ ತಿಳಿಯುವಂತಿಲ್ಲ. ಹೇಗೇ ಆಗಲಿ, ಜ್ಞಾನಕಾಂಡಕ್ಕೆ ಯಾವದಾದರೂ ಒಂದು ಸ್ವತಂತ್ರವಸ್ತುವನ್ನು ಹೇಳುವ ಕೃತ್ಯವಿರುವದಿಲ್ಲ. ಏಕೆಂದರೆ ಬರಿಯ ವಸ್ತುವನ್ನು ಹೇಳಿದರೆ ಮಾಡ ತಕ್ಕದ್ದು ಅಥವಾ ಬಿಡತಕ್ಕದ್ದು ಏನೂ ಇರುವದಿಲ್ಲವಾದ್ದರಿಂದ ವಸ್ತುಮಾತ್ರ ಕಥನವು ನಿಷ್ಫಲ. ವಸ್ತುವಾದದ್ದನ್ನು ಪ್ರತ್ಯಕ್ಷವೇ ಮುಂತಾದ ಪ್ರಮಾಣಾಂತರದಿಂದಲೇ ತಿಳಿಯಬಹುದಾದ್ದರಿಂದ ಅದಕ್ಕೆ ವೇದವು ಪ್ರಮಾಣವಾಗಲಾರದು- ಎಂದು ಕರ್ಮವಾದಿಗಳ ಮತ.

ಈ ಮತವನ್ನು ಭಾಷ್ಯಕಾರರು ಯುಕ್ತಿವಿರುದ್ಧವೆಂದು ತಳ್ಳಿಹಾಕಿರುತ್ತಾರೆ. ಕರ್ಮದಿಂದ ಆಗುವದೆಲ್ಲವೂ ಅನಿತ್ಯವೇ ಆಗಿರುವದರಿಂದ ಮೋಕ್ಷವು ಕರ್ಮದ ಫಲವಾದರೆ ಅದೂ ಅನಿತ್ಯವೇ ಆಗಬೇಕಾಗುತ್ತದೆ- ಎಂಬುದು ಸಿದ್ಧಾಂತಿಗಳ ಮುಖ್ಯವಾದ ಯುಕ್ತಿಯು.

ಇಲ್ಲಿ ಪೂರ್ವಪಕ್ಷಿಯು ಒಂದು ಯುಕ್ತಿಯನ್ನು ತನ್ನ ಪಕ್ಷಕ್ಕೆ ಪೋಷಕವಾಗಿ ಮುಂದೊಡ್ಡಿರುತ್ತಾನೆ. ಮೋಕ್ಷವು ಬಂಧದ ನಾಶವಷ್ಟೆ! ಆದ್ದರಿಂದ ಅದು ಪ್ರಧ್ವಂಸಾಭಾವದಂತೆ ನಿತ್ಯವಾಗಬಹುದಲ್ಲ ? ಎಂಬುದೇ ಆ ಯುಕ್ತಿಯು. ಅಭಾವವು ಪ್ರಾಗಭಾವ (ಕಾರ್ಯವು ಉಂಟಾಗುವ ಮುಂಚೆ ಇರುವ ಅಭಾವ) ಪ್ರಧ್ವಂಸಾಭಾವ (ವಸ್ತುವು ನಾಶವಾದ ಬಳಿಕ ಹುಟ್ಟುವ ಅಭಾವ) ಅನ್ಯೋನ್ಯಾಭಾವ (ಒಂದು ಮತ್ತೊಂದಲ್ಲದೆ ಇರುವದರಿಂದ ಒಂದರಲ್ಲಿರುವ ಮತ್ತೊಂದರ ಅಭಾವ) ಅಥವಾ ಒಂದು ಮತ್ತೊಂದರ ಅಭಾವವೇ ಆಗಿರುವದೆಂಬ ಅನ್ಯೋನ್ಯಾಭಾವ, ಅತ್ಯಂತಾಭಾವ (ತೀರ ಇಲ್ಲವೇ ಇಲ್ಲ- ಎಂಬ ಅಭಾವ) ಹೀಗೆ ನಾಲ್ಕು ಬಗೆಯ ಅಭಾವಗಳನ್ನು ತಾರ್ಕಿಕರು ಒಪ್ಪಿರುತ್ತಾರೆ. ಮೀಮಾಂಸಕರೂ ಈ ಅಭಾವಗಳನ್ನು ಒಪ್ಪಿರುತ್ತಾರೆ. ಅನ್ಯೋನ್ಯಾಭಾವದ ವಿಷಯಕ್ಕೆ ಅವರ ಮತವು ಸ್ವಲ್ಪ ಬೇರೆಯಾಗಿದೆ. ಏಕೆಂದರೆ ಒಂದು ವಸ್ತುವಿನ ಅಭಾವವೇ ಮತ್ತೊಂದು ವಸ್ತು - ಎಂದು ಅವರು ಹೇಳುತ್ತಾರೆ. ಹೇಗೇ ಆಗಲಿ, ಪ್ರಧ್ವಂಸಾಭಾವವು ಹುಟ್ಟಿದ ಮೇಲೆ ನಾಶವಾಗುವದೇ ಇಲ್ಲವಾದ್ದರಿಂದ ಮೋಕ್ಷವೂ ಹೀಗೆಯೇ ಕರ್ಮದಿಂದ ಹುಟ್ಟಿದರೂ ಎಂದೆಂದಿಗೂ ಇರಬಹುದು- ಎಂಬುದು ಪ್ರಕೃತ ಪೂರ್ವಪಕ್ಷಿಯ ವಾದ.

ಭಾಷ್ಯಕಾರರ ಅಭಿಪ್ರಾಯವು ಹೀಗಿದೆ : ಈ ಅಭ್ಯುಪಗಮವು ಸರಿಯೆಂದು ವಾದಕ್ಕಾಗಿ ಒಪ್ಪಿದರೂ ಮೋಕ್ಷವು ಸ್ವರ್ಗವೇ, ಸ್ವರ್ಗವೆಂದರೆ ನಿರಾಯಾಸವಾದ ಸುಖ ಎಂದೇ ಒಪ್ಪಿರುವದರಿಂದ ಕರ್ಮಾರಬ್ಧವಾದ ಮೋಕ್ಷಕ್ಕೆ ಪ್ರಧ್ವಂಸಾಭಾವವೆಂಬ ಅಭಾವವನ್ನು ದೃಷ್ಟಾಂತವನ್ನಾಗಿ ಕೊಡುವದಕ್ಕೆ ಆಗುವದಿಲ್ಲ- ಎಂದು ಪೂರ್ವಪಕ್ಷದ ಅಯುಕ್ತತೆಯನ್ನು ಹೊರಗೆಡಹಿರುತ್ತಾರೆ. ಆದರೆ ಪ್ರಧ್ವಂಸಾಭಾವವು ಹೊಸದಾಗಿ

ಉಂಟಾಗುತ್ತದೆ. ಆಮೇಲೆ ಅದು ನಾಶವಾಗುವದಿಲ್ಲವಾದ್ದರಿಂದ ಅದು ನಿತ್ಯ- ಎಂಬ ವಾದವೇ ಮೊದಲು ಸರಿಯಿಲ್ಲ- ಎಂಬ ಮತ್ತೊಂದು ಯುಕ್ತಿಯನ್ನೂ ಈ ವಾದದ ನಿವಾರಣೆಗೆ ಅವರು ಉಪಯೋಗಿಸಿಕೊಂಡಿರುತ್ತಾರೆ. ಅಭಾವವು ಹುಟ್ಟುತ್ತದೆ - ಎಂಬುದು ಸರಿಯೆ ? ಅಭಾವವು ಪ್ರಾಗಭಾವ- ಇತ್ಯಾದಿ ಪ್ರಭೇದಗಳುಳ್ಳದ್ದೆಂದು ಹೇಳುವದು ಸರಿಯೆ ? ಕನ್ನೈದಿಲೆ, ಕೆನ್ನೈದಿಲೆ- ಎಂಬಲ್ಲಿ ಕಪ್ಪು, ಕೆಂಪು ಮುಂತಾದ ವಿಶೇಷಣಗಳನ್ನು ಕೊಡುವಂತೆ ಅಭಾವಕ್ಕೂ ಮೊದಲಿಲ್ಲದ ಅಭಾವ, ಕೊನೆಯಿಲ್ಲದ ಅಭಾವ- ಮುಂತಾಗಿ ವಿಶೇಷಣಗಳನ್ನು ಕೊಡಬಹುದೆ ? ಎಂಬುದನ್ನು ಪರಿಶೀಲಿಸಿದರೆ 'ಭಾವ' ಎಂಬುದಕ್ಕೆ ಹೇಗೆ ಬೇರೆ ವಿಶೇಷಗಳಿಲ್ಲವೋ ಹಾಗೆಯೇ ಅಭಾವಕ್ಕೂ ವಿಶೇಷಗಳಿರುವದಿಲ್ಲ, ಘಟಭಾವ (ಗಡಿಗೆಯ ಇರವು) ಪಟಭಾವ (ಬಟ್ಟೆಯ ಇರವು) ನೀಲಭಾವ (ಕಪ್ಪಿನ ಇರವು) ಗಮನಭಾವ (ಹೋಗುವಿಕೆಯ ಇರವು) ಎಂದು ಎಷ್ಟು ದ್ರವ್ಯ - ಗುಣಕ್ರಿಯೆಗಳನ್ನು ಇರವಿಗೆ ವಿಶೇಷಣವಾಗಿ ಇಟ್ಟುಕೊಂಡು ಹೇಳಿದರೂ ಭಾವವು (ಇರವು) ಹೇಗೆ ದ್ರವ್ಯವಲ್ಲ, ಗುಣವಲ್ಲ, ಕ್ರಿಯೆಯೂ ಅಲ್ಲದೆ ಇರುವದೋ, ಆದರೂ ದ್ರವ್ಯಾದಿಗಳೆಂಬಂತೆ ವಿಕಲ್ಪಿಸುವರೋ ಹಾಗೆಯೇ ಅಭಾವವು ಪ್ರಾಗಭಾವ, ಪ್ರಧ್ವಂಸಾಭಾವ- ಎಂದು ಮುಂತಾಗಿ ವಿಕಲ್ಪಿಸುತ್ತಾರೆ ಎಂಬುದು ಒಂದು ಯುಕ್ತಿ. ಕನ್ನೈದಿಲೆ, ಕೆನ್ನೈದಿಲೆ- ಎಂದು ಮುಂತಾಗಿ ಭಾವಪದಾರ್ಥಕ್ಕೆ ವಿಶೇಷಣವನ್ನು ಕೊಡುವಂತೆ ಅಭಾವಕ್ಕೂ ಪ್ರಾಗಭಾವ, ಪ್ರಧ್ವಂಸಾಭಾವ- ಎಂದು ಮುಂತಾಗಿ ವಿಶೇಷಣವನ್ನು ಕೊಟ್ಟರೂ ಆ ವಿಶೇಷಣವೂ ಅಭಾವದಲ್ಲಿ ಯಾವ ವಿಶೇಷವನ್ನೂ ಉಂಟುಮಾಡಲಾರದು. ಅಭಾವವು ಅಭಾವವೇ ಆಗಿರುತ್ತದೆ- ಎಂಬಿದು ಇನ್ನೊಂದು ಯುಕ್ತಿಯು. ಅಭಾವಕ್ಕೆ ವಿಶೇಷಣವನ್ನು ಹಾಕಿ ಅಭಾವದಲ್ಲಿ ಒಳಭೇದಗಳನ್ನು ತೋರಿಸುವದಕ್ಕೆ ಆಗಲಾರದು- ಎಂಬುದನ್ನು ಗೀತಾಭಾಷ್ಯ (೧೮-೪೮) ದಲ್ಲಿಯೂ ತೋರಿಸಿರುತ್ತದೆ. 'ಒಂದರ ಅಭಾವ, ಎರಡರ ಅಭಾವ, ಎಲ್ಲದರ ಅಭಾವ, ಪ್ರಾಗಭಾವ, ಪ್ರಧ್ವಂಸಾಭಾವ, ಇತರೇತರಾಭಾವ, ಅನ್ಯೋನ್ಯಾಭಾವ- ಎಂದು ಅಭಾವದಲ್ಲಿ ಲಕ್ಷಣದಿಂದ ವಿಶೇಷವನ್ನು ತೋರಿಸುವದು ಯಾರಿಂದಲೂ ಶಕ್ಯವಲ್ಲ- ಎಂದು ಅಲ್ಲಿ ಭಾಷ್ಯಕಾರರು ಬರೆದಿರುತ್ತಾರೆ. ಸೂತ್ರಭಾಷ್ಯದಲ್ಲಿಯೂ (ವೇ. ಸೂ. ೨-೧-೧೮) ಬಂಜೆಯ ಮಗನು ಕಾರಕವ್ಯಾಪಾರವಾದ ಬಳಿಕ ಹುಟ್ಟುವದು ನಿಜವಾಗಿದ್ದರೆ ಕಾರ್ಯಾಭಾವವೂ ಹಾಗೆಯೇ ಹುಟ್ಟಬಹುದಾಗಿತ್ತು- ಎಂದು ಪ್ರಧ್ವಂಸಾಭಾವವನ್ನು ಬಂಜೆಯ ಮಗನಂತೆ ವಿಕಲ್ಪವು ; ಶಬ್ದಪ್ರಯೋಗವಿದ್ದರೂ ವಸ್ತುವಿಲ್ಲದ ಭಾವನೆ - ಎಂದು ತಿರಸ್ಕರಿಸಿರುತ್ತಾರೆ. ಅಂತೂ ಮೋಕ್ಷವು ಭಾವವೇ ಆಗಲಿ, ಅಭಾವವೇ ಆಗಲಿ - ಕರ್ಮದಿಂದ ಹುಟ್ಟುತ್ತದೆ - ಎಂಬುದು ಸರ್ವಥಾ ಅಯುಕ್ತವೆಂಬುದೇ ಸಿದ್ಧಾಂತವು. ಆದ್ದರಿಂದ ಕರ್ಮದಿಂದುಂಟಾಗುವ ಸ್ವರ್ಗವೇ ಮೋಕ್ಷ- ಎಂಬುವರ ಮತವೂ ಸರಿಯಾಗಿ ನಿಲ್ಲುವದಿಲ್ಲ.

ಬರಿಯ ಕರ್ಮದಿಂದ ಮೋಕ್ಷವುಂಟಾಗಲಾರದಾದರೂ ವಿದ್ಯಾಕರ್ಮಗಳ ಸಮುಚ್ಚಯದಿಂದ ಮೋಕ್ಷವಾಗಬಹುದು- ಎಂಬುದು **ಮೂರನೆಯ ವಾದ**. ಈ ಮತದವರು ಹೇಳುತ್ತಿದ್ದುದೇನೆಂದರೆ ವಿದ್ಯೆಯೆಂದರೆ ಉಪಾಸನೆ. ಬ್ರಹ್ಮೋಪಾಸನೆಯನ್ನೂ ಕರ್ಮವನ್ನೂ ಸೇರಿಸಿಕೊಂಡು ಅನುಷ್ಠಾನಮಾಡಿದರೆ ಮೋಕ್ಷವು ನಿತ್ಯವಾಗಿ ಆಗಬಹುದು. ಈ ಅನುಷ್ಠಾನವನ್ನು ಮಾಡುವಾತನು ನಿತ್ಯನಾಗಿರುವದರಿಂದ ಅವನ ಕರ್ಮೋಪಾಸನಗಳ ಫಲವಾದ ಮೋಕ್ಷವು ನಿತ್ಯವಾಗಿ ಆಗಬಹುದು.

ಈ ಮತವು ಸರಿಯಲ್ಲವೆಂಬುದಕ್ಕೆ ಹೊಸದಾಗಿ ಹೇಳಬೇಕಾದ ಯುಕ್ತಿಯೇನೂ ಬೇಕಿಲ್ಲವಾದರೂ ಕರ್ತೃವು ನಿತ್ಯನಾದರೆ ಕರ್ತೃವಿನ ಅನುಷ್ಠಾನದ ಫಲವೂ ನಿತ್ಯ- ಎಂಬ ಯುಕ್ತಿಯಲ್ಲಿ ಒಂದು ದೋಷವನ್ನು ತೋರಿಸಬೇಕಾಗುತ್ತದೆ. ಅದೇನೆಂದರೆ ಕರ್ತೃತ್ವವು ಕರ್ಮವನ್ನು ಮಾಡುವ ಆಯಾಸದ ದುಃಖವುಳ್ಳದ್ದು. ಕರ್ತೃತ್ವವು ಯಾವಾಗಲೂ ಇದ್ದುಕೊಂಡೇ ಇದ್ದರೆ ದುಃಖವೂ ಯಾವಾಗಲೂ ಇರುವದರಿಂದ ಮೋಕ್ಷಪ್ರಾಪ್ತಿಯೇ ಇಲ್ಲವಾಗುವದು. ಕರ್ತೃತ್ವವು ನಿಂತರೆ ಮೋಕ್ಷವು ಇಲ್ಲವಾಗಿಬಿಡುವದು. ಆದ್ದರಿಂದ ಕರ್ತೃವು ಮಾಡುವ ಯಾವ ಕರ್ಮದಿಂದಲೂ ನಿತ್ಯವಾದ ಮೋಕ್ಷವು ಪ್ರಾಪ್ತವಾಗಲಾರದು.

ಅಂತೂ ಹೀಗೆ ಕರ್ಮಗಳಿಂದ ಅಥವಾ ಉಪಾಸನೆಗಳಿಂದ ನಿತ್ಯವಾದ ಮೋಕ್ಷವು ದೊರಕುವದಿಲ್ಲವೆಂದಾಯಿತು. ಕರ್ಮಗಳಿಗೂ ಉಪಾಸನೆಗಳಿಗೂ ಬೇರೊಂದು ಫಲವನ್ನೇ ಕಲ್ಪಿಸಬೇಕೆಂದಾಯಿತು. ಆದ್ದರಿಂದ ಈ ಉಪನಿಷತ್ತಿನಲ್ಲಿ ಕರ್ಮ, ಉಪಾಸನೆ- ಇವೆರಡಕ್ಕಿಂತಲೂ ಬೇರೆಯಾದ ಬ್ರಹ್ಮಾತ್ಮಜ್ಞಾನವನ್ನೇ ಹೇಳಿರುತ್ತದೆ. ನಮ್ಮಗಳ ಆತ್ಮನು ಬ್ರಹ್ಮವೇ ಆಗಿರುತ್ತಾನೆ. ಅದನ್ನು ಅರಿಯದ್ದರಿಂದ ಆಗಿರುವ ತಪ್ಪುತಿಳಿವಳಿಕೆಯ ಫಲವಾದ ಕಾಮವೇ ಕರ್ಮದಲ್ಲಿ ತೊಡಗುವದಕ್ಕೆ ಕಾರಣವಾಗಿರುತ್ತದೆ. ಆ ಅವಿದ್ಯೆಯನ್ನು ಕಳೆಯುವ ಬ್ರಹ್ಮವಿದ್ಯೆಯೇ ಪರಮಪುರುಷಾರ್ಥಕ್ಕೆ ಕಾರಣವು- ಎಂಬರ್ಥದಲ್ಲಿಯೇ ಉಪನಿಷತ್ತಿನ ಪರಮತಾತ್ಪರ್ಯವಿದೆ- ಎಂಬುದು ಸಿದ್ಧಾಂತವು.

**ಉಪನಿಷತ್ತು** - ಎಂಬುದು ಬ್ರಹ್ಮವಿದ್ಯೆಯ ಹೆಸರು. ಆ ವಿದ್ಯೆಯನ್ನು ಸಂಪಾದಿಸಿಕೊಳ್ಳುವವರಿಗೆ ಗರ್ಭ, ಜನ್ಮ, ಜರಾಮರಣಾದಿ ದುಃಖಗಳು- ವಿದ್ಯೆಯಿಂದ ನಾಶವಾಗುವದರಿಂದ ವಿದ್ಯೆಗೆ ಈ ಹೆಸರು ಬಂದಿರುತ್ತದೆ. ಬ್ರಹ್ಮದ ಬಳಿಗೆ ಕರೆದುಕೊಂಡು ಹೋಗುವದರಿಂದಲೂ ಈ ವಿದ್ಯೆಗೆ "**ಉಪನಿಷತ್ತು**" ಎಂದು ಹೆಸರು.

--------

# ಶೀಕ್ಷಾವಲ್ಲಿ

**ಓಂ ॥ ಶಂ ನೋ ಮಿತ್ರಃ.... ..... ಅವತು ವಕ್ತಾರಮ್ । ॥೧॥**

**ಇಲ್ಲಿ ಉಪಾಸನೆಗಳನ್ನು ಮೊದಲು ಹೇಳಿರುವದೇಕೆ ?**

ತೈತ್ತಿರೀಯೋಪನಿಷತ್ತಿನಲ್ಲಿ ಮೂರು ವಿಭಾಗಗಳಿವೆ- ಎಂದು ಹೇಳಿದ್ದಾಗಿದೆ ಮೊದಲನೆಯದು ಶೀಕ್ಷಾವಲ್ಲಿ. ಇದರಲ್ಲಿ ಉಪಾಸನೆಗಳನ್ನು ಹೇಳಿರುತ್ತದೆ. ಆದ್ದರಿಂದಲೇ ಕೆಲವರು ಉಪನಿಷತ್ತು ಉಪಾಸನೆಯನ್ನೇ ತಾತ್ಪರ್ಯದಿಂದ ಹೇಳುವದಕ್ಕೆ ಬಂದಿದೆ- ಎಂದು ಭ್ರಮಿಸಿರುತ್ತಾರೆ. ಆದರೆ ಇದು ಸರಿಯಲ್ಲ. ಇಲ್ಲಿ ಉಪಾಸನೆಗಳನ್ನು ಹೇಳಿರುವದೇಕೆಂದರೆ ಬಾಹ್ಯಕರ್ಮಗಳಂತೆಯೇ ಉಪಾಸನೆಗಳೂ ಕರ್ಮರೂಪವಾಗಿಯೇ ಇರುತ್ತವೆಯಾದರೂ ಮಾನಸವಾಗಿರುವದರಿಂದ ಜ್ಞಾನಕ್ಕೆ ಸಮೀಪವಾಗಿರುತ್ತವೆ. ಬಾಹ್ಯಕರ್ಮಗಳಿಂದ ಚಿತ್ತಶುದ್ಧಿಯಾಗುವಂತೆ ಮಾನಸಕರ್ಮದಿಂದ ಅಂತರ್ಮುಖತೆಯುಂಟಾಗುತ್ತದೆ. ಯಾವ ಅಧಿಕಾರಿಗೆ ಚಿತ್ತದಲ್ಲಿ ಕಲ್ಮಷವಿರುವದಿಲ್ಲವೋ ಚಿತ್ತವನ್ನು ಏಕಾಗ್ರವಾಗಿ ಮಾಡಿಕೊಳ್ಳುವದಕ್ಕೆ ಬರುವದೋ ಅವನೇ ಬ್ರಹ್ಮಜ್ಞಾನಕ್ಕೆ ತಕ್ಕವನಾಗಿರುತ್ತಾನೆ. ಕರ್ಮಗಳಿಂದ ಆಯಾ ವರ್ಣಾಶ್ರಮದವರಿಗೆ ಆಯಾ ಫಲಗಳಾಗುವವಾದರೂ ಮುಮುಕ್ಷುಗಳಿಗೂ ಅವುಗಳಿಂದ ಫಲವುಂಟು ಹೀಗೆಯೇ ಉಪಾಸನೆಗಳಿಂದಲೂ ದೃಷ್ಟಾದೃಷ್ಟಫಲಗಳುಂಟಾಗುವವಾದರೂ ಮುಮುಕ್ಷುಗಳಿಗೂ ಅವುಗಳಿಂದ ಪ್ರಯೋಜನವುಂಟು. ಇದಲ್ಲದೆ ಉಪಾಸನೆಗಳಿಂದ ಆಯಾ ಫಲಗಳಲ್ಲದೆ ಮಧ್ಯಮಾಧಿಕಾರಿಗಳಾದ ಮುಮುಕ್ಷುಗಳಿಗೆ ಕ್ರಮಮುಕ್ತಿಯೆಂಬ ಫಲವೂ ಕೆಲವು ಉಪಾಸನೆಗಳಿಂದ ಆಗುವವು. ಆದ್ದರಿಂದಲೂ ಇಲ್ಲಿ ಉಪಾಸನೆಗಳನ್ನು ಹೇಳಿರುತ್ತದೆ.

ಎಲ್ಲಕ್ಕೂ ಮೊದಲು ಇಲ್ಲಿ ದೇವತೆಗಳನ್ನು ಪ್ರಾರ್ಥಿಸಿಕೊಂಡಿದೆ. ಇಲ್ಲಿರುವ ಪ್ರಾರ್ಥನಾವಾಕ್ಯಗಳ ಅರ್ಥವೇನೆಂದರೆ : ಪ್ರಾಣವೃತ್ತಿಗೆ ಅಭಿಮಾನಿಯಾದ ಮಿತ್ರನು ನಮಗೆ. ಸುಖವನ್ನುಂಟುಮಾಡಲಿ ! ಎಂದು ಮೊದಲು ಪ್ರಾರ್ಥಿಸಿದೆ. ಮಿತ್ರನು ಹಗಲಿಗೂ ಅಭಿಮಾನಿಯಾಗಿರುತ್ತಾನೆ. ಆದ್ದರಿಂದ ಮಿತ್ರನು ಹಗಲಿನಲ್ಲಿ ನನ್ನ ಪ್ರಾಣವೃತ್ತಿಗೆ ಸುಖವನ್ನುಂಟುಮಾಡಲಿ ! ಎಂದು ಒಟ್ಟರ್ಥ. ಹಾಗೆಯೇ ಅಪಾನವೃತ್ತಿಗೆ ಅಧಿದೇವತೆಯಾದ ವರುಣನು ರಾತ್ರಿಯಲ್ಲಿ ನನಗೆ ಸುಖವನ್ನುಂಟುಮಾಡಲಿ ಎಂದು ಎರಡನೆಯ ವಾಕ್ಯದಲ್ಲಿ ಪ್ರಾರ್ಥಿಸಿದೆ. ಕಣ್ಣಿಗೂ ಆದಿತ್ಯನಿಗೂ ಅಭಿಮಾನಿಯಾದ ಅರ್ಯಮನು ನನಗೆ ಸುಖವನ್ನುಂಟುಮಾಡಲಿ ! ಬಲಕ್ಕೂ ಮೋಡಗಳಿಗೂ ಅಭಿಮಾನಿಯಾದ ಇಂದ್ರನು ನಮಗೆ ಸುಖವನ್ನುಂಟುಮಾಡಲಿ ! ಈ ವಾಕ್ಯಗಳಲ್ಲಿ

ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಈ ಎಲ್ಲಕ್ಕೂ ಅಭಿಮಾನಿಯಾಗಿರುವ ದೇವತೆಗಳು ನಮಗೆ ಸುಖವನ್ನುಂಟುಮಾಡಲಿ ! ಎಂದು ಪ್ರಾರ್ಥನೆಮಾಡಿರುವ ಬ್ರಹ್ಮವಿದ್ಯೆಯನ್ನು ಶ್ರವಣಮಾಡುವದಕ್ಕೂ ನೆನಪಿನಲ್ಲಿಟ್ಟುಕೊಂಡು ಶಿಷ್ಯರಲ್ಲಿ ಅದನ್ನು ವಿನಿಯೋಗಮಾಡುವದಕ್ಕೂ ದೇವತೆಗಳು ನನಗೆ ಅನುಗ್ರಹಮಾಡಲಿ ! ಎಂಬ ಇಚ್ಛೆಯಿಂದ ಪಂಚಭೂತಗಳಿಗೂ ಭೌತಿಕಪದಾರ್ಥಗಳಿಗೂ ಆಧ್ಯಾತ್ಮಿಕವಾಗಿರುವ ನಮ್ಮ ಕರಣಗಳಿಗೂ ಆಧಿದೈವಿಕವಾಗಿರುವ ಆದಿತ್ಯಾದಿಗಳಿಗೂ ಅಭಿಮಾನಿಗಳಾಗಿರುವ ದೇವತೆಗಳೆಲ್ಲ ನನಗೆ ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಂಡು ಅದನ್ನು ಶಿಷ್ಯರಿಗೆ ವಿನಿಯೋಗಮಾಡುವದಕ್ಕೆ ಅನುಕೂಲರಾಗಲಿ ! ಎಂಬ ಹಾರ್ದೈಕೆಯಿಂದ ಸ್ತುತಿಸಲಾಗಿದೆ.

ದೇವತೆಗಳು ತಮ್ಮನ್ನು ಆರಾಧಿಸುವ ಭಕ್ತರಿಗೆ ವಿದ್ಯಾಸಂಪಾದನೆಗೆ ಅನುಕೂಲ್ಯಗಳನ್ನು ಕಲ್ಪಿಸುತ್ತಾರೆ. ಆದರೆ ಯಾರು ಅವರನ್ನು ಉಪೇಕ್ಷಿಸುತ್ತಾರೋ ಅವರಿಗೆ ಎಡರುಗಳನ್ನು ತಂದೊಡ್ಡುತ್ತಾರೆ- ಎಂಬುದು ಆಸ್ತಿಕರಾದ ಆರ್ಯರ ನಂಬಿಕೆಯಾಗಿರುತ್ತದೆ.

## ಅಪರಬ್ರಹ್ಮವಾದ ಪ್ರಾಣನ ಪ್ರಾರ್ಥನೆ

ಈವರೆಗೆ ದೇವತೆಗಳ ಪ್ರಾರ್ಥನೆಯಾಯಿತು. ಈಗ ನಮ್ಮ ಶರೀರದೊಳಗೆ ಇರುವ ಕರಣಗಳ ಅಭಿಮಾನಿಗಳನ್ನು ಪ್ರಾರ್ಥಿಸಲಾಗುವದು. ಪ್ರಾಣನು ನಮ್ಮ ಕಾರ್ಯಕರಣಗಳಲ್ಲಾಗುತ್ತಿರುವ ಕ್ರಿಯೆಗಳ ಅಭಿಮಾನಿಯಾದ ಸಮಷ್ಟಿಸೂತ್ರಾತ್ಮನು. ಇವನಿಗೆ ಆಧಿದೈವಿಕದೃಷ್ಟಿಯಿಂದ ವಾಯುವೆಂದೂ, ಆಧ್ಯಾತ್ಮಿಕದೃಷ್ಟಿಯಿಂದ ಪ್ರಾಣಾತ್ಮನೆಂದೂ ಹೆಸರು. ಸಮಷ್ಟಿಸ್ಥೂಲೋಪಾಧಿಯುಳ್ಳ ಆತ್ಮನನ್ನು ವಿರಾಟ್‌ಪುರುಷ, ಪ್ರಜಾಪತಿ- ಎಂದೂ ಸೂಕ್ಷ್ಮೋಪಾಧಿಯುಳ್ಳ ಅದೇ ಪರಮಾತ್ಮನನ್ನು ಕ್ರಿಯಾಶಕ್ತಿ ಪ್ರಧಾನವಾಗಿ ವಾಯು, ಪ್ರಾಣ, ಸೂತ್ರಾತ್ಮನೆಂದೂ ಕರೆಯಲಾಗಿದೆ. ಇನ್ನು ಜ್ಞಾನಶಕ್ತಿ ಪ್ರಧಾನವಾಗಿ ಹಿರಣ್ಯಗರ್ಭನೆಂದೂ ಕರೆಯುತ್ತಾರೆ. ಯಾವ ಉಪಾಧಿಯೂ ಇಲ್ಲದ ಪರಿಶುದ್ಧನಾದ ಅದ್ವಿತೀಯಪರಮಾತ್ಮನನ್ನು ಪರಬ್ರಹ್ಮವೆನ್ನುವರು. ಹಿರಣ್ಯಗರ್ಭ ಅಥವಾ ಪ್ರಾಣನನ್ನು ಅಪರಬ್ರಹ್ಮವೆಂದೂ ಕರೆಯುತ್ತಾರೆ. ಈ ವಿಷಯವನ್ನು ಮುಂದೆ ಉಪಾಸನೆಯ ವಿಚಾರದಲ್ಲಿ ವಿವರಿಸಲಾಗುವದು. ಪ್ರಕೃತದಲ್ಲಿ ಸರ್ವಕ್ರಿಯೆಗಳೂ ಕ್ರಿಯಾಫಲಗಳೂ ಯಾವನ ಅಧೀನವಾಗಿರುವವೋ ಆ ವಾಯು ಅಥವಾ ಪ್ರಾಣನ ಸ್ತುತಿಯನ್ನು ಇಲ್ಲಿ ಹೇಳಿ ನಮಸ್ಕರಿಸಲಾಗಿದೆ. ಈ ಭಾಗದ ಅಭಿಪ್ರಾಯವು ಹೀಗಿದೆ :-

''ಎಲೈ ವಾಯುರೂಪಿಯಾದ ಬ್ರಹ್ಮನೆ, ನಿನಗೆ ನಮಸ್ಕಾರ'' ಹೀಗೆಂದು ಹೇಳಿ ಅದೇ ವಾಯುವನ್ನೇ ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ನಮಸ್ಕರಿಸಿರುತ್ತದೆ.

ವಾಯುವು ಸಮಷ್ಟಿರೂಪಿಯಾಗಿ ಪರೋಕ್ಷನೂ ಪ್ರಾಣರೂಪದಿಂದ ಪ್ರತಿಯೊಬ್ಬನಲ್ಲಿಯೂ ಪ್ರತ್ಯಕ್ಷನೂ ಆಗಿರುತ್ತಾನೆ.

ಪ್ರಾಣರೂಪದಿಂದ ಪ್ರತ್ಯಕ್ಷರೂಪನಾಗಿರುವ ವಾಯುವು ಚಕ್ಷುರಾದೀಂದ್ರಿಯಗಳಿಗೆ ಹೋಲಿಸಿದರೆ ಇನ್ನೂ ಹತ್ತಿರವಿರುವದರಿಂದ ''ನೀನೇ ಪ್ರತ್ಯಕ್ಷಬ್ರಹ್ಮನು'' ಎಂದು ಅವನನ್ನು ಸ್ತುತಿಸಿರುತ್ತದೆ. ಪರಬ್ರಹ್ಮವು ನಮ್ಮೆಲ್ಲರಿಗೂ ಮುಖ್ಯವಾದ ಆತ್ಮನೇ ಆಗಿರುತ್ತದೆಯಾದರೂ ಜನರಲ್ಲಿ ದೇಹೇಂದ್ರಿಯಗಳಲ್ಲಿ ಆತ್ಮಬುದ್ಧಿಯುಳ್ಳವರು ಕೆಲವರು; ಅವುಗಳಿಗಿಂತ ಒಳಗಿನ ಪ್ರಾಣದಲ್ಲಿ ಆತ್ಮಬುದ್ಧಿಯುಳ್ಳವರು ಮತ್ತೆ ಕೆಲವರು; ಆದ್ದರಿಂದಲೇ ದೇಹೇಂದ್ರಿಯಾದಿಗಳಲ್ಲಿ ಆತ್ಮಬುದ್ಧಿಯನ್ನು ತಪ್ಪಿಸುವದಕ್ಕಾಗಿ ವೇದದ ಬ್ರಾಹ್ಮಣಭಾಗದಲ್ಲಿ ಪ್ರಾಣನನ್ನೇ ನಮ್ಮ ಆತ್ಮನೆಂದು ಅಧ್ಯಾರೋಪದೃಷ್ಟಿಯಿಂದ ಹೇಳಿರುತ್ತದೆ. ಅಪರಬ್ರಹ್ಮವು ಕ್ರಿಯಾಶಕ್ತಿಪ್ರಧಾನವಾಗಿ ಪ್ರಾಣನೆಂದೂ ಸೂತ್ರಾತ್ಮನೆಂದೂ ಉಕ್ತನಾಗಿರುತ್ತಾನೆ. ಬ್ರಹ್ಮಾಂಡದಲ್ಲಿ ಬ್ರಹ್ಮದ ಕ್ರಿಯಾಶಕ್ತಿಯ ವಿಭೂತಿಯು ತೋರಿಕೊಳ್ಳುತ್ತಿರುವದರಿಂದ ಕ್ರಿಯಾಶಕ್ತಿಪ್ರಧಾನವಾದ ವಾಯುವನ್ನೇ ಪ್ರತ್ಯಕ್ಷಬ್ರಹ್ಮವೆಂದು ಕರೆಯಬಹುದಾಗಿರುತ್ತದೆ. ಆದ್ದರಿಂದ ಮುಮುಕ್ಷುವಾದವನು ಕ್ರಿಯಾಶಕ್ತಿ ಪ್ರಧಾನವಾದ ವಾಯುವನ್ನು ಬ್ರಹ್ಮವೆಂದೇ ಭಾವಿಸಬೇಕು.

'ಶಾಸ್ತ್ರದಲ್ಲಿ ಹೇಳಿರುವದನ್ನು ನಾನು ಮಾಡುವೆನು' ಎಂಬ ಬುದ್ಧಿಯಿಂದ, ಯಾವದನ್ನು ನಿಶ್ಚಯಿಸುವೆವೋ ಅದಕ್ಕೆ 'ಋತ'ವೆಂದು ಹೆಸರು. ಪ್ರಕೃತಿಯು ಮನುಷ್ಯನನ್ನು ರಾಗದ್ವೇಷಪುರಃಸರವಾಗಿಯೇ ಇಂದ್ರಿಯಾರ್ಥಗಳಲ್ಲಿ ತೊಡಗಿಸುತ್ತಿರುವದರಿಂದ 'ಇದು ಬೇಕು, ಇದು ಬೇಡ' ಎಂದು ಪ್ರಕೃತಿವಶರಾಗಿಯೇ ಜನರು ಕಾರ್ಯಾಕಾರ್ಯಗಳನ್ನು ನಿಶ್ಚಯಿಸುವರು. ಆದರೆ ರಾಗದ್ವೇಷಗಳು ಎದ್ದುಕೊಂಡಾಗ ಅವುಗಳನ್ನು ಪ್ರತಿಪಕ್ಷಭಾವನೆಯಿಂದ ಬಿಗಿಹಿಡಿದು ಶಾಸ್ತ್ರಶ್ರದ್ಧೆಯಿಂದ ಶಾಸ್ತ್ರವು ''ಮಾಡು-ಎಂದಿರುವದನ್ನು ಮಾತ್ರವೇ ಮಾಡುವೆನು, ಬೇಡವೆಂದಿರುವದನ್ನು ಬಿಟ್ಟುಬಿಡುವೆನು'' ಎಂದು ಮಾಡಿಕೊಳ್ಳುವ ನಿಶ್ಚಯಕ್ಕೆ 'ಋತ'ವೆಂದು ಹೆಸರು. ಆ ನಿಶ್ಚಯಕ್ಕನುಸಾರವಾಗಿ ನಡೆದುಕೊಳ್ಳುವದೇ 'ಸತ್ಯ'ವೆನಿಸುತ್ತದೆ. ಈ ಋತಸತ್ಯಗಳೆರಡೂ ಕ್ರಿಯಾಶಕ್ತಿಪ್ರಧಾನವಾದ ವಾಯುರೂಪಿ ಬ್ರಹ್ಮಕ್ಕೇ ಅಧೀನವಾಗಿರುವದರಿಂದ ''ವಾಯುವೆ, ನೀನೇ ಋತ, ನೀನೇ ಸತ್ಯ''- ಎನ್ನುತ್ತೇನೆ- ಎಂದು ಸಾಧಕನು ಮಾಡಿರುವ ಸ್ತುತಿಯನ್ನು ವರ್ಣಿಸಿರುತ್ತದೆ.

ಮುಂದಿನ ಭಾಗದಲ್ಲಿ''ಆ ವಾಯುರೂಪಿಯಾದ ಬ್ರಹ್ಮವು ನನ್ನನ್ನು ಕಾಪಾಡಲಿ; ನನಗೆ ಬ್ರಹ್ಮವಿದ್ಯೆಯನ್ನು ಗ್ರಹಿಸುವಂಥ ಗ್ರಹಣಶಕ್ತಿಯನ್ನು ಕೊಡಲಿ ! ಇದರಂತೆ ನನಗೆ ಉಪದೇಶವನ್ನು ಕೊಡುವ ಗುರುವಿಗೆ ವಕ್ತೃತ್ವಶಕ್ತಿಯನ್ನು ಕೊಟ್ಟು

ಅವರನ್ನು ಅನುಗ್ರಹಿಸಲಿ ! ಎಂದು ಪ್ರಾರ್ಥಿಸಿರುತ್ತದೆ. ಕಾಪಾಡಲಿ- ಎಂದು ಎರಡು ಸಲ ಹೇಳಿರುವದು ಆದರವನ್ನು ಸೂಚಿಸುವದಕ್ಕೆ ಎಂದು ತಿಳಿಯಬೇಕು. ''ಓಂ ಶಾಂತಿಃ'' ಎಂದು ಪ್ರಣವೋಚ್ಚಾರಣೆಯ ಪೂರ್ವಕವಾಗಿ ಮೂರು ಸಲ ಶಾಂತಿಯನ್ನು ಹೇಳಿರುವದೇಕೆಂದರೆ : ಬ್ರಹ್ಮವಿದ್ಯೆಯ ಪ್ರಾಪ್ತಿಗೆ ಆಧ್ಯಾತ್ಮಿಕ (ದೇಹದೊಳಗೆ ಆಗುವವು) ಆಧಿಭೌತಿಕ (ನಮ್ಮ ಹೊರಗೆ ಆಗತಕ್ಕವು) ಆಧಿದೈವಿಕ (ಮಿಂಚು, ಗುಡುಗು, ಅತಿವೃಷ್ಟಿ, ಅನಾವೃಷ್ಟಿ - ಮುಂತಾದವುಗಳಿಂದಾಗುವ ದೈವಿಕವಿಘ್ನಗಳು) ಈ ಮೂರು ವಿಧವಾದ ವಿಘ್ನಗಳೂ ಶಾಂತವಾಗಲಿ - ಎಂಬ ಉದ್ದೇಶದಿಂದ ಕಳಕಳಿಯಿಂದ ಪಾರ್ಥಿಸಲಾಗಿದೆ.

ಅಂತೂ ಈ ಒಂದನೆಯ ಅನುವಾಕದಲ್ಲಿ ಹೇಳಿರುವ ಒಟ್ಟರ್ಥವೇನೆಂದರೆ : ಬ್ರಹ್ಮವಿದ್ಯೆಯನ್ನು ಪಡೆಯಬೇಕೆಂದಿರುವವನು ತನ್ನ ಶರೀರವನ್ನೂ ಇಂದ್ರಿಗಳನ್ನೂ ಶುಚಿಯಾಗಿಟ್ಟುಕೊಳ್ಳಬೇಕು. ಬ್ರಹ್ಮವು ತನ್ನ ಆತ್ಮನೇ ಆಗಿರುವದರಿಂದ ಅದರಲ್ಲಿಯೇ ಮನಸ್ಸು ನಿಲ್ಲಬೇಕು. ಹಾಗೆ ನಿಂತರೇ ಬ್ರಹ್ಮವಿದ್ಯೆಯನ್ನು ನಿರ್ವಿಘ್ನವಾಗಿ ಹೇಳಿಕೊಡುವದಕ್ಕೆ ಗುರುವು ಸಮರ್ಥನಾಗುತ್ತಾನೆ. ಮೊಟ್ಟಮೊದಲು ನೇರಾಗಿ ಸಾಕ್ಷಾತ್ ಪರಬ್ರಹ್ಮದಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವದಕ್ಕೆ ಆಗದವರು ಒಳಗಿರುವ ಪ್ರಾಣರೂಪವಾಗಿರುವ ಅಪರಬ್ರಹ್ಮದಲ್ಲಿಯೇ ಮನಸ್ಸಿಡಬೇಕು. ನಿರ್ವಿಘ್ನವಾಗಿ ಈ ಕಾರ್ಯವನ್ನು ಸಾಗಿಸಿಕೊಡಬೇಕೆಂದು ಆ ಬ್ರಹ್ಮವನ್ನೇ ಪ್ರಾರ್ಥಿಸಿಕೊಳ್ಳಬೇಕು.

## ಶೀಕ್ಷಾಧ್ಯಾಯ

**ಓಂ॥ ಶೀಕ್ಷಾಂ ವ್ಯಾಖ್ಯಾಸ್ಯಾಮಃ ........... ಶೀಕ್ಷಾಧ್ಯಾಯಃ ॥೨॥**

ಉಪನಿಷತ್ತಿಗೆ ಅರ್ಥವೇ ಮುಖ್ಯವಾದರೂ ಅಧ್ಯಯನವನ್ನು ಮಾಡುವ ಅಧಿಕಾರಿಗಳು ಗ್ರಂಥವನ್ನು ಪ್ರಯತ್ನಪೂರ್ವಕವಾಗಿ ಪಠಿಸಬೇಕು. ಅದಕ್ಕಾಗಿ ಈ ಶೀಕ್ಷಾಧ್ಯಾಯವನ್ನು ಆರಂಭಿಸಿರುತ್ತದೆ. ಶೀಕ್ಷೆ ಎಂದರೆ ವರ್ಣವೇ ಮುಂತಾದವುಗಳನ್ನು ಉಚ್ಚಾರಣಮಾಡುವ ಶಾಸ್ತ್ರವು. ಅಥವಾ ಶಿಕ್ಷೆ ಎಂದರೆ ಮುಂದೆ ಹೇಳುವ ವರ್ಣಾದಿಗಳು 'ಶಿಕ್ಷಾ' ಎಂಬ ಮಾತನ್ನೇ ಶೀಕ್ಷಾ- ಎಂದು ಹೇಳಿರುವದು ವೈದಿಕ ಪ್ರಯೋಗವು. ಅದನ್ನು ವ್ಯಾಖ್ಯಾನಮಾಡಲಾಗುತ್ತದೆ- ಎಂದರೆ ಸ್ಪಷ್ಟವಾಗಿ ಹೇಳಲಾಗುವದು. ಅಕಾರವೇ ಮುಂತಾದ ವರ್ಣಗಳು, ಉದಾತ್ತಾನುದಾತ್ತಸ್ವರಿತಗಳೆಂಬ ಸ್ವರಗಳು, ಹ್ರಸ್ವದೀರ್ಘಾದಿಮಾತ್ರೆಗಳು, ಬಲ- ಎಂದರೆ ಉಚ್ಚಾರಣೆಗೆ ಬೇಕಾದ ಆಭ್ಯಂತರಾದಿಪ್ರಯತ್ನಗಳು, ಸಾಮ - ಎಂದರೆ ವರ್ಣವನ್ನು ವೈಷಮ್ಯವಿಲ್ಲದೆ ಉಚ್ಚರಿಸುವದು, ಸಂತಾನ - ಎಂದರೆ ಸಂಹಿತೆ - ಇವುಗಳನ್ನು ಗುರುಮುಖದಿಂದ ಅರಿತು

ಕೊಂಡು ಅಧಿಕಾರಿಯಾದವನು ಯಥಾವತ್ತಾಗಿ ಉಚ್ಚರಿಸಬೇಕು. ಮಂತ್ರವನ್ನು ಸ್ವರವರ್ಣಲೋಪವಿಲ್ಲದೆ ಉಚ್ಚರಿಸಿದರೇ ಅದರ ನಿಜವಾದ ಅರ್ಥವಾಗುತ್ತದೆ.

ವೇದಮಂತ್ರಗಳ ಉಚ್ಚಾರಣೆಯಲ್ಲಿ ಸ್ವರಗಳನ್ನು ತಪ್ಪಾಗಿ ಉಚ್ಚರಿಸಿದರೆ ಆ ಕರ್ಮವು ವಿಧಿವತ್ತೆನಿಸಲಾರದು ; ಮತ್ತು ಯಜಮಾನನಿಗೆ ತೊಂದರೆಯೂ ಆಗುತ್ತದೆ. ''ಇಂದ್ರಶತ್ರು'' ಎಂಬ ಶಬ್ದವನ್ನು ತಪ್ಪಾಗಿ ಸ್ವರವ್ಯತ್ಯಾಸದಿಂದ ಉಚ್ಚರಿಸಿದ್ದರಿಂದ 'ಇಂದ್ರನ ಶತ್ರು' ಎಂಬ ವಿವಕ್ಷಿತಾರ್ಥವನ್ನು ಕೊಡದೆ 'ಇಂದ್ರನೇ ಶತ್ರುವಾಗಿ ಯಾವನಿಗೆ ಆಗುವನೋ ಆತನು'- ಎಂಬರ್ಥವನ್ನು ಕೊಟ್ಟು, ಅನರ್ಥವನ್ನುಂಟು ಮಾಡಿದಂತೆ ಮಂತ್ರವೇ ವಾಗ್ವಜ್ರಾಯುಧವಾಗುವದು- ಎಂದು ಬಲ್ಲವರು ಹೇಳುವರು. ಆದ್ದರಿಂದ ವೇದವಾಕ್ಯಗಳನ್ನು ಪಠಿಸುವಾಗ ಸ್ವರಾದಿಗಳ ಜ್ಞಾನವನ್ನು ಸಂಪಾದಿಸಿಕೊಂಡೇ ಉಚ್ಚರಿಸಬೇಕು.

**ಓಂ ॥ ಸಹ ನೌ ಯಶಃ । ಸಹ ನೌ ಬ್ರಹ್ಮವರ್ಚಸಮ್ ....... ಲೋಕೇನ ॥ ೩-೬ ॥**

ಇನ್ನು ಈ ಸಂಹಿತೆಗಳ ಉಪಾಸನೆಯನ್ನು ಹೇಳಲಾಗುತ್ತದೆ. ಈ ಉಪಾಸನೆಗಳಿಂದ ಆಗಬೇಕೆಂದು ಬಯಸುವ ಯಶಸ್ಸು ಶಿಷ್ಯಾಚಾರ್ಯರಿಬ್ಬರಿಗೂ ಆಗಲಿ ! ಅದರಿಂದಾಗುವ ಬ್ರಹ್ಮವರ್ಚಸ್ಸೆಂಬ ತೇಜಸ್ಸು, ನಮ್ಮಿಬ್ಬರಿಗೂ ಆಗಲಿ ! ಎಂದು ಶಿಷ್ಯನು ಪ್ರಾರ್ಥಿಸಿಕೊಳ್ಳಬೇಕು. ಆಚಾರ್ಯನು ಮೊದಲೇ ಕೃತಾರ್ಥನಾಗಿರುವದರಿಂದ ಈ ಪ್ರಾರ್ಥನೆಯನ್ನು ಅವನೇನೂ ಮಾಡತಕ್ಕ ಅವಶ್ಯಕತೆಯಿರುವದಿಲ್ಲ. ಅಧ್ಯಯನಮಾಡಿದ ಬಳಿಕ ಇದುವರೆಗೆ ಗ್ರಂಥಭಾವನೆಯಿಂದಲೇ ಭಾವಿತವಾಗಿರುವ ಬುದ್ಧಿಯನ್ನು ತಟ್ಟನೆ ಅರ್ಥಜ್ಞಾನದ ಕಡೆಗೆ ತಿರುಗಿಸುವದಕ್ಕೆ ಕಷ್ಟವಾಗಿರುವದರಿಂದ ಸಂಹಿತಾವಿಷಯವಾದ ಗ್ರಂಥವಿಷಯಕವಾದ ಉಪಾಸನೆಯನ್ನೇ ವಿವರಿಸುವೆವು- ಎಂದು ಋಷಿಯು ಹೇಳಿರುತ್ತಾನೆ. ಈ ಉಪಾಸನೆಗಳನ್ನು (೧) ಅಧಿಲೋಕ (೨) ಅಧಿಜ್ಯೌತಿಷ (೩) ಅಧಿವಿದ್ಯಾ (೪) ಅಧಿಪ್ರಜಾ (೫) ಅಧ್ಯಾತ್ಮ- ಎಂಬ ಐದು ವಿಷಯಗಳನ್ನಾಶ್ರಯಿಸಿ ವಿಧಿಸಲಾಗುವದು. ಇವುಗಳು ಲೋಕವೇ ಮುಂತಾದ ಮಹಾವಸ್ತುಗಳನ್ನು ಕುರಿತು ವಿಹಿತವಾಗಿರುವದರಿಂದಲೂ ಸಂಹಿತೆಯನ್ನು ಕುರಿತು ವಿಹಿತವಾಗಿರುವದರಿಂದಲೂ 'ಇವಕ್ಕೆ ಮಹಾಸಂಹಿತೆಗಳು' ಎಂಬ ಹೆಸರನ್ನು ಕೊಟ್ಟಿರುತ್ತಾರೆ.

ಈ ಐದು ಮಹಾಸಂಹಿತೋಪಾಸನೆಗಳೊಳಗೆ ಮೊದಲು **ಅಧಿಲೋಕ**ವಾಗಿ ಹೇಳಲಾಗುವದು. ಸಂಹಿತೆಯ ಪೂರ್ವವರ್ಣದಲ್ಲಿ **ಪೃಥಿವೀ**ದೃಷ್ಟಿಯನ್ನು ಮಾಡಬೇಕು, ಉತ್ತರವರ್ಣದಲ್ಲಿ **ದ್ಯುಲೋಕ**ದೃಷ್ಟಿಯನ್ನು ಮಾಡಬೇಕು. **ಅಂತರಿಕ್ಷ** ಲೋಕವೇ ಸಂಧಿ - ಎಂದರೆ ಈ ವರ್ಣಗಳ ಸಂಧಿಯಲ್ಲಿ **ಆಕಾಶ**ವೆಂಬ ದೃಷ್ಟಿಯನ್ನು

ಮಾಡಬೇಕು. ಇವನ್ನು ಕೂಡಿಸುವ ಸಾಧನವು ಎಂದರೆ ಯತ್ನವಿಶೇಷವು ವಾಯು ಎಂದು ಉಪಾಸನೆಮಾಡಬೇಕು. ಹೀಗೆ ಸಂಹಿತೆಯ ಪೂರ್ವೋತ್ತರವರ್ಣಗಳು, ಅವುಗಳ ಸಂಧಿ, ಸಂಧಾನಯತ್ನ - ಇವುಗಳಲ್ಲಿ ಲೋಕದೃಷ್ಟಿಯನ್ನು ಮಾಡಬೇಕು. ಇದರಂತೆಯೇ **ಅಧಿಜ್ಯೌತಿಷವಾದ** ಉಪಾಸನೆಯನ್ನು ಮಾಡಬೇಕು. ಪೂರ್ವವರ್ಣವೇ ಅಗ್ನಿ. ಉತ್ತರವರ್ಣವೇ ಆದಿತ್ಯ. ಸಂಧಿಯೇ ಅಪ್ಪು. ಸಂಧಾನವೇ ಮಿಂಚು. ಇನ್ನು **ಅಧಿವಿದ್ಯೆ**ಯ ಉಪಾಸನೆಯು ಹೀಗೆ ಇದೆ. ಪೂರ್ವವರ್ಣವೇ ಆಚಾರ್ಯನು. ಉತ್ತರವರ್ಣವೇ ಶಿಷ್ಯನು, ಸಂಧಿಯೇ ವಿದ್ಯೆ. ಸಂಧಾನವೇ ಪ್ರವಚನವು. ಇದರಂತೆ **ಅಧಿಪ್ರಜೋಪಾಸನೆ**ಯು ಹೀಗಿದೆ. ಪೂರ್ವವರ್ಣವೇ ತಾಯಿ, ಉತ್ತರವರ್ಣವೇ ತಂದೆ. ಸಂಧಿಯೇ ಪ್ರಜೆ, ಸಂಧಾನವೇ ಪ್ರಜನನಕ್ರಿಯೆ. ಇನ್ನು ಆಧ್ಯಾತ್ಮವು, ಪೂರ್ವವರ್ಣವೇ ಕೆಳದವಡೆ, ಉತ್ತರವರ್ಣವೇ ಮೇಲುದವಡೆ, ಸಂಧಿಯೇ ವಾಕ್ಕು, ಸಂಧಾನವೇ ನಾಲಿಗೆ.

ಇಲ್ಲಿ ವೇದಾಧ್ಯಯನವನ್ನು ಮಾಡುವವನು ವೇದದ ಸಂಹಿತೆಗಳಲ್ಲಿ ಅಧಿಲೋಕವೇ ಮುಂತಾದ ಉತ್ತಮವಾದ ಭಾವನೆಯನ್ನು ಮಾಡಬೇಕು, ವೇದವು ಸರ್ವೋತ್ತಮವಾದ ವಿಷಯವನ್ನೇ ಪ್ರತಿಪಾದಿಸುತ್ತದೆ - ಎಂಬ ಗೌರವಬುದ್ಧಿಯನ್ನು ಉಂಟುಮಾಡುವದು. ವೇದವು ಮಹಾವಿಷಯಗಳನ್ನು ತಿಳಿಯಿಸಿಕೊಡತಕ್ಕದ್ದು. ಅನೇಕ ವಿದ್ಯಾಸ್ಥಾನಗಳೂ ಇದರ ಅರ್ಥವನ್ನು ತಿಳಿಯಿಸಿಕೊಡುವದಕ್ಕೆಂದು ಹೊರಟಿರುತ್ತವೆ. ಇದರ ವಿಚಾರದಿಂದ ನನಗೆ ಸಕಲಪುರುಷಾರ್ಥಗಳೂ ಲಭಿಸುವವು- ಎಂಬ ಪೂಜ್ಯಬುದ್ಧಿಯುಂಟಾಗುವದು. ಮುಂದೆ ವೇದದ ಅರ್ಥವಿಚಾರವನ್ನು ಮಾಡಿದಂತೆಲ್ಲ ಕರ್ಮ, ಉಪಾಸನೆ, ಜ್ಞಾನ- ಎಂಬ ಮೂರು ವಿಷಯಗಳಲ್ಲಿಯೂ ಅದರಿಂದ ಪ್ರವೇಶವಾಗುವದು. ಸದ್ಯಕ್ಕೆ ಉಪಾಸನೆಗಳನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುವವನಿಗೆ ಸತ್ಪ್ರಜೆ, ಸತ್ಪಶುಗಳು, ಬ್ರಹ್ಮವರ್ಚಸ್ಸು, ಸತ್ಪ್ರಧಾನವಾದ ಬಲ, ಜ್ಞಾನ- ಎಂಬ ದೃಷ್ಟಫಲಗಳೂ ಆಗುವವು. ಕಡೆಗೆ ಅದೃಷ್ಟಫಲವೆಂಬ ಸ್ವರ್ಗಲೋಕವೂ ದೊರಕುವದು.

ವೇದಾಧ್ಯಯನದಿಂದಲೂ ಕೆಲವು ಮಹಾಸಂಹಿತೆಗಳ ಉಪಾಸನೆಯಿಂದಲೂ ಇಂಥ ಸತ್ಫಲವು ಉಂಟಾಗುವದೆಂಬುದು ಹೇಗೆ ? ಎಂದು ಶಂಕಿಸಬಾರದು. ಲೋಕದಲ್ಲಿ ಸಾಮಾನ್ಯಕರ್ಮಗಳನ್ನು ಮಾಡುವಾಗಲೂ ಭಾವನೆಗೆ ತಕ್ಕಂತೆ ಫಲವಾಗುವದು ಕಂಡುಬರುತ್ತದೆ. ಉಪಾಸನೆ - ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಬೇರೆ ಭಾವನೆಗಳು ನಡುವೆಬಾರದಂತೆ ವಿಹಿತವಾದ ಭಾವನೆಯನ್ನೇ ಶಾಸ್ತ್ರೋಕ್ತವಸ್ತುವಿನಲ್ಲಿ ಸತತವಾಗಿ ಮಾಡುತ್ತಿರುವದು, ಗುರುವನ್ನು ಉಪಾಸನೆಮಾಡುವುದು, ರಾಜನನ್ನು

ಉಪಾಸನೆಮಾಡುವದು, ಅವರವರ ಪ್ರಸಾದಕ್ಕೆ ಹೇಗೆ ಕಾರಣವಾಗು ವದೋ ಹಾಗೆ ದೇವತೆಗಳ ಮತ್ತು ವೇದಶಾಸ್ತ್ರಗಳ ಉಪಾಸನೆಗಳೂ ಯಾವದೋ ಒಂದು ಪ್ರಕಾರದಿಂದ ಫಲಕ್ಕೆ ಕಾರಣವಾಗುತ್ತವೆ- ಎಂದು ಊಹಿಸಿಕೊಳ್ಳಬೇಕು. ಇಲ್ಲಿ ಭೌತಿಕಕಾರ್ಯಕಾರಣಗಳ ಸಂಬಂಧವನ್ನು ಭೌತಿಕವಿಜ್ಞಾನದಿಂದ ನಾವು ನಿರೀಕ್ಷಣ-ಪರೀಕ್ಷಣ-ಸಂವಾದೀಕರಣಗಳಿಂದ ನೋಡಿ ತಿಳಿಯಬಹುದಾಗಿರುವಂತೆ ಮಾನಸಿಕ ವಾದ ಉಪಾಸನೆಗಳಿಗೆ ಫಲವಾಗುವದನ್ನು ಅನುಭವಕ್ಕೆ ತಂದುಕೊಳ್ಳಬಹುದಾಗಿರು ತ್ತದೆ. ಆದರೆ ಅತೀಂದ್ರಿಯವಿಷಯಕವಾದಉಪಾಸನೆಗಳಿಗೆ ಶಾಸ್ತ್ರಾಚಾರ್ಯರ ಉಪದೇಶವೇ ಮೂಲವಾಗಿರುತ್ತದೆ. ಉಪಾಸನೆಗಳಿಗೆ ಸ್ವರ್ಗಾದಿಯಾದ ಅದೃಷ್ಟಫಲ ಗಳುಂಟಾಗುವಂತೆ ಪ್ರಜಾಪಶ್ವಾದಿಗಳು, ಬ್ರಹ್ಮವರ್ಚಸವೇ ಮುಂತಾದ ದೃಷ್ಟಫಲ ಗಳೂ ಉಂಟಾಗುವವು. ಇದಕ್ಕೆ ಶ್ರದ್ಧೆಯು ಮಾತ್ರ ಅತ್ಯವಶ್ಯ. ಶಾಸ್ತ್ರವು ಹೇಳಿದಂತೆ ಉಪಾಸನೆ ಮಾಡುವದೂ ಅವಶ್ಯವಾಗಿದೆ.

## ಮೇಧಾಕಾಮನಿಗೂ ಶ್ರೀಕಾಮನಿಗೂ ಜಪಹೋಮಗಳು

**ಯಃ ಛಂದಸಾಮೃಷಭಃ.......... ಪ್ರಮಾಪದ್ಯಸ್ವ ॥ ೭-೯ ॥**

ಇಲ್ಲಿ ಓಂಕಾರವನ್ನು ಉಪಾಸನೆಮಾಡುವವನಿಗೆ ಆಗುವ ಮೇಧಾಪ್ರಾಪ್ತಿ ಯನ್ನು ಹೇಳಿರುತ್ತದೆ. ವೇದಗಳಲ್ಲೆಲ್ಲ ಶ್ರೇಷ್ಠವಾದದ್ದು ಓಂಕಾರವು. ಅದು ಸರ್ವ ಪ್ರಪಂಚವ್ಯಾಪಕವೆಂದು ಶ್ರುತಿಯಲ್ಲಿ ಪ್ರಸಿದ್ಧವಾಗಿರುತ್ತದೆ. ಆ ಓಂಕಾರವು ವೇದ ಗಳೆಂಬ ಅಮೃತದಿಂದ ಉಂಟಾಯಿತು. ಎಲ್ಲಕ್ಕೂ ಸಾರವನ್ನು ಗ್ರಹಿಸಬೇಕೆಂದು ಪ್ರಜಾಪತಿಯು ತಪಸ್ಸುಮಾಡಿ ನೋಡಿದ್ದರಲ್ಲಿ ಲೋಕಗಳಲ್ಲಿ ವೇದವು, ವೇದಗಳಲ್ಲಿ ವ್ಯಾಹೃತಿಗಳು, ವ್ಯಾಹೃತಿಗಳಲ್ಲಿ ಓಂಕಾರವು ಸಾರವೆಂದು ಹೊಳೆದವು. ಹೀಗೆ ವೇದಗಳೆಲ್ಲಕ್ಕೂ ಸಾರವಾಗಿರುವ ಓಂಕಾರವು ಪ್ರಜಾಪತಿಯ ಮನಸ್ಸಿನಲ್ಲಿ ಅಭಿವ್ಯಕ್ತವಾಯಿತಷ್ಟೆ ಆದ್ದರಿಂದಲೇ ಆ ಓಂಕಾರರೂಪನಾದ ಆ ಪರಮೇಶ್ವರನು ನನ್ನನ್ನು ಮೇಧಾಶಕ್ತಿಯಿಂದ ಪ್ರೀತಿಗೊಳಿಸಲಿ ; ಅಥವಾ ಬಲವುಳ್ಳವನನ್ನಾಗಿ ಮಾಡಲಿ - ಎಂದು ಇಲ್ಲಿ ಪ್ರಾರ್ಥಿಸಿದೆ. ಓಂಕಾರದ ಅನುಗ್ರಹದಿಂದ ನಮಗೆ ಪ್ರಜ್ಞೆ ಯುಂಟಾದರೆ ನಾವು ಅಮೃತಕ್ಕೆ ಕಾರಣವಾದ ಬ್ರಹ್ಮಜ್ಞಾನಕ್ಕೆ ಪಾತ್ರರಾಗುವೆವು.

ನನ್ನ ಶರೀರವು ವಿದ್ಯಾಧಾರಣೆಗೆ ಯೋಗ್ಯವಾಗಲಿ ! ನನ್ನ ನಾಲಗೆಯು ಅತ್ಯಂತಮಧುರವಾದ ವಾಕ್ಕನ್ನೇ ನುಡಿಯಲಿ ! ಕಿವಿಗಳಿಂದ ಹೆಚ್ಚಾಗಿ (ಪುಣ್ಯಕರವಾದ ಶಬ್ದಗಳನ್ನು) ಕೇಳುವಂತಾಗಲಿ ! ನನ್ನ ಕಾರ್ಯಕರಣಸಂಘಾತವು (ದೇಹವು) ಆತ್ಮಜ್ಞಾನಕ್ಕೆ ಯೋಗ್ಯವಾಗಲಿ ! ಎಂದು ಇಲ್ಲಿ ಓಂಕಾರರೂಪನಾದ ಪರಬ್ರಹ್ಮನನ್ನು ಪ್ರಾರ್ಥಿಸಿರುತ್ತದೆ. ಮುಂದುವರೆದು ಎಲೈ ಓಂಕಾರವೆ, ನೀನು ಕತ್ತಿಗೆ (ಖಡ್ಗಕ್ಕೆ)

ಒರೆಯಂತೆ (ಚೀಲದಂತೆ) ಬ್ರಹ್ಮಕ್ಕೆ ಒರೆಯಾಗಿರುತ್ತೀಯೆ. ನೀನಲ್ಲವೆ, ಬ್ರಹ್ಮಕ್ಕೆ ಪ್ರತೀಕವು? ಆದ್ದರಿಂದ ನಿನ್ನಲ್ಲಿಯೇ ನಾನು ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಆಗಲಿ ! ಆದರೆ ಸಾಮಾನ್ಯಪ್ರಜ್ಞರಾದ ಲೌಕಿಕರಿಗೆ ನಿನ್ನ ತತ್ತ್ವವು ತಿಳಿಯುವದಕ್ಕೆ ಬರುವದಿಲ್ಲ. ನಾನು ಶ್ರವಣಾದಿಗಳಿಂದ ಸಂಪಾದಿಸಿದ ಪ್ರಜ್ಞೆಯನ್ನು ಕಾಪಾಡಬೇಕು - ಎಂದು ಓಂಕಾರವನ್ನೇ ಇಲ್ಲಿ ಪ್ರಾರ್ಥಿಸಿದೆ. ಇಲ್ಲಿಯವರೆಗೆ ಇರುವ ಮೂಲಮಂತ್ರಗಳನ್ನು ಜಪಕ್ಕಾಗಿ ಹೇಳಿರುತ್ತದೆ. ಇವುಗಳನ್ನು ಶ್ರದ್ಧೆಯಿಂದ ಜಪಿಸಿದವರಿಗೆ ಮೇಧಾ (ಧಾರಣಶಕ್ತಿಯ) ಪ್ರಾಪ್ತಿಯಾಗುವದು - ಎಂದರೆ ಬ್ರಹ್ಮಜ್ಞಾನಕ್ಕೆ ತಕ್ಕ ಪ್ರಜ್ಞೆಯು ಪ್ರಾಪ್ತವಾಗುವದು. ಮುಂದೆ ಹೇಳಿರುವ ಮಂತ್ರಗಳು ಶ್ರೀಕಾಮನಿಗೆ ಹೋಮದಲ್ಲಿ ಪ್ರಯೋಗಿಸುವದಕ್ಕಾಗಿ ಹೇಳಿರುವವುಗಳಾಗಿವೆ.

''ಎಲೈ ಓಂಕಾರವೆ, ನನಗೆ ಸರಿಯಾದ ಮೇಧಾಪ್ರಾಪ್ತಿಯಾದ ಬಳಿಕ ಶ್ರೀಯನ್ನು ಒದಗಿಸು. ಏಕೆಂದರೆ ಸರಿಯಾದ ಪ್ರಜ್ಞಾವಂತನಲ್ಲದವನಿಗೆ, ಶ್ರೀ ಪ್ರಾಪ್ತಿಯು ಅನರ್ಥಕ್ಕೆ ಕಾರಣವಾಗುವದು. ನನಗೆ ವಸ್ತ್ರಗಳನ್ನೂ ಗೋವುಗಳನ್ನೂ ಅನ್ನಪಾನಗಳನ್ನೂ ಯಾವಾಗಲೂ ತಂದುಕೊಟ್ಟು ವಿಸ್ತರಿಸಿ ಬಹುಕಾಲ ನನ್ನಲ್ಲಿ ನಿಲ್ಲುವಂತೆ ಮಾಡುವ ಶ್ರೀಯನ್ನು ಕೊಡು. ಆಡು, ಕುರಿ- ಮುಂತಾದ ಪಶುಗಳನ್ನೂ ಆ ಶ್ರೀದೇವತೆಯು ನನಗೆ ಕೊಡಲಿ ! ನನ್ನಲ್ಲಿಗೆ ಬ್ರಹ್ಮಚಾರಿಗಳು ಎಲ್ಲಾ ಕಡೆಯಿಂದಲೂ ವಿಶೇಷವಾಗಿ ಬರಲಿ ! ಶ್ರವಣಕ್ಕಾಗಿ ಗುಂಪುಗುಂಪಾಗಿ ಬಂದು ಸೇರಲಿ! ಬೇಗನೆ ಬರಲಿ ನಾನು ಜನರಲ್ಲಿ ಯಶಸ್ವಿಯಾಗುವಂತಾಗಲಿ ! ನಾನು ನಮ್ಮ ಜನರಲ್ಲಿ ಶ್ರೇಷ್ಠನೂ ಧನವಂತನೂ ಆಗುವಂತಾಗಲಿ ! ಬ್ರಹ್ಮಕ್ಕೆ ಒರೆಯಂತಿರುವ ನಿನ್ನನ್ನು ಎಲೈ ಭಗವಂತನೆ, ನಾನು ಒಳಹೊಕ್ಕು ಬೆರೆಯುವಂತಾಗಲಿ, ನೀನೂ ನನ್ನನ್ನು ಬೆರೆತು ಒಂದಾಗಿಬಿಡು. ಅನಂತವಾದ ಉಪಶಾಖೆಗಳುಳ್ಳ ನಿನ್ನಲ್ಲಿ ಹೊಕ್ಕು ನನ್ನ ಪಾಪಗಳನ್ನೆಲ್ಲ ತೊಳೆದುಕೊಳ್ಳುವಂತಾಗಲಿ ! ಹೇಗೆ ತಗ್ಗಾದ ಪ್ರದೇಶಕ್ಕೆ ನದಿಗಳೆಲ್ಲ ಹರಿಯುವವೋ ತಿಂಗಳುಗಳು ಸಂವತ್ಸರದೊಳಗೆ ಹೇಗೆ ಅಡಗಿಕೊಳ್ಳುವವೋ ಹಾಗೆ ಬ್ರಹ್ಮಚಾರಿಗಳು ತಂಡತಂಡವಾಗಿ ನನ್ನಲ್ಲಿಗೆ ಬಂದು ಸೇರಲಿ. ನಿನ್ನನ್ನೇ ಶರಣು ಹೊಕ್ಕವರಿಗೆ ಸರ್ವಪಾಪಗಳಿಂದಾದ ದುಃಖವನ್ನೂ ಹೋಗಲಾಡಿಸುವ ವಿಶ್ರಾಮ ಸ್ಥಾನವೇ ನೀನು. ಆದ್ದರಿಂದ ನೀನು ನನಗೆ ಮೈದೋರುವವನಾಗು. ಕಲಾಯದಿಂದ ಲೋಹಾಂತರವನ್ನು ಬಳಿದು ಕಲಾಯಮಾಡುವಂತೆ ನೀನು ನನ್ನನ್ನು ಭಿನ್ನರೂಪ ನನ್ನಾಗಿ ಮಾಡಿಕೊ. ಎಂದು ಓಂಕಾರವನ್ನು ಪ್ರಾರ್ಥಿಸಿರುತ್ತದೆ.

ಇದು ಬ್ರಹ್ಮವಿದ್ಯಾಪ್ರಕರಣವು. ಆದ್ದರಿಂದ ಇಲ್ಲಿ ಶ್ರೀಪ್ರಾರ್ಥನೆಯನ್ನು ಮಾಡಿರುವದು ಧನಸಂಪಾದನೆಯಿಂದ ಕರ್ಮಾನುಷ್ಠಾನವನ್ನು ಮಾಡಿದವರಿಗೆ ಪಾಪಕ್ಷಯ

ವಾಗುವದು. ಹೇಗಾದರೂ ಧನಸಂಪಾದನೆಯನ್ನು ಮಾಡಿ ಅದನ್ನು ಉಪಯೋಗಿಸಿ ಕೊಂಡು ಮಾಡಿದ ಕರ್ಮವು ಈ ರೀತಿಯಾದ ಫಲವನ್ನು ಕೊಡಲಾರದು. ಆದ್ದರಿಂದ ಶಾಸ್ತ್ರದಲ್ಲಿ ಹೇಳಿರುವ ರೀತಿಯಲ್ಲಿ ಧನವನ್ನು ನ್ಯಾಯದಿಂದ ಸಂಪಾದಿಸಿಕೊಂಡವರಿಗೆ ಕರ್ಮವು ದಕ್ಕುವದು. ಪಾಪವು ಸವೆದ ಮೇಲೆಯೇ ಜ್ಞಾನವುಂಟಾದೀತೇ ಹೊರತು ಬರಿಯ ಕರ್ಮಾಚರಣೆಯಿಂದ ಅದು ದೊರಕಲಾರದು. ಹೀಗೆಂದು ಸ್ಮೃತಿಯೂ ಇದೆ :

**ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ ।**
**ಯಥಾದರ್ಶತಲಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ**

ಈ ಸ್ಮೃತಿವಾಕ್ಯದಲ್ಲಿ ಹೇಳಿರುವದೇನೆಂದರೆ : ಪಾಪಕರ್ಮವು ಕ್ಷಯವಾದರೆ - ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಸ್ಫುಟವಾಗಿ ಕಂಡುಕೊಳ್ಳುವಂತೆ ಸ್ವಚ್ಛವಾದ ತನ್ನ ಅಂತಃಕರಣದಿಂದ ತನ್ನಲ್ಲಿಯೇ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ.

## ವ್ಯಾಹೃತ್ಯಾತ್ಮವಾದ ಬ್ರಹ್ಮದ ಉಪಾಸನೆ

**ಓಂ ॥ ಭೂರ್ಭುವಸ್ಸುವರಿತಿ.............. ದೇವಾ ಬಲಿಮಾವಹನ್ತಿ ॥೧೦ - ೧೨ ॥**

ವೈದಿಕವಾಙ್ಮಯದಲ್ಲಿ ಓಂಕಾರ, ವ್ಯಾಹೃತಿಗಳು, ಗಾಯತ್ರಿ - ಇವು ಮೂರಕ್ಕೆ ಹೆಚ್ಚಿನ ಸ್ಥಾನವಿದೆ. ಇವುಗಳ ರಹಸ್ಯವನ್ನು ಅರಿತುಕೊಂಡ ದ್ವಿಜನು ಸದ್ಗುರುವಿನ ಉಪದೇಶದಿಂದ ಉಪಾಸನೆಯನ್ನು ಮಾಡಿದರೆ ಆಯಾ ಫಲವನ್ನು ಪಡೆದುಕೊಳ್ಳ ಬಹುದು- ಎಂಬಿದು ಆರ್ಯರ ಹೇಳಿಕೆ ಹಾಗೂ ನಂಬಿಕೆ. ಈ ಹಿಂದೆ ಹೇಳಿರುವದು ಓಂಕಾರದ ವಿಷಯದ ಮಂತ್ರಗಳು, ಅವುಗಳನ್ನು ಅಧಿಕಾರಿಯಾದವನು ವಿಧಿವತ್ತಾಗಿ ಜಪಿಸಿದರೆ ಮತ್ತು ಮಂತ್ರಪೂರ್ವಕವಾಗಿ ಹೋಮಮಾಡಿದರೆ ಪ್ರಜ್ಞಾಪ್ರಾಪ್ತಿಯೂ ಧರ್ಮಸಂಪಾದನೆಯೂ ವಿದ್ಯೆಗೆ ಬೇಕಾದ ಧರ್ಮಾರ್ಜಿತಧನಪ್ರಾಪ್ತಿಯೂ ದೊರಕು ವದೆಂದು ಶಾಸ್ತ್ರಗಳು ಹೇಳುತ್ತವೆ.

ಈಗ ಪ್ರಾರಂಭಿಸಿರುವದು ವ್ಯಾಹೃತ್ಯಾತ್ಮಕಬ್ರಹ್ಮದ ಉಪಾಸನೆ. ಇದನ್ನು ಐದನೆಯ ಮತ್ತು ಆರನೆಯ ಅನುವಾಕಗಳಲ್ಲಿ ವಿವರಿಸಿರುತ್ತದೆ. ಇಲ್ಲಿ ಹೇಳಿರುವ ನಾಲ್ಕು ವ್ಯಾಹೃತಿಗಳೊಳಗೆ ಮೊದಲನೆಯ ಮೂರು ಅಂಗಗಳು. ನಾಲ್ಕನೆಯದಾದ **"ಮಹಃ"** ಎಂಬ ವ್ಯಾಹೃತಿಯು ಆಯಾ ಗುಂಪಿನ ಪ್ರಧಾನತತ್ತ್ವವನ್ನು ತಿಳಿಸುತ್ತದೆ. ನಾಲ್ಕನೆಯ ವ್ಯಾಹೃತಿಯನ್ನು ಮಾಹಾಚಮಸ್ಯನು (ಮಹಾಚಮಸನ ಮಗನು) ಕಂಡು ಹಿಡಿದನು. ಕರ್ಮಗಳಲ್ಲಿ ಉಪಯೋಗಿಸುವ ಮಂತ್ರಗಳನ್ನು ಋಷಿ, ಛಂದಸ್ಸು- ಮುಂತಾದ ವಿವರಸಹಿತವಾಗಿಯೇ ಉಪಯೋಗಿಸಿದವರಿಗೆ ಮಾತ್ರ ಹೇಗೆ ಕರ್ಮಗಳು ವೀರ್ಯವತ್ತರವಾಗುವವೋ ಹಾಗೆಯೇ ಉಪಾಸನೆಗಳಲ್ಲಿಯೂ ಋಷಿಗಳ ಸ್ಮರಣ

ಪೂರ್ವಕವಾಗಿ ಅನುಷ್ಠಾನಮಾಡಿದವರಿಗೇ ಅನುಷ್ಠಾನವು ವೀರ್ಯವತ್ತಾಗುವದೆಂದು ತಿಳಿಯಬೇಕು. ಪ್ರಕೃತದಲ್ಲಿ ಮಾಹಾಚಮಸ್ಯನೆಂಬ ಋಷಿಗೆ ತಪಸ್ಸಿನಿಂದ ಪವಿತ್ರವಾದ ಅಂತಃಕರಣದಲ್ಲಿ ಈ 'ಮಹಃ' ಎಂಬ ವ್ಯಾಹೃತಿಯು ಹೊಳೆಯಿತು. ಆದ್ದರಿಂದ ಉಪಾಸನೆಯನ್ನು ಅಧಿಕಾರಿಯಾದವನು ಋಷಿಸ್ಮರಣೆಯನ್ನು ಮಾಡಿಕೊಂಡೇ ಅನುಷ್ಠಾನಮಾಡಬೇಕು.

ಈ 'ಮಹಃ' ಎಂಬ ವ್ಯಾಹೃತಿಯು ಬ್ರಹ್ಮವನ್ನು ಹೇಳುತ್ತದೆ. ಅದು ಆತ್ಮನು ಎಂದರೆ ಮಿಕ್ಕ ಮೂರು ವ್ಯಾಹೃತಿಗಳು ಹೇಳುವ ಅಂಗತತ್ತ್ವಗಳನ್ನೆಲ್ಲ ವ್ಯಾಪಿಸಿಕೊಂಡಿರುವದರಿಂದ ಅವುಗಳ 'ಆತ್ಮ'ನೆನಿಸಿರುತ್ತದೆ. ಹೇಗೆ ಆತ್ಮನಿಂದ ಅಂಗಗಳು ವೃದ್ಧಿಯನ್ನು ಹೊಂದುವವೋ ಹಾಗೆ 'ಮಹಃ' ಎಂಬ ವ್ಯಾಹೃತ್ಯುಕ್ತವಾದ ಆತ್ಮನಿಂದ ಮಿಕ್ಕ ವ್ಯಾಹೃತಿಗಳ ಅರ್ಥವಾದ ದೇವತಾದಿಗಳು ವೃದ್ಧಿಯನ್ನು ಹೊಂದುತ್ತಾರೆ. ಇಲ್ಲಿ ಹೇಳಿರುವ ವ್ಯಾಹೃತಿಗಳ ಅರ್ಥಗಳನ್ನು ಈ ಕೆಳಗೆ ಪಟ್ಟಮಾಡಿಕೊಡಲಾಗಿದೆ.

| | **ಭೂಃ** | **ಭುವಃ** | **ಸುವಃ** | **ಮಹಃ** |
|---|---|---|---|---|
| ೧. | ಭೂಲೋಕ | ಅಂತರಿಕ್ಷ | ಸ್ವರ್ಗಲೋಕ | ಆದಿತ್ಯ |
| ೨. | ಅಗ್ನಿ | ವಾಯು | ಆದಿತ್ಯ | ಚಂದ್ರ |
| ೩. | ಋಕ್ಕುಗಳು | ಸಾಮಗಳು | ಯಜಸ್ಸುಗಳು | ಓಂಕಾರರೂಪಬ್ರಹ್ಮ |
| ೪. | ಪ್ರಾಣ | ಅಪಾನ | ವ್ಯಾನ | ಅನ್ನ |

ಹೀಗೆ ಒಂದೊಂದು ವ್ಯಾಹೃತಿಯೂ ನಾಲ್ಕು ನಾಲ್ಕು ಬಗೆಯದಾಗಿರುತ್ತದೆ. ಈ ವ್ಯಾಹೃತಿಗಳ ಉಪಾಸನೆಯಿಂದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಆ ಬ್ರಹ್ಮದ ಸ್ವರೂಪವನ್ನು ಮುಂದಿನ ಅನುವಾಕದಲ್ಲಿ ವರ್ಣಿಸಿರುತ್ತದೆ.

**ಸ ಯ ಏಷೋಽನ್ತರ್ಹೃದಯ ಆಕಾಶಃ ........ ಯೋಗ್ಯೋಪಾಸ್ಸ್ವ ॥೧೩, ೧೪ ॥**

ವ್ಯಾಹೃತ್ಯಾತ್ಮವಾದ ಬ್ರಹ್ಮಕ್ಕೆ ಸ್ಥಾನವು ಹೃದಯವು. ಅಲ್ಲಿ ಅದನ್ನು ಉಪಾಸನೆ ಮಾಡಿ ಸಾಕ್ಷಾತ್ಕಾರಮಾಡಿಕೊಳ್ಳಬಹುದು. ಉಪಾಸನೆಯನ್ನು ಸಾಯುವ ಕಾಲದವರೆಗೂ ಶಾಸ್ತ್ರೋಕ್ತರೀತಿಯಿಂದ ಮಾಡಿದವರಿಗೆ ಸಾಕ್ಷಾತ್ಕಾರಪೂರ್ವಕವಾಗಿ ಆಯಾ ದೇವತೆಯ ಸಾಯುಜ್ಯವು ಲೋಕಾಂತರದಲ್ಲಿ ಫಲವಾಗುವದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಹೃದಯವೆಂಬುದು ಮೇಲುಗಡೆಯಲ್ಲಿ ನಾಳವುಳ್ಳದ್ದಾಗಿ ಕೆಳಗಡೆಗೆ ಮುಖವುಳ್ಳ, ಪುಂಡರೀಕದ ಆಕಾರದಲ್ಲಿರುವ ಮಾಂಸಪಿಂಡವು. ಅದರಲ್ಲಿರುವ ರಂಧ್ರಗಳಿಂದ ಅನೇಕ ನಾಡಿಗಳು ಹೊರಟು ದೇಹವನ್ನು ವ್ಯಾಪಿಸಿಕೊಂಡಿರುತ್ತವೆ. ಅದರಳತೆಯ ಆಕಾಶದಲ್ಲಿ ಈ ಪ್ರಕೃತನಾದ ಪುರುಷನನ್ನು ಧ್ಯಾನಿಸಬೇಕು. ಇವನು

ಶರೀರಪುರದೊಳಗೆ ಹೃದಯಾಕಾಶದಲ್ಲಿರುವದರಿಂದ ''ಪುರಿ ಶೇತೇ'' ಎಂಬ ವ್ಯುತ್ಪತ್ತಿಯಿಂದ 'ಪುರುಷ' ನೆಂಬ ಅನ್ವರ್ಥನಾಮವುಳ್ಳವನಾಗಿರುತ್ತಾನೆ. ಅಥವಾ ಭೂರಾದಿಲೋಕಗಳನ್ನೆಲ್ಲ ಇವನು ತನ್ನ ಸಮಷ್ಟಿರೂಪದಿಂದ ವ್ಯಾಪಿಸಿಕೊಂಡಿರುವದರಿಂದ ''ಪೂರ್ಣಾಃ ಲೋಕಾಃ ಅನೇನ'' ಎಂಬ ವ್ಯುತ್ಪತ್ತಿಯಿಂದ 'ಪುರುಷನು' ಎನಿಸಿಕೊಂಡಿರುತ್ತಾನೆ. ಇವನು **ಮನೋಮಯನು.** ಏಕೆಂದರೆ ಮನಸ್ಸೆಂದರೆ ಅಂತಃಕರಣವು. ಅದಕ್ಕೆ ಈ ಪುರುಷನು ಅಭಿಮಾನಿಯಾಗಿರುವದರಿಂದ ಮನೋಮಯನು. ಅಥವಾ ಮನಸ್ಸೆಂಬ ಗುರುತಿನಿಂದ ಈತನನ್ನು ಉಪಾಸನೆಯಿಂದ ಕಂಡು ಸಾಕ್ಷಾತ್ಕರಿಸಿಕೊಳ್ಳಬೇಕು- ಎಂಬ ಕಾರಣದಿಂದ ಮನೋಮಯನು - ಎಂದು ಹೇಳಬಹುದು. ಈ ಪುರುಷನು ಅಮೃತನು- ಮರಣರಹಿತನು. **ಹಿರಣ್ಮಯನು** ಎಂದರೆ ಜ್ಯೋತಿರೂಪನಾಗಿರುತ್ತಾನೆ. ಈ ವಿಶೇಷಣಗಳಿಂದ ಕೂಡಿದ ಪುರುಷನು ಹೃದಯದಲ್ಲಿರುತ್ತಾನೆ- ಎಂದು ಸಾಧಕನು ಗುರೂಪದೇಶಕ್ರಮದಿಂದ ಉಪಾಸನೆಮಾಡಬೇಕು.

ಈ ಪುರುಷನೇ ನಾನು- ಎಂಬ ಅಭಿಮಾನವುಂಟಾಗುವವರೆಗೂ ಎಡೆಬಿಡದೆ ಚಿಂತನೆಮಾಡಿ ಸಾಕ್ಷಾತ್ಕಾರವನ್ನು ಪಡೆದುಕೊಂಡ ಬಳಿಕ ಇವನನ್ನು ಲೋಕಾಂತರದಲ್ಲಿ ಸೇರುವದಕ್ಕೆ ಮಾರ್ಗವನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ. ಆ ಮಾರ್ಗವನ್ನೂ ಉಪಾಸಕನು ಚಿಂತಿಸುತ್ತಿರಬೇಕು. ದೂರದಲ್ಲಿರುವ ದೇಶಕ್ಕೆ ಹೋಗುವಾತನು ರೈಲ್ವೆ - ಗೈಡ್ (ಧೂಮಶಕಟಮಾರ್ಗಪ್ರದರ್ಶಿಕಾ) ಎಂಬ ಪುಸ್ತಕವನ್ನು ಕೈಯಲ್ಲಿಟ್ಟುಕೊಂಡು ಅದರಲ್ಲಿ ತೋರಿಸಿರುವ ನಕ್ಷೆಯೇ ಮುಂತಾದವುಗಳ ಸಹಾಯದಿಂದ ಹೇಗೆ ಮಾರ್ಗವನ್ನು ಮನಸ್ಸಿಗೆ ತಂದುಕೊಂಡು ಅದೇ ಮಾರ್ಗದಲ್ಲಿ ಪ್ರಯಾಣವನ್ನು ಮಾಡಿ ಉದ್ದಿಷ್ಟ ದೇಶವನ್ನು ಹೇಗೆ ಕಾಲಾಂತರದಲ್ಲಿ ಸೇರುತ್ತಾನೋ ಹಾಗೆಯೇ ಇಲ್ಲಿಯೂ ಧ್ಯಾನಕ್ರಮವನ್ನು ಬಲ್ಲವರು ಉಪದೇಶಿಸುವಂತೆ ಮಾರ್ಗಚಿಂತನೆಯನ್ನು ಮಾಡಿಕೊಂಡು ಕಾಲಕ್ರಮದಲ್ಲಿ ವ್ಯಾಹೃತ್ಯಾತ್ಮವಾದ ಬ್ರಹ್ಮವನ್ನು ಸೇರಬೇಕು.

ಹೃದಯದ ಮೇಲಗಡೆಗೆ ಸುಷುಮ್ನಾ ಎಂಬ ನಾಡಿಯು ಮೇಲಕ್ಕೆ ಹೋಗಿರುತ್ತದೆ. ಈ ನಾಡಿಯ ವಿವರವು ಯೋಗಶಾಸ್ತ್ರದಲ್ಲಿ ಕಂಡುಬರುತ್ತದೆ. ಮನುಷ್ಯನ ದವಡೆಗಳ ನಡುವೆ ಕಾಣುತ್ತಿರುವ ಸ್ತನದಂತೆ ಕೆಳಕ್ಕೆ ಬಾಗಿಬಿಟ್ಟಿರುವ ಕಿರುನಾಲಿಗೆಯಿದೆಯಷ್ಟೆ ! ಅದರ ನಡುವೆ ಹಾದೂ ತಲೆಯ ಮೇಲಿರುವ ಬೈತಲೆಯನ್ನು ಒಡೆದು ಹಾದುಹೋಗಿರುವದೇ ಈ ಸುಷುಮ್ನಾ ನಾಡಿಯು. ಇದನ್ನೇ ಇಂದ್ರಯೋನಿಯೆಂದು ಕರೆದಿದೆ. ಇದೇ, ಉಪಾಸಕನು ಬ್ರಹ್ಮಸ್ವರೂಪವನ್ನು ಪಡೆಯುವ ಮಾರ್ಗವು. ಇದನ್ನು ಈಗ ನಾವು ಕಾಣುವದಕ್ಕೆ ಆಗುವಂತಿಲ್ಲವಾದರೂ ಉಪಾಸನೆಯ ಬಲದಿಂದ ಮನೋಮಯಬ್ರಹ್ಮವನ್ನು ಸೇರಲಿರುವ ಸಾಧಕನು ಈ ಮಾರ್ಗದಿಂದ ಹೊರಟು

ಮೊದಲು ಈ ಭೂಲೋಕಕ್ಕೆ ಅಧಿಷ್ಠಾತೃವಾದ ಅಗ್ನಿಯ ತಾದಾತ್ಮ್ಯವನ್ನು ಹೊಂದಿ ಈ ಲೋಕವನ್ನೆಲ್ಲ ವ್ಯಾಪಿಸಿಕೊಳ್ಳುವನು. ಅಲ್ಲಿರುವ 'ಭುವಃ' ಎಂಬ ವ್ಯಾಹೃತಿಯ ಅಧಿಷ್ಠಾತೃವಾದ ವಾಯುರೂಪದಿಂದ ನೆಲೆನಿಲ್ಲುವನು. ಇನ್ನು ಮುಂದೆ ಸುವಃ ಎಂಬ ವ್ಯಾಹೃತಿಯ ಅಧಿಷ್ಠಾತೃವಾದ ಆದಿತ್ಯರೂಪದಿಂದ ಇರುವನು. ಅಲ್ಲಿರುವ ಮುಂದಿನ 'ಮಹಃ' ಎಂಬ ವ್ಯಾಹೃತಿಯ ರೂಪವಾಗಿರುವ ಬ್ರಹ್ಮರೂಪವನ್ನು ಪಡೆದುಕೊಳ್ಳುವನು. ಈ ಮಾರ್ಗವೂ ವ್ಯಾಹೃತಿರೂಪವಾದ ದೇವತೆಗಳ ರೂಪಪ್ರಾಪ್ತಿಯೂ ಕೊನೆಯಲ್ಲಿ ಮಹಃ ಎಂಬ ವ್ಯಾಹೃತ್ಯಾತ್ಮಕಬ್ರಹ್ಮದ ಪ್ರಾಪ್ತಿಯೂ ಕೇವಲ ಶಾಸ್ತ್ರಗಮ್ಯಗಳಾಗಿರುವದರಿಂದ ಸ್ವರ್ಗಾದಿಗಳಂತೆ ಶಾಸ್ತ್ರಶ್ರದ್ಧೆಯಿಂದ ಉಪಾಸನೆಮಾಡಿ ಪಡೆದುಕೊಳ್ಳತಕ್ಕದ್ದಾಗಿದೆ. ಆ ಬ್ರಹ್ಮಕ್ಕೆ ದೇವತೆಗಳು ಹೇಗೆ ಅಂಗಭೂತರಾಗಿರುವರೋ ಹಾಗೆಯೇ ಇವನಿಗೂ ಆಗಿರುವರು.

ಈ ಉಪಾಸಕನು ಪಡೆಯುವ ಸ್ವಾರಾಜ್ಯದ ಸ್ವರೂಪವು ಹೇಗಿರುತ್ತದೆ ? ಎಂದರೆ ಸರ್ವರ ಮನಸ್ಸಿಗೂ ಒಡೆಯನಾಗಿರುವ ಹಿರಣ್ಯಗರ್ಭನನ್ನೇ ಇವನು ಸೇರುತ್ತಾನೆ. ವಾಕ್‌ಪತಿಯೂ ಚಕ್ಷುಸ್ಸಿಗೆ ಪತಿಯೂ ಶ್ರೋತ್ರಪತಿಯೂ ಆಗುವನು. ಹಾಗೆಯೇ ವಿಜ್ಞಾನಪತಿಯೂ ಆಗುವನು. ಭೌತಿಕಕರಣಗಳೂ ಇವನ ಕರಣಗಳಾಗುವವು. ಸತ್ಯ ಸ್ವರೂಪನಾಗುವನು- ಪ್ರಾಣಗಳಿಂದ ಎಂದರೆ ಕರಣಗಳಿಂದ ಕ್ರೀಡಿಸುತ್ತಿರುವನು. ಆನಂದಭರಿತವಾದ ಮನಸ್ಸುಳ್ಳವನಾಗುವನು. ಶಾಂತಿಯಿಂದ ಸಮೃದ್ಧವಾದ ಅಮೃತಸ್ವರೂಪನೂ ಆಗುವನು. ಸಗುಣೋಪಾಸನೆಯನ್ನು ಶಾಸ್ತ್ರೋಕ್ತರೀತಿಯಿಂದ ಅನುಷ್ಠಾನಮಾಡಿದವರಿಗೆ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವದೊಂದನ್ನು ಬಿಟ್ಟು ಮಿಕ್ಕ ಅಣಿಮಾದ್ಯೈಶ್ವರ್ಯಗಳೆಲ್ಲವೂ ದೊರೆಯುವವು. ನಿತ್ಯಸಿದ್ಧನಾದ ಪರಮೇಶ್ವರನ ಐಶ್ವರ್ಯಕ್ಕೆ ಒಳಪಟ್ಟು ಇವನು ಸ್ವಾರಾಜ್ಯವನ್ನು ಪಡೆಯುವನು- ಎಂದು ಬ್ರಹ್ಮಸೂತ್ರದ ೪-೪-೧೭ರಲ್ಲಿ ನಿರ್ಣಯಿಸಲಾಗಿರುತ್ತದೆ.

## ಪಾಂಕ್ತೋಪಾಸನೆ

**ಓಂ ॥ ಪೃಥಿವ್ಯನ್ತರಿಕ್ಷಂ .........ಸ್ಪೃಣೋತೀತಿ ॥೧೫॥**

ಈಗ ಬ್ರಹ್ಮವನ್ನು ಪಾಂಕ್ತಸ್ವರೂಪದಿಂದ ಉಪಾಸನೆಮಾಡುವ ಬಗೆಯನ್ನು ಹೇಳಲಾಗುವದು. ಐದೈದಾಗಿ ವರ್ಗೀಕರಣಮಾಡಿರುವದರಿಂದ ಇದನ್ನೇ ಪಂಕ್ತಿ ಛಂದಸ್ಸು ಎಂಬುದಾಗಿ ಭಾವಿಸಿ ಉಪಾಸನೆಮಾಡಲಾಗುವದು. ಈ ದೃಷ್ಟಿಯಿಂದ ಎಲ್ಲವೂ ಪಾಂಕ್ತವು (ಐದೈದರ ಗುಂಪು) ಆಯಿತು. ಯಜ್ಞವು ಮನಸ್ಸು, ವಾಕ್ಕು, ಪ್ರಾಣ, ಚಕ್ಷುರಿಂದ್ರಿಯ, ಶ್ರೋತ್ರ- ಇವುಗಳಿಂದೊಡಗೂಡಿದ ಪುರುಷನಿಂದ ಆಗತಕ್ಕದ್ದಾದ್ದರಿಂದ ಪಾಂಕ್ತವೆನಿಸುವದು- ಎಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ

ಹೇಳಿದೆ. ಆದ್ದರಿಂದ ಎಲ್ಲವನ್ನೂ ಐದ್ದೈದಾಗಿ ವರ್ಗೀಕರಿಸಿ ಉಪಾಸನೆಮಾಡುವದರಿಂದ ಯಜ್ಞವೆಂದೇ ಕಲ್ಪಿಸಿದಂತಾಗುತ್ತದೆ. ಹೀಗೆ ಕಲ್ಪನೆ ಮಾಡಿಮಾಡುವ ಉಪಾಸನೆಯ ಬಲದಿಂದ ಪಾಂಕ್ತಾತ್ಮನಾದ ಪ್ರಜಾಪತಿಯನ್ನೇ ಸೇರುವನು- ಎಂದು ಶ್ರುತಿಯ ಅಭಿಪ್ರಾಯ. ಭಾವನೆಗೆ ತಕ್ಕಂತೆ ಫಲವಾಗುವದು ಎಂಬುದು ಉಪಾಸನೆಯ ತತ್ತ್ವವನ್ನು ಬಲ್ಲವರ ಹೇಳಿಕೆಯಾಗಿದೆ.

ಶ್ರುತಿಯಲ್ಲಿ ಹೇಳಿರುವ ಪಾಂಕ್ತಗಳು ಇವು : (೧) ಪೃಥಿವಿ, ಅಂತರಿಕ್ಷ, ದ್ಯುಲೋಕ, ದಿಕ್ಕುಗಳು, ಎರಡೆರಡು ದಿಕ್ಕುಗಳ ನಡುವೆ ಇರುವ ಅವಾಂತರ ದಿಕ್ಕುಗಳು ಇವು **ಲೋಕಪಾಂಕ್ತವು.** (೨) ಅಗ್ನಿ, ವಾಯು, ಆದಿತ್ಯ, ಚಂದ್ರ, ನಕ್ಷತ್ರಗಳು - ಇವು **ದೇವತಾಪಾಂಕ್ತವು.** (೩) ಅಪ್ಪು, ಓಷಧಿಗಳು, (ಪೈರುಗಳು), ಮರಗಳು, ಆಕಾಶ, ವಿರಾಡಾತ್ಮ - ಇವು **ಭೂತಪಾಂಕ್ತಗಳು.** ಇಲ್ಲಿಯವರೆಗೆ ಹೇಳಿರುವವು ಒಂದು ಗುಂಪು. ಇನ್ನು **ಅಧ್ಯಾತ್ಮಪಾಂಕ್ತಗಳು** (೧) ಪ್ರಾಣ, ವ್ಯಾನ, ಅಪಾನ, ಉದಾನ, ಸಮಾನ - ಇವು ಪ್ರಾಣಪಾಂಕ್ತಗಳು. (೨) ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು, ತ್ವಕ್- ಇವು ಇಂದ್ರಿಯಪಾಂಕ್ತಗಳು. (೩) ಚರ್ಮ, ಮಾಂಸ, ಎಲುಬುಗಳು, ನರಗಳು, ಮಜ್ಜೆ- ಇವು ಧಾತುಪಾಂಕ್ತಗಳು. ಹೀಗೆ ಒಳಗೂ ಹೊರಗೂ ಪಾಂಕ್ತಗಳನ್ನು ಕಲ್ಪನೆಮಾಡುವ ಒಬ್ಬ ಋಷಿಯು ಹೀಗೆಂದಿರುತ್ತಾನೆ - ''ಇದೆಲ್ಲವೂ ಪಾಂಕ್ತವೇ. ಅಧ್ಯಾತ್ಮಪಾಂಕ್ತವು ಬಾಹ್ಯಪಾಂಕ್ತವನ್ನು ಬಲಪಡಿಸುತ್ತದೆ. ಅಧ್ಯಾತ್ಮಪಾಂಕ್ತದಿಂದಲೇ ಬಾಹ್ಯಪಾಂಕ್ತವೆಲ್ಲವೂ ವ್ಯಾಪ್ತವಾಗಿರುತ್ತದೆ.''

ಇಲ್ಲಿ ಹೇಳಿರುವದನ್ನು ಉಪಲಕ್ಷಣವಾಗಿ ತೆಗೆದುಕೊಂಡು ಭಾವನಾಬಲದಿಂದ ಎಲ್ಲವೂ ಪಾಂಕ್ತವೇ - ಎಂಬುದನ್ನು ಗಟ್ಟಿಮಾಡಿಕೊಂಡವನು ಪಾಂಕ್ತಾತ್ಮಕನಾದ ಪ್ರಜಾಪತಿಯಾಗುತ್ತಾನೆ. ಈ ಸರ್ವವೂ ಪ್ರಜಾಪತಿಯಾದ ನನ್ನ ಶರೀರವೇ - ಎಂಬ ಭಾವನೆಯಿಂದ ಪ್ರಜಾಪತಿತ್ವವನ್ನೇ ದೇಹಪಾತಾನಂತರ ಹೊಂದುತ್ತಾನೆ ಎಂದು ಶ್ರುತಿಯು ತಿಳಿಸುತ್ತದೆ.

## ಓಂಕಾರೋಪಾಸನೆ

**ಓಂ ॥ ಓಮಿತಿ ಬ್ರಹ್ಮ .......... ಬ್ರಹ್ಮೈವೋಪಾಪ್ನೋತಿ ॥೧೬॥**

ಈಗ ಉಪಾಸನೆಗಳಿಗೆಲ್ಲ ಅಂಗವಾಗಿ ಓಂಕಾರೋಪಾಸನೆಯನ್ನು ವಿಧಿಸಲಾಗುತ್ತದೆ. ಹಿಂದೆ ಒಮ್ಮೆ ಮೇಧಾಕಾಮನಿಗೂ ಶ್ರೀಕಾಮನಿಗೂ ಜಪ- ಹೋಮಗಳನ್ನು ಹೇಳುವ ಸಂದರ್ಭದಲ್ಲಿ ಜಪಕ್ಕಾಗಿ ಹೇಳಿರುವ ಮಂತ್ರ - ಹಾಗೂ ಅದರಲ್ಲಿಯೂ ಓಂಕಾರದ ಪ್ರಾರ್ಥನೆಯೂ ಇದೆ. ಆದರೆ ಇಲ್ಲಿ ಓಂಕಾರವನ್ನೇ ಉಪಾಸನೆಮಾಡಬೇಕೆಂದು ಹೇಳಿರುವದು ವಿಶೇಷವಾಗಿದೆ.

ಇಲ್ಲಿ ಓಂಕಾರವನ್ನು ಉಪಾಸನೆಮಾಡಬೇಕು ಎಂದು ಬಾಯಿಬಿಟ್ಟು ಹೇಳುವ ವಿಧಿವಾಚಕಶಬ್ದಗಳು ಕಾಣಿಸುವದಿಲ್ಲ, ಆದರೂ ಓಂಕಾರದ ಸ್ತುತಿಯು ಇಲ್ಲಿರುವದರಿಂದಲೂ ಉಪಾಸನೆಯ ಪ್ರಕರಣವಿದಾದ್ದರಿಂದಲೂ **'ಓಮಿತಿ ಬ್ರಹ್ಮ'** ಎಂಬ ವಾಕ್ಯಕ್ಕೆ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು- ಎಂಬರ್ಥವನ್ನು ಕಲ್ಪಿಸಬೇಕು. ಓಂಕಾರವೆಂಬ ಪ್ರತೀಕದಿಂದ ಪರಬ್ರಹ್ಮ, ಅಪರಬ್ರಹ್ಮ- ಈ ಎರಡರಲ್ಲಿ ಯಾವದಾದರೊಂದನ್ನು ಸೇರುತ್ತಾನೆ- ಎಂದು ಶ್ರುತ್ಯಂತರದಲ್ಲಿ ಹೇಳಿಯೂ ಇರುತ್ತದೆ. ಇಲ್ಲಿರುವ ಸ್ತುತಿಯು ಸಹ ಈ ಉಪಾಸನೆಯನ್ನು ಮಾಡಬೇಕೆಂಬುದು ಶ್ರುತಿಯ ಅಭಿಪ್ರಾಯ- ಎಂಬುದನ್ನು ಸೂಚಿಸುತ್ತದೆ. ಓಂಕಾರದ ಉಪಾಸನೆಯನ್ನು ಹೇಳಿರುವ ಸಂದರ್ಭಲ್ಲಿ ಮೂರು ಆಶ್ರಮಗಳನ್ನು ಪರಾಮರ್ಶಮಾಡಿರುತ್ತದೆ. ಯಜ್ಞಾನುಷ್ಠಾನ, ಅಧ್ಯಯನ, ದಾನ- ಇವುಗಳನ್ನು ಮಾಡುವ ''ಗಾರ್ಹಸ್ಥ್ಯ''ವೆಂದೂ ಕೃಛ್ರ, ಚಾಂದ್ರಾಯಣ- ಮುಂತಾದವುಗಳನ್ನು ಆಚರಿಸುವ ವಾನಪ್ರಸ್ಥ ಅಥವಾ ತ್ರಿದಂಡಿ ಸಂನ್ಯಾಸಿಯು- ಇನ್ನು ಇತರ ಆಶ್ರಮವೆಂದರೆ ಗುರುವಿನ ಬಳಿಯಲ್ಲಿಯೇ ಇದ್ದುಕೊಂಡು ಯಾವಜ್ಜೀವವೂ ಗುರುಶುಶ್ರೂಷೆಯಿಂದ ದೇಹವನ್ನು ಸವೆಯಿಸುತ್ತಿರುವದು - ಎಂಬ ನೈಷ್ಠಿಕಬ್ರಹ್ಮಚಾರಿಯ ಆಶ್ರಮವೊಂದು - ಹೀಗೆ ಮೂರು ಆಶ್ರಮಗಳಿಲ್ಲದ್ದುಕೊಂಡು ಧರ್ಮಾಚರಣೆಯನ್ನು ಮಾಡುವವರು ಪುಣ್ಯಲೋಕಗಳನ್ನು ಪಡೆಯುತ್ತಾರೆ. ಆದರೆ ಓಂಕಾರರೂಪನಾದ ಆತ್ಮನನ್ನೇ ಉಪಾಸನೆಮಾಡುತ್ತಿರುವ ಪರಮಹಂಸನು ಅಮೃತತ್ವವನ್ನು ಪಡೆಯುತ್ತಾನೆ- ಎಂದು ಓಂಕಾರೋಪಾಸನೆಯನ್ನು ಹೇಳಿರುತ್ತದೆ. ವೇದವನ್ನೆಲ್ಲ ಓಂಕಾರದಲ್ಲಿ ಅಡಗಿಸಿಕೊಂಡು ಓಂಕಾರೋಪಾಸನೆಯನ್ನು ಮಾಡುವ ಸಂನ್ಯಾಸಿಯ ಧರ್ಮವೇ ಇದೆಂದು ಹೊಗಳುವ ಸಂದರ್ಭದಲ್ಲಿ ಅಲ್ಲಿ ಹೇಳಿರುವದೇನೆಂದರೆ :- ''ತದ್ಯಥಾ ಶಂಕುನಾ........ ಓಂಕಾರ ಏವೇದಂ ಸರ್ವಮ್'' (ಛಾಂ ೨-೨೩-೩) ಇದರ ಅರ್ಥವೇನೆಂದರೆ ''ಎಲೆಯ ನಡುವೆ ಇರುವ ನಾಳದಿಂದೆಲೆಯ ಅವಯವಗಳೆಲ್ಲ ಹೇಗೆ ವ್ಯಾಪ್ತವಾಗಿರುವವೋ ಹಾಗೆಯೇ ಬ್ರಹ್ಮಕ್ಕೆ ಪ್ರತೀಕವಾಗಿರುವ ಓಂಕಾರದಿಂದ ಶಬ್ದಜಾತವೆಲ್ಲವೂ ವ್ಯಾಪ್ತವಾಗಿರುತ್ತದೆ. ಯಾವಯಾವದು ಪರಮಾತ್ಮನ ಕಾರ್ಯವಾಗಿರುವದೋ ಅದೆಲ್ಲವೂ ನಾಮಧೇಯಮಾತ್ರವಾಗಿರುವದರಿಂದ ಎಲ್ಲವೂ ಓಂಕಾರವೇ. ಹೆಸರಿಗೆ ಹೆಸರಿಸಲ್ಪಡುವ ವಸ್ತುವು ಅಧೀನವಾಗಿರುತ್ತದೆ. ನಾಮರೂಪಾತ್ಮಕವೇ ಎಲ್ಲಾ ಜಗತ್ತಾದ್ದರಿಂದ ಬ್ರಹ್ಮದ ಪ್ರತೀಕವಾಗಿರುವ ಓಂಕಾರವು ಎಲ್ಲವೂ- ಎಂದು ಉಪಾಸಕನು ಧ್ಯಾನಿಸಬೇಕು.

ಓಂಕಾರವೆಂಬುದು ಅನುಕೃತಿಯು ''ಮಾಡುತ್ತೇನೆ''- ಎಂದು ಒಬ್ಬನು ಹೇಳಿದರೆ ''ಹಾಗೇ ಆಗಲಿ, ಮಾಡು'' ಎಂಬರ್ಥದಲ್ಲಿ ಸಂಸ್ಕೃತಭಾಷೆಯಲ್ಲಿ ಓಂ-

ಎನ್ನುತ್ತಾನೆ. ಹೀಗೆಯೇ 'ಹೋಗಿಬರುತ್ತೇನೆ' ಎಂದು ಒಬ್ಬನು ಹೇಳಿದರೆ 'ಓಂ' 'ಹೋಗಿ ಬಾ' ಎನ್ನುವರು. ಆದ್ದರಿಂದ ಓಂಕಾರವು ''ಅನುಕೃತಿ'' ಎನಿಸುತ್ತದೆ. ಯಜ್ಞದಲ್ಲಿ ''ಶ್ರಾವಯ'' (ಹೇಳು) ಎಂದಮೇಲೆ ಪ್ರತಿಶ್ರಾವಣ (ಮಂತ್ರ)ವನ್ನು ಮಾಡುತ್ತಾರೆ. ಸಾಮವನ್ನು ಗಾನಮಾಡುವವರು ಓಂಕಾರೋಚ್ಚಾರಣೆಯನ್ನು ಮಾಡಿದಮೇಲೆಯೇ ಗಾನಮಾಡುವರು. ಶಾಸ್ತ್ರವನ್ನು ಹೇಳುವ ಋತ್ವಿಜರು 'ಓಂ ಶೋಮ್' ಎಂದೇ ಶಂಸನರೂಪವಾದ ಋಕ್ಕನ್ನು ಹೇಳುತ್ತಾರೆ. ಅಧ್ವರ್ಯುವು ಓಂ ಎಂದೇ ಪ್ರತಿಗರವನ್ನು ಹೇಳುತ್ತಾನೆ. ಬ್ರಹ್ಮನು ಆಗಲಿ-ಎಂದು ಅನುಜ್ಞೆಯನ್ನು ಕೊಡುವದಕ್ಕೆ ಓಂ ಎಂದೇ ಉಚ್ಚರಿಸುತ್ತಾನೆ. ಹೀಗೆ ಯಜ್ಞದಲ್ಲಿ ಋತ್ವಿಜರೆಲ್ಲರೂ ಓಂಕಾರೋಚ್ಚಾರಣಪೂರ್ವಕವಾಗಿಯೇ ತಮ್ಮ ವೇದಭಾಗವನ್ನು ಹೇಳುತ್ತಾರೆ ಮತ್ತು ಕರ್ಮಗಳನ್ನು ಮಾಡುತ್ತಾರೆ. ಬ್ರಹ್ಮನು ಅಧ್ಯಯನಮಾಡುವದಕ್ಕೆ ಮೊದಲು ಓಂಕಾರ ವನ್ನು ಉಚ್ಚರಿಸುತ್ತಾನೆ. ವೇದಾಧ್ಯಯನವನ್ನು ಮಾಡುವೆನು- ಎಂಬ ಸಂಕಲ್ಪ ದಿಂದಲೇ ಅವನು ಓಂಕಾರವನ್ನು ಉಚ್ಚರಿಸುತ್ತಾನೆ. ಅದರಂತೆ ಅವನಿಗೆ ವೇದ ಪ್ರಾಪ್ತಿಯು ಆಗಿಯೂ ಆಗುತ್ತದೆ. ಅಥವಾ ಬ್ರಹ್ಮವನ್ನು ನಾನು ಪಡೆಯುವೆನು- ಎಂಬ ಸಂಕಲ್ಪವುಳ್ಳಾತನು ಓಂಕಾರೋಚ್ಚಾರಣೆಯನ್ನೇ ಮಾಡುತ್ತಾನೆ. ಅದರಿಂದ ಅವನಿಗೆ ಬ್ರಹ್ಮಪ್ರಾಪ್ತಿಯಾಗುತ್ತದೆ. ಹೀಗೆ ಓಂಕಾರದಿಂದ ಸರ್ವಕರ್ಮಗಳೂ ಸಫಲವಾಗುವದ ರಿಂದ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು- ಎಂಬುದು ಅನುವಾಕದ ಒಟ್ಟರ್ಥವು.

## ಕರ್ಮಗಳು ಪುರುಷಾರ್ಥಕ್ಕೆ ಸಾಧನ

**ಓಂ॥ ಋತಂ ಚ ..... ತದ್ಧಿ ತಪಸ್ತದ್ಧಿ ತಪಃ** ॥೧೭॥

ವಾಹೃತ್ಯಾತ್ಮನ ಉಪಾಸನೆಯಿಂದಲೇ ಸ್ವಾರಾಜ್ಯವನ್ನು ಪಡೆಯುತ್ತಾನೆ- ಎಂದು ಆರನೆಯ ಅನುವಾಕದಲ್ಲಿಯೇ ಹೇಳಿರುವದರಿಂದ ಶ್ರೌತಸ್ಮಾರ್ತಕರ್ಮಗಳು ವ್ಯರ್ಥವೆಂದು ಸಾಧಕರು ಭಾವಿಸಬಾರದು- ಎಂದು ಎಚ್ಚರಿಕೆಯನ್ನು ಕೊಡುವದಕ್ಕೆ ಈ ಅನುವಾಕವು ಬಂದಿರುತ್ತದೆ. ಋತ, ಸತ್ಯ - ಈ ಎರಡು ಶಬ್ದಗಳ ಅರ್ಥವನ್ನು ಆಗಲೆ ವಿವರಿಸಿದ್ದಾಗಿದೆ. ಋತವೆಂದರೆ ಶಾಸ್ತ್ರೋಕ್ತವಾದ ಕರ್ತವ್ಯವನ್ನು ಮನಸ್ಸಿನಲ್ಲಿ ಹಾಗೆಯೇ ಸರಿ- ಎಂದು ನಿಶ್ಚಯಿಸಿಕೊಳ್ಳುವದು. ಸತ್ಯವೆಂದರೆ ನಿಶ್ಚಯಿಸಿಕೊಂಡಂತೆ ನಡೆನುಡಿಗಳಲ್ಲಿ ಆಚರಣೆಗೆ ತರುವದು. ಈ ಋತಸತ್ಯಗಳನ್ನು ಅವಶ್ಯವಾಗಿ ಆಚರಿಸಬೇಕು. ತಪಸ್ಸು ಎಂದರೆ ಕೃಛ್ರ - ಚಾಂದ್ರಾಯಣ ಮುಂತಾದ ಕಾಯಕ್ಲೇಶ ಪ್ರಧಾನವಾದ ನಿಯಮಗಳು. ಶರೀರದಿಂದ ನಿಯಮಗಳನ್ನು ಪಾಲಿಸುವವರಿಗೆ ಮನಃಸಂಸ್ಕಾರಗಳು ಅಳವಡುತ್ತವೆ. ಅವುಗಳಿಲ್ಲದವನು ಸ್ವೇಚ್ಛಾಚಾರಕ್ಕೆ ಇಳಿಯು

ವದು ನಿಶ್ಚಿತವು. ಬರಿಯ ಶರೀರವನ್ನು ಕ್ಲೇಶಪಡಿಸಿದರೆ ಸಾಲದು. ಅಂತಃಕರಣವನ್ನೂ ಹೊರಗಿನ ಕರಣಗಳನ್ನೂ ಹಿಡಿತದಲ್ಲಿಟ್ಟುಕೊಳ್ಳುವದು ಅತ್ಯವಶ್ಯಕ. ಒಂದು ದೃಷ್ಟಿಯಿಂದ ನೋಡಿದರೆ ಬಾಹ್ಯೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ದಮ, ಅಂತಃಕರಣವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಶಮ- ಇವುಗಳೇ ಹೆಚ್ಚಿನ ತಪಸ್ಸುಗಳು. ಈ ತಪಸ್ಸೇ ಎಲ್ಲಕ್ಕಿಂತ ಹೆಚ್ಚಿನ ಧರ್ಮ- ಎಂದು ಶಾಸ್ತ್ರದಲ್ಲಿ ಈ ಅಂತರ ತಪಸ್ಸನ್ನು ಹೇಳಿರುತ್ತದೆ. ಬರಿಯ ಕರ್ಮೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡರೆ ಸಾಲದು. ಯಾವನು ಶರೀರೇಂದ್ರಿಯಗಳನ್ನು ಮಾತ್ರ ಹಿಡಿತದಲ್ಲಿಟ್ಟುಕೊಂಡು ಮನಸ್ಸಿನಲ್ಲಿ ವಿಷಯಗಳನ್ನು ಸ್ಮರಿಸುತ್ತಿರುವನೋ ಅವನು **ಮಿಥ್ಯಾಚಾರನು, ಪಾಪಾಚಾರನು-** ಎಂದು ಗೀತೆಯಲ್ಲಿ ನಿಂದಿಸಿರುತ್ತದೆ. ಆದ್ದರಿಂದ ಸಾಧಕನಾದವನು ಇಂದ್ರಿಯಮನಸ್ಸುಗಳೆರಡನ್ನೂ ಹಿಡಿತದಲ್ಲಿಟ್ಟುಕೊಂಡು ಶರೀರಪ್ರಧಾನವಾದ ನಿಯಮಗಳನ್ನು ವಶಪಡಿಸಿಕೊಳ್ಳಬೇಕು.

ಗೃಹಸ್ಥನಾದವನು ಹೀಗೆ ಯಮನಿಯಮಗಳನ್ನು ಸಾಧ್ಯವಾದಮಟ್ಟಿಗೂ ಆಚರಿಸುತ್ತಾ ಅಗ್ನ್ಯಾಧಾನವನ್ನು ಮಾಡಿ ಅಗ್ನಿಹೋತ್ರಹೋಮವನ್ನು ಮಾಡುತ್ತಾ ದೇವತೆಗಳನ್ನು ತೃಪ್ತಿಪಡಿಸುವದಕ್ಕೆ ಪ್ರಯತ್ನಿಸಬೇಕು. ತನ್ನ ಕುಟುಂಬಭರಣವೊಂದರಲ್ಲಿಯೇ ನಿಲ್ಲದೆ ಅತಿಥಿಸತ್ಕಾರವನ್ನು ಧರ್ಮಬುದ್ಧಿಯಿಂದ ಆಚರಿಸಬೇಕು. ಲೌಕಿಕವ್ಯವಹಾರವನ್ನು ತನ್ನ ಪಾಲಿಗೆ ಬಂದಮಟ್ಟಿಗೆ ಮಾಡಬೇಕು. ಋತುಕಾಲದಲ್ಲಿ ಭಾರ್ಯಾಗಮನದಿಂದ ಪುತ್ರಪ್ರಾಪ್ತಿಯನ್ನು ಮಾಡಿಕೊಳ್ಳಬೇಕು. ಪುತ್ರನಿಗೆ ಕಾಲದಲ್ಲಿ ವಿವಾಹವನ್ನು ಮಾಡಿ ಪೌತ್ರರನ್ನು ಪಡೆಯಬೇಕು. ಇದಿಷ್ಟು ಗೃಹಸ್ಥನ ಕರ್ತವ್ಯಗಳು. ದ್ವಿಜನಾದವನು ಈ ಕರ್ಮಗಳನ್ನು ಮಾಡುತ್ತಾ ವೇದಾಧ್ಯಯನವನ್ನು ಮಾಡುತ್ತಿರಬೇಕು. ಅಧ್ಯಯನಮಾಡಿದ ವೇದವನ್ನು ಮರೆತರೆ ಬ್ರಹ್ಮೋಜ್ಝ- ಎಂಬ ಪಾಪವು ಗಂಟುಬೀಳುವದು. ತಾನು ಅಧ್ಯಯನಮಾಡುವದಲ್ಲದೆ ಶಿಷ್ಯನಿಗೆ ಅಥವಾ ಮಕ್ಕಳಿಗೆ ಅಧ್ಯಯನಮಾಡಿಸಬೇಕು. ಅಧ್ಯಯನಮಾಡಿದವನಿಗೇ ಅಲ್ಲವೆ, ಅರ್ಥಜ್ಞಾನವಾದೀತು ? ಹೀಗೆ ಅರ್ಥಜ್ಞಾನವನ್ನು ಸಂಪಾದಿಸಿಕೊಂಡವನಿಗೇ ಅಲ್ಲವೆ, ಧರ್ಮಾನುಷ್ಠಾನವು ? ಧರ್ಮದಿಂದಲೇ ಶ್ರೇಯಃಪ್ರಾಪ್ತಿಯಾಗಬೇಕಾಗಿದೆ. ಆದ್ದರಿಂದ ದ್ವಿಜನು- ಅದರಲ್ಲಿಯೂ ಬ್ರಾಹ್ಮಣನು ಸ್ವಾಧ್ಯಾಯ- ಎಂದರೆ ನಿಯಮದಿಂದ ಅಧ್ಯಯನವನ್ನು ಮಾಡುವದು. ಮತ್ತು ಪ್ರವಚನ- ಇವೆರಡನ್ನೂ ಕಾಪಾಡಿಕೊಂಡು ಬರಬೇಕು. ಯಾವ ಕರ್ಮವನ್ನು ಮಾಡಲಿ, ಅಧ್ಯಯನ- ಪ್ರವಚನಗಳನ್ನು ಮಾತ್ರ ಬ್ರಾಹ್ಮಣನು ಬಿಡಬಾರದು. ಸತ್ಸಂತಾನವನ್ನು ಪಡೆಯುವದು, ಋತಸತ್ಯಗಳನ್ನೂ ಶಮದಮಾದಿಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡಿರುವದು- ಇವು ಅವಶ್ಯವಾಗಿ

ಮಾಡಬೇಕಾದ ಸಾಧನಗಳಾಗಿವೆ. ಕಲಿಯುಗದಲ್ಲಿ ಬ್ರಾಹ್ಮಣನು ಅಧ್ಯಯನಾದಿ ಧರ್ಮಗಳನ್ನು ಬಿಟ್ಟು ಕರ್ಮಭ್ರಷ್ಟನಾದ್ದರಿಂದಲೇ ಅವನನ್ನು ಅನುಕರಿಸಿದ ಇತರ ವರ್ಣದವರೂ ಕಾಮಪ್ರಧಾನವಾದ ಕರ್ಮಗಳಿಗೆ ಕೈ ಹಾಕಿದರು. ಇದರಿಂದ ಆರ್ಯ ಸನಾತನಸಂಸ್ಕೃತಿಯೇ ಲುಪ್ತಪ್ರಾಯವಾಯಿತು. ಹೀಗೆ ಸಾಮಾನ್ಯಧರ್ಮಗಳೇ ಇಲ್ಲದವರಿಗೆ ಆಂತರಿಕವಾದ ಉಪಾಸನೆಗಳು ಹೇಗೆ ದಕ್ಕಬೇಕು ? ಆದ್ದರಿಂದ ಗೃಹಸ್ಥನು ಶಕ್ತವಾದಷ್ಟುಮಟ್ಟಿಗೂ ಅಧ್ಯಯನ, ಪ್ರವಚನ, ತಪಸ್ಸುಗಳನ್ನು ತಪ್ಪದೆ ಪಾಲಿಸಿಕೊಂಡು ಪಾಪಾಚಾರಕ್ಕೆ ಅವಕಾಶವನ್ನು ಕೊಡದೆ ಇರಬೇಕು- ಎಂದು ಇಲ್ಲಿ ತಿಳಿಸಿದೆ.

ಸತ್ಯವನ್ನೇ ಕಾಪಾಡಿಕೊಳ್ಳಬೇಕೆಂದು ಸತ್ಯವಚನನಾದ ರಾಥೀತರನು- ಎಂದರೆ ರಥೀತರವಂಶದಲ್ಲಿ ಹುಟ್ಟಿದ ಆಚಾರ್ಯನು ಉಪದೇಶಿಸಿರುತ್ತಾನೆ. ತಪಸ್ಸನ್ನು ಬಿಡಬಾರದು- ಎಂದು ತಪೋನಿಷ್ಠನೆಂಬ ಪುರುಶಿಷ್ಟಿಯ ಮಗನು ಉಪದೇಶಿಸಿರುತ್ತಾನೆ. ಸ್ವಾಧ್ಯಾಯಪ್ರವಚನಗಳೇ ಮುಖ್ಯ ; ಇವುಗಳಿಗೆ ಅಧೀನವಾಗಿಯೇ ಮಿಕ್ಕ ಧರ್ಮಗಳು ಅಳವಡುವವು- ಎಂದು ಮುದ್ಗಲನ ಮಗನಾದ ನಾಕನೆಂಬ ಮೌದ್ಗಲ್ಯನು ಅಭಿಪ್ರಾಯಪಟ್ಟಿರುತ್ತಾನೆ. ಅಂತೂ ಸತ್ಯ, ತಪಸ್ಸು, ಸ್ವಾಧ್ಯಾಯ ಪ್ರವಚನಾನುಷ್ಠಾನ- ಇವುಗಳನ್ನು ಎಂದಿಗೂ ಬಿಡಬಾರದು ಎಂಬುದು ಅನುವಾಕದ ಅಭಿಪ್ರಾಯ.

ಯಾರಿಗೆ ಇಲ್ಲಿ ಹೇಳಿರುವ ಕರ್ಮಾನುಷ್ಠಾನಗಳು ಪ್ರಿಯವಾಗಿರುವವೋ ಅಂಥವರು ಬಹಿಃಶುದ್ಧಿಯನ್ನೂ ಅಂತಃಶುದ್ಧಿಯನ್ನೂ ಪಡೆದುಕೊಂಡು ಉಪಾಸನಾನುಷ್ಠಾನಕ್ಕೆ ಅರ್ಹರಾಗುವರು. ಅದರಿಂದ ಅವರಿಗೆ ಸ್ವಾರಾಜ್ಯಪ್ರಾಪ್ತ್ಯಂತವಾದ ಉತ್ತಮ ಶ್ರೇಯಸ್ಸು ದೊರಕುವದು.

## ಸ್ವಾಧ್ಯಾಯದ ಫಲ

**ಓಂ ॥ ಅಹಂ ವೃಕ್ಷಸ್ಯ ರೇರಿವಾ...... ವೇದಾನುವಚನಮ್ ॥೧೦॥**

ಇಲ್ಲಿ ಕೊಟ್ಟಿರುವದು **ತ್ರಿಶಂಕು**ವೆಂಬ ಋಷಿಗೆ ಆರ್ಷದರ್ಶನದಿಂದ ದೊರೆತ ಮಂತ್ರವು. ಇದರಲ್ಲಿರುವ ಅಭಿಪ್ರಾಯವೇನೆಂದರೆ :- ''ನಾನೇ ಸಂಸಾರವೃಕ್ಷದ ಅಂತರ್ಯಾಮಿಯ ರೂಪದಿಂದ ಪ್ರೇರಕನು. ಅಂತರ್ಯಾಮಿಯಾದ ನನ್ನ ವೀರ್ಯದಿಂದಲೇ ಈ ವೃಕ್ಷವು ಬೆಳೆದುಕೊಂಡು ಹಬ್ಬಿರುತ್ತದೆ. ನನ್ನ ಕೀರ್ತಿಯು ಪರ್ವತದ ಶಿಖರದಂತೆ ಉನ್ನತವಾಗಿರುತ್ತದೆ. ನನ್ನ ಮೂಲವಾದ ಕಾರಣವಾದ ಬ್ರಹ್ಮಸ್ವರೂಪವು ಪರಮಪವಿತ್ರವಾಗಿರುತ್ತದೆ. ಸೂರ್ಯಮಂಡಲದಲ್ಲಿ ವಿಶುದ್ಧವಾದ ಅಮೃತತತ್ವವಿದೆಯೆಂದು ಹೇಗೆ ಶಾಸ್ತ್ರಪ್ರಸಿದ್ಧಿಯಿರುವದೋ ಹಾಗೆಯೇ ನನ್ನಲ್ಲಿಯೂ ಇರುತ್ತದೆ.

ಅತ್ಯಂತಕಾಂತಿಯುಕ್ತವಾದ ನಿಧಿಯಂತಿರುವ ಬ್ರಹ್ಮಜ್ಞಾನವು ನನಗೆ ದೊರೆತಿರುತ್ತದೆ. ಸರ್ವಜ್ಞಸ್ವರೂಪವಾದ ವಿಶುದ್ಧಜ್ಞಾನವೇ ನನ್ನದಾಗಿರುತ್ತದೆ. ನಾನು ಅಮೃತ ಸ್ವರೂಪನು ; ಅಕ್ಷಯಸ್ವರೂಪನೂ ಆಗಿರುತ್ತೇನೆ''.

ಇಂಥ ಬ್ರಹ್ಮಾತ್ಮಜ್ಞಾನವನ್ನು ಗರ್ಭೀಕರಿಸಿಕೊಂಡಿರುವ ಮಂತ್ರವು ತ್ರಿಶಂಕು ಋಷಿಯ ಮನಸ್ಸಿನಲ್ಲಿ ಹೇಗೆ ಹೊಳೆಯಿತು ? ಆತನಿಗೆ ಋತಸತ್ಯಾದಿಧರ್ಮಗಳನ್ನು ಆಚರಿಸುತ್ತಾ ಬಂದಹಾಗೆಲ್ಲ ಮನಸ್ಸು ವಿಶುದ್ಧವಾಗುತ್ತಾ ಬಂದಿತು. ಬಳಿಕ ಸರ್ವರಿಗೂ ಆತ್ಮನೇ ಆಗಿರುವ ಪರಬ್ರಹ್ಮತತ್ತ್ವದ ವಿಜ್ಞಾನವು ಬಂದಿತು. ಆ ವಿಜ್ಞಾನದ ಫಲವಾಗಿ ಈ ಮಂತ್ರವು ಹೃದಯದಿಂದ ಹೊರಹೊಮ್ಮಿ ಬಾಯಲ್ಲಿ ಬಂದಿತು. ಬೃಹದಾರಣ್ಯಕೋಪನಿಷತ್ತಿನಲ್ಲಿ ವಾಮದೇವಋಷಿಗೆ ''ಅಹಂ ಬ್ರಹ್ಮಾಸ್ಮಿ'' (ನಾನು ಬ್ರಹ್ಮವಾಗಿರುವೆನು) ಎಂಬ ಶಾಸ್ತ್ರದೃಷ್ಟಿಯು ಹೊಳೆದಾಗ ''ಅಹಂ ಮನುರಭವಮ್'' (ನಾನು ಮನುವಾಗಿದ್ದೆನು) ಎಂಬ ಸರ್ವಾತ್ಮಭಾವನೆಯ ಮಂತ್ರವು ಹೇಗೆ ಹೊರಬಿದ್ದಿತೋ ಹಾಗೆಯೇ ಈ ಮಂತ್ರವೂ ತ್ರಿಶಂಕುವಿನ ಬಾಯಿಂದ ಹೊರಬಿದ್ದಿತು.

ವಿಶುದ್ಧಹೃದಯರಾದ ಋಷಿಗಳಿಗೆ ಹೀಗೆ ಹೊರಬಿದ್ದ ಇಂಥ ಮಂತ್ರಗಳನ್ನು ಸಾಧಕರಾದ ನಾವು ನಿತ್ಯವೂ ಜಪಿಸಬೇಕು. ಪ್ರಕೃತಮಂತ್ರವು ಉಪಾಸನಾಪ್ರಕರಣದಲ್ಲಿ ಬಂದಿರುವದರಿಂದ ಇದನ್ನು ಜಪಿಸುವದರಿಂದ ಸಾಧಕರಿಗೆ ಚಿತ್ತಶುದ್ಧಿಯಾಗುವದು. ಋತಸತ್ಯಾದಿಕರ್ಮಗಳನ್ನೂ ಮಾಡಬೇಕೆಂದು ಉಪದೇಶಿಸಿದ ಅನುವಾಕವಾದ ಬಳಿಕ ಈ ಮಂತ್ರವನ್ನು ಕೊಟ್ಟಿರುವದರಿಂದ ಯಾರು ಶ್ರೌತಸ್ಮಾರ್ತಕರ್ಮಗಳಲ್ಲಿ ನಿಷ್ಠರಾಗಿರುತ್ತಾರೋ ಅಂಥ ನಿಷ್ಕಾಮಸಾಧಕರಿಗೆ ಇಂಥ ಆತ್ಮಾದಿವಿಷಯಕವಾದ ಆರ್ಷಶಾಸ್ತ್ರಗಳನ್ನು ತಿಳಿಸುವ ದರ್ಶನಗಳು ಸಿದ್ಧಿಸುವವು- ಎಂದು ಹೇಳಿದಂತೆ ಆಯಿತು.

## ಕರ್ಮಗಳ ಅನುಷ್ಠಾನವು ಜ್ಞಾನಕ್ಕೆ ಸಾಧನ

**ಓಂ ॥ ವೇದಮನೂಚ್ಯ ಆಚಾರ್ಯಃ....... ನೋ ಇತರಾಣಿ ॥ ೨೦ ॥**

ಮೇಲೆ ಹನ್ನೊಂದನೆಯ ಅನುವಾಕದ ಮೊದಲನೆಯ ಭಾಗವನ್ನು ಕೊಡಲಾಗಿದೆ. ಪೂರ್ಣಪಾಠವನ್ನು ಉಪನಿಷತ್ತಿನ ಅಧ್ಯಯನದಿಂದ ತಿಳಿಯಬೇಕು. ಇದರಲ್ಲಿ ಜ್ಞಾನವು ಉಂಟಾಗುವ ಮೊದಲು ನಿಯಮದಿಂದ ಮಾಡಲೇಬೇಕಾದ ಕರ್ತವ್ಯಕರ್ಮಗಳನ್ನು ಹೇಳಿದೆ. ಯಾವನು ಕರ್ತವ್ಯಕರ್ಮಗಳನ್ನು ನಿಯಮದಿಂದ ಮಾಡುತ್ತಿರುತ್ತಾನೋ ಅವನಿಗೆ ಪಾಪದ ಪರಿಹಾರವಾಗಿ ಅಂತಃಕರಣದಲ್ಲಿ ಉತ್ತಮ ಸಂಸ್ಕಾರವುಂಟಾಗುವದು. ಯಾವನ ಅಂತಃಕರಣವು ಸಂಸ್ಕಾರವಾಗಿರುವದೋ ಅವನಿಗೆ ಸುಲಭವಾಗಿ ಜ್ಞಾನವುಂಟಾಗುವದು.

ಹಿಂದಿನ ಕಾಲದಲ್ಲಿ ಗುರುಗಳ ಬಳಿಯಲ್ಲಿದ್ದುಕೊಂಡು ವೇದಾಧ್ಯಯನವನ್ನು ಮಾಡಿ ಗೃಹಸ್ಥನಾಗುವದಕ್ಕೆ ಅನುಜ್ಞೆಯನ್ನು ಪಡೆದುಕೊಂಡ ವಿದ್ಯಾರ್ಥಿಗಳಿಗೆ ಗುರುಗಳಾದವರು 'ಇನ್ನು ಮೇಲೆ ಹೀಗೆ ನಡೆದುಕೊಳ್ಳಿರಿ' ಎಂದು ಬುದ್ಧಿವಾದವನ್ನು ಹೇಳಿಕಳುಹಿಸುತ್ತಿದ್ದರು. ಈ ಅನುವಾಕದಲ್ಲಿ ಗುರುಗಳು ಮಾಡಬೇಕಾದ ಉಪದೇಶ ವನ್ನು ಸಂಗ್ರಹಿಸಿಕೊಟ್ಟಿರುತ್ತದೆ. 'ಸತ್ಯವನ್ನೇ ನುಡಿಯಬೇಕು. ಶಾಸ್ತ್ರಾರ್ಥವನ್ನು ಆಚರಣೆಗೆ ತರುವದೇ ಧರ್ಮವು, ಧರ್ಮವನ್ನೇ ಆಚರಿಸಬೇಕು. ಸತ್ಯವನ್ನು ನುಡಿಯುವಾಗಲೂ ಪ್ರಿಯವನ್ನು ನುಡಿಯಬೇಕು. ಅಪ್ರಿಯವಾದ ಸತ್ಯವನ್ನು ಆಡ ಬಾರದು. ಪ್ರಿಯವಾದ ಅನೃತವನ್ನೂ ನುಡಿಯಬಾರದು. ಇದೇ ಸನಾತನ ಧರ್ಮವು- ಎಂದು ಸ್ಮೃತಿಯಿದೆ. ಯಾವನು ಸತ್ಯವನ್ನೇ ನುಡಿಯುತ್ತಾ ಧರ್ಮವನ್ನೇ ಆಚರಿಸುವೆನೆಂದು ಸಂಕಲ್ಪವನ್ನು ಮಾಡಿಕೊಳ್ಳುವನೋ ಅವನು ಆತ್ಮಜ್ಞಾನದ ದಾರಿಯನ್ನು ತುಳಿದವನೆಂದು ತಿಳಿಯಬೇಕು.

ಗೃಹಸ್ಥನಾದವನಿಗೆ ಕುಟುಂಬಭರಣದ ಹೊಣೆಗಾರಿಕೆಯಿರುತ್ತದೆ. ಆದರೆ ತನ್ನ ಕುಟುಂಬದವರೆಲ್ಲರೂ ಧರ್ಮವನ್ನೇ ಆಚರಿಸುವದಕ್ಕೆ ಅನೂಕೂಲವಾಗಲೆಂದು ಕ್ಲೃಪ್ತಕಾಲದಲ್ಲಿ ಅಧ್ಯಯನಮಾಡಬೇಕು. ಇದನ್ನು ತಿಳಿಸುವದಕ್ಕೆ ಸ್ವಾಧ್ಯಾಯದ ವಿಷಯಕ್ಕೆ ಪ್ರಮಾದವನ್ನು ಮಾಡಬೇಡ- ಎಂದು ಇಲ್ಲಿ ಹೇಳಿದೆ. ಇನ್ನು ಗುರುಕುಲದಿಂದ ಹೊರಡುವ ಮುಂಚೆ ವಿದ್ಯಾನಿಷ್ಕ್ರಯಕ್ಕಾಗಿ ಗುರುವಿಗೆ ಇಷ್ಟವಾದ ವಸ್ತುವನ್ನು ತಂದುಕೊಡಬೇಕು. ಹಿಂದೆ ನಮ್ಮ ಈಗಿನ ಸ್ಕೂಲುಗಳಲ್ಲಿರುವಂತೆ ತಿಂಗಳಿಗೆ ಇಂತಿಷ್ಟು ಫೀಜು ಕೊಡಬೇಕು- ಎಂಬ ನಿಯಮವಿರಲಿಲ್ಲ. ವೇದವನ್ನು ಇಂತಿಷ್ಟು ದಕ್ಷಿಣೆಗೆ ಹೇಳಿಕೊಡುವೆನೆಂಬಿದು ಪಾಪಕರವೆಂಬ ಶಾಸ್ತ್ರವಚನವನ್ನೇ ಅವರು ಪಾಲಿಸುತ್ತಿದ್ದರು. ಬ್ರಹ್ಮಚಾರಿಯು ತನ್ನ ಯೋಗ್ಯತೆಗೆ ತಕ್ಕಂತೆ ವಿದ್ಯಾಭ್ಯಾಸದ ಕಾಲಾವಧಿಯು ಮುಗಿಯುತ್ತಲೂ ಗುರುಗಳಿಗೆ ಬೇಕಾಗಬಹುದೆಂದು ತಿಳಿದ ಧನವನ್ನು- ವಸ್ತುವಿಶೇಷವನ್ನೂ ಕೊಟ್ಟು ಗೃಹಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದನು.

'ಪ್ರಜಾತಂತುವನ್ನು ಕಡಿದುಹಾಕಬೇಡ'- ಎಂಬ ಉಪದೇಶವು ಧರ್ಮ ಪಾಲನೆಗಾಗಿ ವಿವಾಹವಾಗಿ ಶಾಸ್ತ್ರೋಕ್ತರೀತಿಯಿಂದ ಮಕ್ಕಳನ್ನು ಪಡೆಯಬೇಕು- ಎಂದು ತಿಳಿಸುತ್ತದೆ. ಈ ನಿಯಮವನ್ನು ನಾವು ಈಗ ಅನುಸರಿಸುತ್ತಿದ್ದರೆ ಅನವಶ್ಯವಾಗಿ ಪ್ರಜಾ ಸಂಖ್ಯೆಯೂ ಹೆಚ್ಚುತ್ತಿರಲಿಲ್ಲ. ಗೃಹಸ್ಥನಿಯಮದಿಂದಲೇ ಪತ್ನೀಸಂಯೋಗ ವನ್ನು ಮಾಡಿ ಸತ್ಪ್ರಜೆಯನ್ನು ಪಡೆದು ವಂಶೋದ್ಧಾರಕ್ಕೆ ಹಾಗೂ ದೇಶಕ್ಕೆ ಕ್ಷೇಮವನ್ನು ತರಬಹುದಾಗಿತ್ತು. ಇಂಥ ಉಪದೇಶವು ಇಲ್ಲಿದೆ.

ಸತ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಧರ್ಮವನ್ನೂ ಕಾಪಾಡಿ ಕೊಳ್ಳಬೇಕು. ಕುಶಲವನ್ನು ಎಂದರೆ ಆತ್ಮರಕ್ಷಣೆಗೆ ಬೇಕಾದ ಕರ್ಮವನ್ನು ಕಾಪಾಡಿ

ಕೊಳ್ಳಬೇಕು. ಇವುಗಳನ್ನು ಎಂದಿಗೂ ಅಸಡ್ಡೆಮಾಡಬಾರದು. ಎಂಬ ಮೂರು ಜೀವನಸಾಧನಗಳ ಉಪದೇಶವೂ ಇಲ್ಲಿದೆ. ಮನುಷ್ಯನು ಜೀವನದ ಗುರಿಯನ್ನು ಲಕ್ಷ್ಯದಲ್ಲಿಡದಿದ್ದರೆ ಸ್ವೇಚ್ಛೆಯಿಂದ ನಡೆದು ಇಹಪರಗಳಿಂದ ವಂಚಿತನಾಗುವನು. ಆದ್ದರಿಂದ ಈ ಮೂರು ಸತ್ಯಗಳನ್ನು ಮೀರದಂತೆ ಎಚ್ಚರಿಕೆಯನ್ನು ವಹಿಸಬೇಕು. ಹೀಗೆ ಭೂತಿಯನ್ನು ಎಂದರೆ ಮಂಗಲಕಾರ್ಯವನ್ನೇ ಮಾಡುತ್ತಿರಬೇಕು. ಸ್ವಾಧ್ಯಾಯ ಪ್ರವಚನಗಳನ್ನು ಅಸಡ್ಡೆಮಾಡಲೇಬಾರದು. ದೇವಪಿತೃಕಾರ್ಯಗಳನ್ನೂ ಎಚ್ಚರ ತಪ್ಪದೆ ಮಾಡಬೇಕು. ಈ ಸೂತ್ರಗಳನ್ನು ಅನುಸರಿಸುವದು ಪರದಲ್ಲಿ ಸುಖಕ್ಕೆ ಕಾರಣ ವಾಗುವದು.

ಇನ್ನು ತಾಯಿಯನ್ನು ದೇವರಂತೆ ಕಾಣಬೇಕು. ತಂದೆಯನ್ನೂ ದೇವರಂತೆ ಕಾಣಬೇಕು. ಆಚಾರ್ಯನನ್ನು ದೇವರಂತೆ ಕಾಣಬೇಕು. ಅತಿಥಿಗಳನ್ನು ದೇವರಂತೆ ಕಾಣಬೇಕು- ಎಂಬಿವು ಕೇವಲ ಕರ್ತವ್ಯಕರ್ಮಗಳಲ್ಲ. ದೇವತೆಗಳನ್ನು ಉಪಾಸನೆ ಮಾಡುವಾಗ ಹೇಗೆ ಭಕ್ತಿಭಾವದಿಂದ ಇರಬೇಕೋ ಹಾಗೆಯೇ ಮಾತಾಪಿತೃಗಳ ವಿಷಯದಲ್ಲಿಯೂ ನಡೆದುಕೊಳ್ಳಬೇಕು. ಇವು ಪುಣ್ಯಕಾರ್ಯಗಳು. ಇವುಗಳಿಂದ ಪರಸುಖಕ್ಕೆ ಬೇಕಾದ ಅದೃಷ್ಟಫಲವೂ ಉಂಟಾಗುವದು- ಎಂದು ಹೇಳಿರುತ್ತದೆ. ಯಾವದು ಕಾರ್ಯ, ಯಾವದು ಅಕಾರ್ಯ ಎಂಬುದನ್ನು ಗೊತ್ತುಮಾಡುವದಕ್ಕೆ ಇಲ್ಲಿ ಎರಡು ಉಪದೇಶಗಳನ್ನು ಹೇಳಿರುತ್ತದೆ. ಗೀತೆಯಲ್ಲಿ ಹೇಳಿರುವಂತೆ 'ಇಂಥವನ್ನು ಮಾಡಬಾರದು ; ಇಂಥವನ್ನೇ ಮಾಡಬೇಕು' ಎಂಬಿದನ್ನು ಮನಸ್ಸಿನಲ್ಲಿ ತಂದು ಕೊಂಡೇ ಕಾರ್ಯಾಕಾರ್ಯಗಳನ್ನು ನಿಶ್ಚಯಿಸಿಕೊಳ್ಳಬೇಕು. ಶಾಸ್ತ್ರೋಪದೇಶಕ್ಕಿಂತ ಆಚಾರ್ಯರ ನಡೆಯ ಆದರ್ಶವನ್ನು ಮನಸ್ಸಿಗೆ ತಂದುಕೊಂಡು ಅವರ ಸದಾಚಾರ ವನ್ನೇ ಅನುಸರಿಸಬೇಕು. ಆದರೆ ಅವರು ಪ್ರಮಾದದಿಂದ ಯಾವದಾದರೂ ಅಶಿಷ್ಟಾಚಾರವನ್ನು ಮಾಡಿದ್ದರೆ ಅವುಗಳನ್ನು ಬಿಡಬೇಕು, ಸರ್ವಥಾ ಸತ್ಕರ್ಮನಿರತನೇ ಆಗಿರಬೇಕು- ಎಂಬುದು ಇಲ್ಲಿ ಗುರೂಪದೇಶದ ಸಾರವು. ಇದರಿಂದ ವೇದಾ ಧ್ಯಯನವನ್ನು ಮಾಡುವದು, ಧರ್ಮಜಿಜ್ಞಾಸೆಯನ್ನು ಮಾಡಿ ಧರ್ಮಾಧರ್ಮ ವಿವೇಕವನ್ನು ಮಾಡಿಕೊಳ್ಳುವದು, ಅಧರ್ಮವನ್ನು ಬಿಟ್ಟು ಧರ್ಮವನ್ನೇ ಆಚರಿಸು ವದು - ಇವೇ ಜೀವನದ ಗುರಿಯಾಗಿರಬೇಕು- ಎಂದು ಹೇಳಿದಂತಾಯಿತು.[1]

ಆಚಾರ್ಯನು ಶಿಷ್ಯನಿಗೆ ಅನುಶಾಸನಮಾಡಿರುವ ಹಿತೋಪದೇಶಗಳನ್ನು ಈಗ ಉಪಸಂಹಾರಮಾಡಲಾಗುವದು. ಗುರುವಿನ ಅಪ್ಪಣೆ ಹೀಗೆ ಇದೆ. ''ಎಲೈ ಶಿಷ್ಯನೆ,

1. ಇಲ್ಲಿಗೆ ಶ್ರೀಶ್ರೀಗಳವರ ಬರವಣಿಗೆ ನಿಂತುಬಿಟ್ಟಿದೆ. 1973 ನೇ ಜನವರಿ 26ನೇ ತಾರೀಖು ಎಂಬ ಉಲ್ಲೇಖವಿದೆ. ಈ ಬರವಣಿಗೆಯನ್ನು ಸದ್ಗುರುಗಳ ಪ್ರೇರಣೆಯಂತೆ ಮತ್ತೆ ಮುಂದುವರಿಸಲಾಗುವದು. ವಾಚಕರ ಸಹಕಾರವನ್ನು ಬೇಡಲಾಗಿದೆ

ಈವರೆಗೆ ನಾನು ಹೇಳಿದ್ದೆಲ್ಲವನ್ನೂ 'ನನ್ನ ಆಜ್ಞೆ' ಎಂದು ತಿಳಿದುಕೊ. ಹಾಗೂ ಇದೇ ನಿನಗೆ ಕಿವಿಮಾತು- ಎಂದು ಭಾವಿಸಿಕೊ'' ಎಂಬುದಾಗಿ ಹೇಳಿ ಅನಂತರ ಮತ್ತೊಮ್ಮೆ ಆಚಾರ್ಯನು ಹೀಗೆನ್ನುತ್ತಾನೆ. ''ಈ ನನ್ನ ಮಾತುಗಳನ್ನು ವೇದಗಳ ಸಾರವಾದ ಉಪನಿಷತ್ತು ಎಂದು ತಿಳಿ. ಇದೇ ನನ್ನ ಆಜ್ಞೆಯು. ಇನ್ನು ಮುಂದೆ ನೀನು ಹೀಗೆಯೇ ನಡೆದುಕೊಳ್ಳಬೇಕು. ಮತ್ತು ಹೀಗೆಯೇ ಧರ್ಮಮಾರ್ಗವನ್ನೇ ಅನುಸಂಧಾನ ಮಾಡುತ್ತಾ ಪವಿತ್ರಜೀವನವನ್ನು ಸಾಧಿಸಬೇಕು'' ಹೀಗೆಂದು ಹೇಳಿ ಗುರುವು ತನ್ನ ಉಪದೇಶಗಳನ್ನು ಪೂರ್ಣಗೊಳಿಸಿರುತ್ತಾನೆ.

ಈಗಿನ ವಿಶ್ವವಿದ್ಯಾನಿಲಯಗಳಲ್ಲಿ ಪದವೀಧರರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ (ಕಾನ್‌ವೊಕೇಷನ್) ಸಂದರ್ಭದಲ್ಲಿ ಯಾರಾದರೂ ಉತ್ತಮ ಪ್ರಾಚಾರ್ಯರಿಂದ ಇಂಥ ಅನುಜ್ಞೆಗಳನ್ನು ಸರ್ಕಾರದವರು ಪದವೀಧರರಿಗೆ ಬೋಧಿಸುತ್ತಾರೆ. ಇದಕ್ಕೆ ಮೂಲವು ಈ ಉಪನಿಷದ್ವಾಕ್ಯಗಳೇ ಆಗಿವೆ. ಪದವೀಧರ ರಾದವರು ಆ ಸಮಾರಂಭದಲ್ಲಿ ತಾವು ಕೈಗೊಂಡ ಪ್ರತಿಜ್ಞೆಗಳನ್ನು ಜೀವಮಾನ ಪರ್ಯಂತವೂ ಸಾಧಿಸಬೇಕು. ಇದು ಒಂದು ತಪಸ್ಸೆಂದು ಭಾವಿಸಬೇಕು. ಹಾಗೂ ವಿದ್ಯಾವಂತನು ಆಚರಿಸುವ ನಡೆನುಡಿಗಳನ್ನೇ ಇತರರೂ ಅನುಕರಿಸುತ್ತಾರೆ. ಇದರಿಂದ ದೇಶದಲ್ಲಿ ಸುಖಶಾಂತಿಗಳು ನೆಲೆಸುವದರಲ್ಲಿ ಸಂಶಯವಿಲ್ಲ. ಈ ನಿತ್ಯಸತ್ಯಗಳು ದೇಶಕಾಲಾತೀತವಾಗಿರುವದರಿಂದ ಇವು ಬದಲಾಯಿಸಲೇ ಆರವು. ಭಾರತೀಯರಾದ ನಾವು ಈ ಆರ್ಷಸಂದೇಶಗಳನ್ನು ಕಡ್ಡಾಯವಾಗಿ ಪರಿಪಾಲಿಸ ಬೇಕು. ಒಂದು ವೇಳೆ ಪುಸ್ತಕವಿದ್ಯೆಯಿಲ್ಲವಾದರೂ ಚಿಂತೆಯಲ್ಲಿ ಈ ಆಧ್ಯಾತ್ಮಿಕ ಗುಣಗಳಿಂದ ಕೂಡಿದವನಾದರೆ ಅಂಥವನು ಆದರ್ಶಪ್ರಜೆಯೇ ಆಗುವದರಲ್ಲಿ ಸಂಶಯವಿಲ್ಲ. ಏಕೆಂದರೆ ಬೌದ್ಧಿಕಜೀವನಕ್ಕಿಂತಲೂ ಹಾರ್ದಿಕಜೀವನವು ಅತ್ಯಂತ ಬೆಲೆಯುಳ್ಳದ್ದು. ಉದಾಹರಣೆಗೆ ಒಬ್ಬ ವ್ಯಕ್ತಿಯು ತನ್ನ ಬೌದ್ಧಿಕಬೆಳವಣಿಗೆಯಿಂದ ಎಷ್ಟೇ ದೊಡ್ಡವನಾಗಿರಲಿ, ನಡೆನುಡಿಗಳಲ್ಲಿ ಹೀನನಾಗಿದ್ದರೆ ಸಮಾಜವು ಒಪ್ಪುವದಿಲ್ಲ. ಗೌರವಿಸುವದೂ ಇಲ್ಲ. ಆದ್ದರಿಂದ ನಾವು ಉಪನಿಷತ್ತಿನ ಸಂಸ್ಕೃತಿಯನ್ನೇ ಆಚರಿಸಿ ಬೆಳೆಯಿಸಿ ಕೃತಾರ್ಥರಾಗೋಣ. ಶೀಕ್ಷಾವಲ್ಲಿಯು ಇಲ್ಲಿಗೆ ಮುಕ್ತಾಯವಾಗಿದೆ.

-----------

# ಬ್ರಹ್ಮಾನಂದವಲ್ಲಿ

**ಶಾಂತಿಪಾಠ : ಓಂ ॥ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವ ಹೈ। ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾಂತಿಃ । ಶಾಂತಿಃ । ಶಾಂತಿಃ ॥**

------

ಈಗ ಬ್ರಹ್ಮಾನಂದವಲ್ಲಿಯ ವಿವರಣೆಯನ್ನು ಆರಂಭಿಸಲಾಗುವದು. ಇದಕ್ಕೆ ಉಪಕ್ರಮದಲ್ಲಿ ಶ್ರೀ ಶಂಕಾರಾಚಾರ್ಯರ ಭಾಷ್ಯದ ಪ್ರಕಾರ ಎರಡು ಶಾಂತಿಪಾಠಗಳಿವೆ. (೧) ''ಶಂ ನೋ ಮಿತ್ರಃ...... ತನ್ಮಾಮಾವೀತ್ ....... ಆವೀದ್ ವಕ್ತಾರಮ್'' ಎಂಬಿದು ಒಂದು. (೨) ''ಸಹ ನಾವವತು''- ಎಂಬಿದು ಮತ್ತೊಂದು, ಹೀಗೆ ವ್ಯವಸ್ಥೆ ಇದೆ. ಆದರೆ ವೈದಿಕಸಂಪ್ರದಾಯದವರು ಮೊದಲನೆಯದನ್ನು ಹಿಂದಿನ 'ಶಂ ನೋ ಮಿತ್ರಃ' ಎಂಬ ವಲ್ಲಿಯ ಕೊನೆಗೆ ಜೋಡಿಸಿ ಅಧ್ಯಯನಮಾಡುತ್ತಾರೆ. ಈಗ ನಾವು ಶ್ರೀ ಶಂಕರಾಚಾರ್ಯರ ಅಭಿಪ್ರಾಯದಂತೆ ವಿವರಣೆಯನ್ನು ವಿಚಾರ ಮಾಡೋಣ.

''ಶಂ ನೋ ಮಿತ್ರಃ...... ತನ್ಮಾಮವತು'' ಎಂಬೀ ಶಾಂತಿಪಾಠವು ಈವರೆಗೆ ಹಿಂದಿನ ವಲ್ಲಿಯಲ್ಲಿ ವಿವರಿಸಿರುವ ಉಪಾಸನಾರೂಪವಾದ ಬ್ರಹ್ಮವಿದ್ಯೆಯ ವಿಚಾರ ಸರಣಿಯ ಮುಕ್ತಾಯಕಾಲಕ್ಕೆ ಪಠಿಸಲ್ಪಟ್ಟದ್ದಾಯಿತು. ಇನ್ನು ಮುಂದೆ ಉಪನಿಷತ್ತಿನಲ್ಲಿ ಕೇವಲ ಬ್ರಹ್ಮವಿದ್ಯೆ (ಜ್ಞಾನ)ಯನ್ನು ಆರಂಭಿಸುವ ಮುಂಚೆ ವಿದ್ಯಾಪ್ರಾಪ್ತಿಗೆ ಅಡ್ಡಿಯಾಗುವಂಥ ದೋಷಗಳ ಪರಿಹಾರಕ್ಕಾಗಿ 'ಶಂನೋ ಮಿತ್ರಃ । ಸಹ ನಾವವತು' ಎಂಬೀ ಎರಡು ಶಾಂತಿಮಂತ್ರಗಳನ್ನು ಪಠಿಸಲಾಗುತ್ತದೆ- ಎಂದು ಭಾಷ್ಯಕಾರರು ತಿಳಿಸಿದ್ದಾರೆ. ಇದರಂತೆ ಮೊದಲನೆಯ ಶಾಂತಿಪಾಠದ ಅರ್ಥವನ್ನು ಹಿಂದೆಯೇ ತಿಳಿಸಿದೆ. 'ಆವೀತ್' ಎಂಬ ಭೂತಕಾಲದ ಕ್ರಿಯಾಪದವು ಮಾತ್ರ ಇಲ್ಲಿ ಬೇರೆಯಾಗಿದೆ. ಇದರ ಅರ್ಥವೇನೆಂದರೆ : ''ಬ್ರಹ್ಮವು ಈವರೆಗೆ ನಮ್ಮನ್ನು ಅಪರಬ್ರಹ್ಮವಿದ್ಯೆ- ಎಂಬ ಉಪಾಸನಾರೂಪವಾದ ವಿದ್ಯೆಯನ್ನು ಕೊಟ್ಟು ಕಾಪಾಡಿರುತ್ತದೆ. ಇದಕ್ಕಾಗಿ ಕೃತಜ್ಞತೆಗಳು. ಇನ್ನು ಮುಂದೆ ಪರಿಶುದ್ಧವಾದ ಬ್ರಹ್ಮವಿದ್ಯೆಯನ್ನು ಸಾಧಕನು ಸಂಪಾದಿಸಿಕೊಳ್ಳಬೇಕಾಗಿದೆ. ಅದಕ್ಕೆ ಅಡ್ಡಿಯಾಗಬಹುದಾದ ದೋಷಗಳನ್ನು ಪರಿಹರಿಸಿ ಬ್ರಹ್ಮವು ನಮ್ಮನ್ನು ಕಾಪಾಡಲಿ'' ಎಂದು ಕೇಳಿಕೊಳ್ಳಲಾಗುವದು- ಹೀಗೆಂದು ಶಾಂಕರಭಾಷ್ಯದಲ್ಲಿದೆ. ಆದ್ದರಿಂದ ಈಗ ಎರಡೂ ಶಾಂತಿಪಾಠಗಳ ಅಭಿಪ್ರಾಯವನ್ನೂ ಮನನಮಾಡಿ ಮುಂದುವರೆಯೋಣ.

"ಶಂ ನೋ ಮಿತ್ರಃ" ಎಂಬ ಶಾಂತಿಪಾಠದ ಅಭಿಪ್ರಾಯವನ್ನು ಈ ಗ್ರಂಥದ ಆರಂಭದಲ್ಲಿಯೇ ವಿವರಿಸಲಾಗಿದೆ. ವಿಶೇಷವೇನೆಂದರೆ : "ತನ್ಮಾಮವತು" ಎಂಬಿದಕ್ಕೆ ಬದಲಾಗಿ "ತನ್ಮಾಮಾವೀತ್" ಎಂದಿದೆ. ಇದರ ತಾತ್ಪರ್ಯವೇನೆಂದರೆ : "ಆ ಬ್ರಹ್ಮವು ಈವರೆಗೆ ನನ್ನನ್ನೂ ಉಪಾಸನೆಗಳನ್ನೂ ಕರ್ತವ್ಯಗಳನ್ನೂ ಉಪದೇಶಿಸಿದ ಆಚಾರ್ಯನನ್ನೂ ಕಾಪಾಡಿರುತ್ತದೆ" ಎಂದು ಸಾಧಕನು ಬ್ರಹ್ಮಕ್ಕೆ ಕೃತಜ್ಞತೆಯನ್ನು ಸಲ್ಲಿಸಿರುತ್ತಾನೆ. ಉಳಿದ ಮಂತ್ರಾರ್ಥವೆಲ್ಲವೂ ಹಿಂದಿನಂತೆಯೇ- ಎಂದು ತಿಳಿಯಬೇಕು.

ಈಗ 'ಸಹ ನಾವವತು' ಎಂಬ ಶಾಂತಿಮಂತ್ರದ ಅರ್ಥವನ್ನು ಅನುಸಂಧಾನ ಮಾಡೋಣ. "ಬ್ರಹ್ಮವು ಆಚಾರ್ಯ- ಶಿಷ್ಯ ಇಬ್ಬರನ್ನೂ ಒಟ್ಟಿಗೆ ಕಾಪಾಡಲಿ. ಹಾಗೆಯೇ ಬ್ರಹ್ಮವಿದ್ಯೆಯ ಫಲವಾದ ನಿತ್ಯಾನಂದವನ್ನು ಇಬ್ಬರೂ ಪಡೆಯುವಂತಾಗಲಿ. ಇನ್ನು ಬ್ರಹ್ಮವಿದ್ಯಾನಿಮಿತ್ತವಾಗಿ ಉಂಟಾಗಲಿರುವ ಸಾಮರ್ಥ್ಯವನ್ನು ನಾವಿಬ್ಬರೂ ಪಡೆಯುವಂತಾಗಲಿ. ಮತ್ತು ನಾವಿಬ್ಬರೂ ಅಧ್ಯಯನಮಾಡಿರುವ ಬ್ರಹ್ಮವಿದ್ಯೆಯು ಉತ್ತಮವಾಗಿ ನಮ್ಮಲ್ಲಿ ನೆಲೆಸಲಿ ; ಮತ್ತು ಗುರುಶಿಷ್ಯರಾದ ನಮ್ಮಿಬ್ಬರ ನಡುವೆ ದ್ವೇಷವುಂಟಾಗದಿರಲಿ" ಹೀಗೆಂದು ಪ್ರಾರ್ಥಿಸಲಾಗಿದೆ. ಈ ಪ್ರಾರ್ಥನೆಯು ಬ್ರಹ್ಮ ವಿದ್ಯೆಯನ್ನು ಅಭ್ಯಾಸಮಾಡುವವರಿಗೆ ಅತ್ಯಗತ್ಯವಾಗಿರುತ್ತದೆ. ಏಕೆಂದರೆ ಗುರುಶಿಷ್ಯರಲ್ಲಿ ಪರಸ್ಪರ ದ್ವೇಷಬುದ್ಧಿಯುಂಟಾದರೆ ಶಿಷ್ಯನು ಉದ್ಧಾರವಾಗುವದಿಲ್ಲ. ಆದ್ದರಿಂದ ಶಿಷ್ಯನ ವಿಷಯದಲ್ಲಿ ಗುರುವಿಗಾಗಲಿ ಗುರುವಿನ ವಿಷಯದಲ್ಲಿ ಶಿಷ್ಯನಿಗಾಗಲಿ ದ್ವೇಷವು ಬಾರದೆ ಇರಲಿ- ಎಂದು ಪ್ರಾರ್ಥಿಸಿದೆ.

## (ಉಪನಿಷತ್ತು)

**ಹರಿಃ ಓಂ ॥ ಬ್ರಹ್ಮವಿದಾಪ್ನೋತಿ ಪರಮ್ ....... ವಿಪಶ್ಚಿತೇತಿ ॥೧॥**

ಈಗ ಉಪನಿಷತ್ತನ್ನು ವಿವರಿಸಲಾಗುವದು. ಈ ಸಂದರ್ಭದಲ್ಲಿ ಶ್ರೀ ಶಂಕರಾಚಾರ್ಯರ ವಿವರಣೆ ಹೀಗಿದೆ :- ಹಿಂದಿನ ಶೀಕ್ಷಾವಲ್ಲಿಯಲ್ಲಿ ಸಂಹಿತೋಪಾಸನೆಯೇ ಮುಂತಾದ ವೈದಿಕಕರ್ಮಗಳೊಡನೆ ಸೇರಿಸಿ ಮಾಡಬಹುದಾದ ಉಪಾಸನೆಗಳನ್ನೂ ಹೃದಯದಲ್ಲಿ ಚಿಂತಿಸಬಹುದಾದ ಬ್ರಹ್ಮೋಪಾಸನೆಗಳನ್ನೂ ಹೇಳಿದ್ದಾಗಿದೆ. ಆದರೆ ಇಷ್ಟುಮಾತ್ರದಿಂದ ಸಂಸಾರಬೀಜವಾದ ಅವಿದ್ಯೆಯನ್ನು ಸಂಪೂರ್ಣವಾಗಿ ಕಳೆದಂತೆ ಆಗುವದಿಲ್ಲ. ಆದ್ದರಿಂದ ಎಲ್ಲಾ ಅನರ್ಥಗಳಿಗೂ ಕಾರಣವಾದ ಅಜ್ಞಾನವನ್ನೇ ಕಳೆಯುವದಕ್ಕಾಗಿಯೂ ಮತ್ತು ಯಾವದೇ ಉಪಾಧಿಗಳಿಲ್ಲದ ನಿರ್ವಿಶೇಷಬ್ರಹ್ಮವೇ ನಮ್ಮೆಲ್ಲರ ಆತ್ಮನೆಂದೂ ತಿಳಿಸುವದಕ್ಕಾಗಿಯೂ ಶ್ರುತಿಯು "ಬ್ರಹ್ಮವಿದಾಪ್ನೋತಿ ಪರಮ್" ಎಂದು ಪ್ರಾರಂಭಿಸಿ ಹೇಳುತ್ತಲಿದೆ. ಇದರ ಪ್ರಯೋಜನವೆಂದರೆ - ಈ

ಬ್ರಹ್ಮವಿದ್ಯೆಯಿಂದ ಅತ್ಯಂತವಾಗಿ ಸಂಸಾರದಿಂದ ಬಿಡುಗಡೆಯಾಗುವದೇ ಆಗಿರುತ್ತದೆ. ಮುಂದೆ ಶ್ರುತಿಯಲ್ಲಿ ''ಜ್ಞಾನಿಯು ಎಲ್ಲಾ ಭಯಗಳನ್ನೂ ದಾಟಿರುತ್ತಾನೆ ; ಆನಂದ ರೂಪವಾದ ಬ್ರಹ್ಮವೇ ತನ್ನ ಆತ್ಮನೆಂದು ತಿಳಿದಿರುತ್ತಾನೆ-'' ಎಂದು ಹೇಳಿರುತ್ತದೆ. ಹೀಗೆ ಬ್ರಹ್ಮವಿದ್ಯೆಯ ಪ್ರಯೋಜನವನ್ನು ಹೇಳಿರುವದರಿಂದ ಜಿಜ್ಞಾಸುವು ಬ್ರಹ್ಮವಿದ್ಯೆ ಯನ್ನು ಶ್ರವಣಮಾಡಿ ಧಾರಣೆಮಾಡಿಕೊಂಡು ಮೋಕ್ಷವೆಂಬ ಪ್ರಯೋಜನವನ್ನು ಹೊಂದಲು ಸಾಧ್ಯವಾಗುತ್ತದೆ. ಆದ್ದರಿಂದ ಬ್ರಹ್ಮವಿದ್ಯೆಯಲ್ಲಿ ಮುಮುಕ್ಷುಗಳಿಗೆ ಪ್ರವೇಶವು ಅಗತ್ಯವೆಂದು ಸಿದ್ಧವಾಯಿತು.

ಈಗ ಆಕ್ಷೇಪಕನು ಹೇಳುವದೇನೆಂದರೆ : ಬ್ರಹ್ಮವು ಸರ್ವಗತವಾಗಿದೆ. ಹಾಗೂ ಸರ್ವರ ಆತ್ಮನೇ ಆಗಿರುತ್ತದೆ. ಆದ್ದರಿಂದ ಅದು ಹೊಸದಾಗಿ ಪಡೆಯ ತಕ್ಕದ್ದಲ್ಲ. ಏಕೆಂದರೆ ಪಡೆಯುವವನಿಗಿಂತ ಪಡೆಯಲ್ಪಡತಕ್ಕದ್ದು ಬೇರೆಯಾಗಿರುವದು ಕಂಡುಬಂದಿದೆ. ಇಲ್ಲಿಯಾದರೊ, ಬ್ರಹ್ಮವು ಪಡೆಯುವವನ ಆತ್ಮನೇ ಆಗಿದೆ. ಆದ್ದಗಿಂದ ಬ್ರಹ್ಮಪ್ರಾಪ್ತಿ - ಎಂಬುದೇ ಹೊಂದುವದಿಲ್ಲವಲ್ಲ ? ಎಂದು ಪೂರ್ವ ಪಕ್ಷಿಯು ತನ್ನ ವಾದವನ್ನು ಮಂಡಿಸುತ್ತಾನೆ. ಇದಕ್ಕೆ ಉತ್ತರವೇನೆಂದರೆ : 'ಹಾಗಲ್ಲ. ಬ್ರಹ್ಮವನ್ನು ಪಡೆಯುವದು- ಎಂದರೆ ಹೊಸದಾಗಿ ಹೋಗಿ ಸೇರುವಿಕೆಯಲ್ಲ. ಮತ್ತೇನೆಂದರೆ ಇದ್ದದ್ದನ್ನೇ ಅಜ್ಞಾನದಿಂದ ಮರೆತಿದ್ದರೆ ಜ್ಞಾನದಿಂದ ಕಂಡುಕೊಳ್ಳು ವದೇ ಪ್ರಾಪ್ತಿಯು. ಇಲ್ಲಿ ಅಪ್ರಾಪ್ತವಾದದ್ದರ ಪ್ರಾಪ್ತಿ- ಎಂದರ್ಥವಲ್ಲ. ಪ್ರಾಪ್ತವೇ ಆಗಿರುವದನ್ನು ಮರೆತಿದ್ದರೆ ಮತ್ತೆ ಜ್ಞಾನದಿಂದ ಕಂಡುಕೊಳ್ಳುವದು'- ಎಂದರ್ಥ. ಇದಕ್ಕೆ ಉದಾಹರಣೆಯಾಗಿ ಆಚಾರ್ಯರು ದಶಮನ ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಒಮ್ಮೆ ಹತ್ತು ಜನ ಮಂಕುಬುದ್ಧಿಯವರು ಒಂದು ನದಿಯನ್ನು ದಾಟಿ ದಡವನ್ನು ಸೇರಿದಾಗ ಎಲ್ಲರೂ ದಾಟಿದ್ದೇವೊ ಇಲ್ಲವೊ- ಎಂದು ಪರೀಕ್ಷಿಸಲು ಎಣಿಸುತ್ತಿದ್ದ ರಂತೆ. ಆದರೆ ಪ್ರತಿಯೊಬ್ಬನೂ ತನ್ನನ್ನು ಬಿಟ್ಟು ಎಣಿಸುತ್ತಿದ್ದುದರಿಂದ ಒಬ್ಬನು ಕಡಿಮೆಯಿದ್ದಾನೆಂದು ವ್ಯಥೆಪಡುತ್ತಿದ್ದರಂತೆ. ಆಗ ಒಬ್ಬ ಜಾಣನು ಇವರ ದುಃಖವನ್ನು ಕಂಡು ''ನೀನೇ ಹತ್ತನೆಯವನಲ್ಲವೆ ? ನೋಡಿಕೊ'' ಎಂದಾಗ ಅವರ ದುಃಖವು ಪರಿಹಾರವಾಯಿತಂತೆ. ಇದರಂತೆಯೇ ನಮ್ಮ ಆತ್ಮನೂ ಹೊಸದಾಗಿ ಪಡೆಯಬೇಕಾ ದವನಾಗಿಲ್ಲ. ಆದರೆ ಹೇಗೆ ಆ ದಡ್ಡರಿಗೆ ಒಂಭತ್ತು ಜನರನ್ನು ಎಣಿಸುವದರಲ್ಲಿಯೇ ಮನಸ್ಸು ನಿಂತುಕೊಂಡಿತ್ತೋ ಆದ್ದರಿಂದಲೇ ತಾನೇ ಹತ್ತನೆಯವನೆಂದು ತಿಳಿಯಲಾಗ ಲಿಲ್ಲವೋ ಹಾಗೆಯೇ ಇಲ್ಲಿಯೂ ತನ್ನ ಆತ್ಮ (ಸ್ವರೂಪ)ವೇ ಪರಬ್ರಹ್ಮವು- ಎಂಬ ತಿಳಿವಳಿಕೆ ಇಲ್ಲವಾಗಿದ್ದು ತಾನು ಸಂಸಾರಿಯೆಂದೂ ಜನನಮರಣಗಳುಳ್ಳವನೆಂದೂ ಭ್ರಾಂತಿಯಾಗಿದೆ. ಈ ಭ್ರಾಂತಿಯನ್ನು ಕಳೆದುಕೊಳ್ಳಲು ಶಾಸ್ತ್ರದಲ್ಲಿ ಹೇಳಿರುವ ಪರಬ್ರಹ್ಮವೇ ತನ್ನ ಆತ್ಮನೆಂದು ಕಂಡುಕೊಳ್ಳುವ ಬ್ರಹ್ಮಜ್ಞಾನವು ಅತ್ಯವಶ್ಯವಾಗಿರುತ್ತದೆ.

ಈಗ ''ಬ್ರಹ್ಮವಿದಾಪ್ನೋತಿ ಪರಮ್'' ಎಂಬ ವಾಕ್ಯದ ಅಭಿಪ್ರಾಯವನ್ನು ಮನನಮಾಡೋಣ. ಇಲ್ಲಿ ಬ್ರಹ್ಮವಿತ್ - ಆಪ್ನೋತಿ - ಪರಮ್ ಎಂದು ಮೂರು ಮಾತುಗಳಿವೆ. ಈ ವಾಕ್ಯವೇ ಇಡಿಯ ಬ್ರಹ್ಮವಲ್ಲಿಗೆ ಸೂತ್ರರೂಪವಾಗಿದೆ. ಆದ್ದರಿಂದ ಇದನ್ನು ಚೆನ್ನಾಗಿ ವಿಚಾರಮಾಡಬೇಕಾಗಿದೆ. ಇಲ್ಲಿ ಬ್ರಹ್ಮವಿತ್ ಎಂಬ ಶಬ್ದದಲ್ಲಿರುವ ಬ್ರಹ್ಮವೆಂಬ ವಸ್ತುವು ಯಾವದೆಂದು ನಮಗೆ ತಿಳಿದಿಲ್ಲ. ಆದರೆ ಅದು ವ್ಯವಹಾರ ದಲ್ಲಿಯೂ ನಮಗೆ ಬಳಕೆಯಲ್ಲಿಲ್ಲ. ಪುರಾಣಗಳ ವ್ಯಾಖ್ಯಾನದಂತೆ ಬ್ರಹ್ಮ- ಎಂದರೆ ಜಗತ್ತನ್ನು ಸೃಷ್ಟಿಮಾಡುವವನು- ಎಂದು ಕೆಲವರಿಗೆ ಗೊತ್ತಿರಬಹುದು. ಅದು ಸಾಲದು. ಏಕೆಂದರೆ ಇಲ್ಲಿ ಬ್ರಹ್ಮವು ಸತ್ಯ-ಜ್ಞಾನ- ಅನಂತ ಸ್ವರೂಪವಾಗಿದೆ- ಎಂಬ ವಿವರಣೆಯು ಮುಂದಿದೆ. ಆದ್ದರಿಂದ ಇಲ್ಲಿ ಬ್ರಹ್ಮಲಕ್ಷಣವನ್ನು ನಿರ್ಣಯಿಸ ಬೇಕಾದರೆ ಅದು ಪರಬ್ರಹ್ಮಕ್ಕೆ ಮಾತ್ರವೇ ಹೊಂದುವಂತೆಯೂ ಬೇರೆ ಯಾವ ವಸ್ತುವಿಗೂ ಅನ್ವಯಿಸದಂತೆಯೂ ಇರುವ ಲಕ್ಷಣವೇ ಆಗಿರಬೇಕು. ಹಾಗೆಯೇ 'ವೇದನ' (ಅರಿಯುವಿಕೆ) ಎಂಬಿದನ್ನೂ ವಿಶೇಷಾರ್ಥದಲ್ಲಿಯೇ ಗ್ರಹಣಮಾಡಬೇಕು ಅನಂತರ ಅಂಥ ಬ್ರಹ್ಮಜ್ಞಾನದ ಫಲರೂಪವಾದ ಪ್ರಯೋಜನವು ಸರ್ವಾತ್ಮಭಾವ ವಾಗಿದ್ದು ಎಲ್ಲಾ ಸಂಸಾರಧರ್ಮಗಳನ್ನೂ ಮೀರಿದ್ದಾಗಿರಬೇಕು. ಇದನ್ನೇ ಮುಂದೆ ವಿಚಾರಮಾಡೋಣ.

ಮೊದಲನೆಯದಾಗಿ ಬ್ರಹ್ಮದ ಲಕ್ಷಣವನ್ನು ಇಲ್ಲಿ 'ಸತ್ಯಂ-ಜ್ಞಾನಂ- ಅನಂತಮ್'- ಎಂಬ ಮೂರು ವಿಶೇಷಣಗಳಿಂದ ವ್ಯಾಖ್ಯಾನಮಾಡಲಾಗಿದೆ. ಒಂದೊಂದು ಶಬ್ದವೂ ನಿರಪೇಕ್ಷವಾಗಿದ್ದು ಬ್ರಹ್ಮದೊಡನೆ ಸಂಬಂಧಿಸಿದಾಗ ಸತ್ಯಂ ಬ್ರಹ್ಮ-ಜ್ಞಾನಂ ಬ್ರಹ್ಮ- ಅನಂತಂ ಬ್ರಹ್ಮ ಎಂದು ಅನ್ವಯವಾಗುತ್ತದೆ. ಆದ್ದರಿಂದ ಸತ್ಯವೂ ಜ್ಞಾನವೂ ಅನಂತವೂ ಆಗಿರುವದು ಬ್ರಹ್ಮವು ಎಂದು ವಾಕ್ಯದ ಅರ್ಥವಾಗುತ್ತದೆ. ಹೀಗೆ ವಿಶೇಷಣಗಳಿರುವ ಬ್ರಹ್ಮದ ಸ್ವರೂಪವನ್ನು ಜಿಜ್ಞಾಸೆ ಮಾಡಬೇಕಾಗಿದೆ. ಇಲ್ಲಿ ಸತ್ಯವೆಂದರೆ ತನ್ನ ಸ್ವರೂಪವನ್ನು ಯಾವಾಗಲೂ ಬದಲಾಯಿಸದೆ ಇರುವದು- ಎಂದರ್ಥ. ಹೇಗೆ ಬಂಗಾರವು ಯಾವ ಒಡವೆಯ ರೂಪದಲ್ಲಿದ್ದರೂ ತನ್ನ ಬಂಗಾರವಾಗಿರುವಿಕೆಯನ್ನು ಯಾವಾಗಲೂ ಬಿಟ್ಟಿರುವ ದಿಲ್ಲವೋ ಹಾಗೆ ಬ್ರಹ್ಮವೂ ಸತ್ಯವೆಂದರೆ ತ್ರಿಕಾಲಗಳಲ್ಲಿಯೂ ಬ್ರಹ್ಮವಾಗಿಯೇ ಇರುತ್ತದೆ ಎಂದಭಿಪ್ರಾಯ. ಹಾಗಾದರೆ ಚಿನ್ನದಂತೆ ಬ್ರಹ್ಮವೂ ಒಂದು ಜಡವಸ್ತುವೆ ? ಎಂದರೆ ಹಾಗಲ್ಲ. ಅದು ಸತ್ಯವಾಗಿರುವಂತೆಯೇ ಯಾವಾಗಲೂ ಚೇತನವಾಗಿರು ತ್ತದೆ. ಇದನ್ನೇ ಶ್ರುತಿಯಲ್ಲಿ ಜ್ಞಾನಂ ಬ್ರಹ್ಮ- ಎಂಧು ತಿಳಿಸಿರುತ್ತದೆ. ಇಲ್ಲಿ ಜ್ಞಾನ ವೆಂದರೆ ಅಂತಃಕರಣದಲ್ಲಾಗುವ ವೃತ್ತಿರೂಪವಾದ ಜ್ಞಾನವಲ್ಲ. ಅದು ಅನಿತ್ಯವಾಗಿದೆ.

ಆದ್ದರಿಂದ ಇಲ್ಲಿ ಜ್ಞಾನವೆಂಬುದು ಜ್ಞಪ್ತಿ- ಅರಿವು ಎಂಬ ಅರ್ಥವುಳ್ಳದ್ದಾಗಿದೆ. ಮತ್ತು ಚೈತನ್ಯರೂಪವಾಗಿದೆ- ಎಂದರ್ಥ. ಬ್ರಹ್ಮದ ಚೈತನ್ಯರೂಪವೆಂದರೆ ಸೂರ್ಯನ ಬೆಳಕಿನಂತೆಯೂ ಬೆಂಕಿಯ ಬಿಸಿಯಂತೆಯೂ ಬ್ರಹ್ಮವೇ ಆಗಿರುವಿಕೆ ಎಂದರ್ಥ. ಇನ್ನು 'ಅನಂತಂ ಬ್ರಹ್ಮ' ಎಂದರೆ ಎಲ್ಲೆಲ್ಲಿಯೂ ಯಾವಾಗಲೂ ವ್ಯಾಪಿಸಿರುವದು- ಎಂದಭಿಪ್ರಾಯ. ಜ್ಞಾನವು ಬ್ರಹ್ಮ ಎಂದದ್ದರಿಂದ ಅಂತಃಕರಣದಲ್ಲಿ ಹುಟ್ಟಿ ಕಣ್ಮರೆಯಾಗುವ ವೃತ್ತಿರೂಪವಾದ ಅರಿವು- ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದಲ್ಲ, ಮತ್ತೇನೆಂದರೆ ಅನಂತವು - ಅಖಂಡವಾದ ಜ್ಞಾನದ ಸ್ವರೂಪವು ಎಂದು ತಿಳಿಯಬೇಕು. ಹೀಗೆ ಸತ್ಯವೂ ಜ್ಞಾನವೂ ಅನಂತವೂ ಆಗಿರುವ ವಸ್ತುವೆಂದರೆ ಅದು ಬ್ರಹ್ಮವೇ ಆಗಿರಬೇಕಲ್ಲದೆ ಬೇರೊಂದಾಗುವದು ಸಾಧ್ಯವಿಲ್ಲ- ಎಂದು ಶ್ರೀ ಶಂಕರಾಚಾರ್ಯರು ಬ್ರಹ್ಮದ ಲಕ್ಷಣವನ್ನು ವಿವರಿಸಿರುತ್ತಾರೆ.

ಈಗ ಇಂಥ ಬ್ರಹ್ಮವನ್ನು ಯಾವನು ತನ್ನ ಹೃದಯದಲ್ಲಿಯೇ ಅದು ಇದ್ದುಕೊಂಡಿದೆಯೆಂದೂ ಸಾಧಕನು ಅದನ್ನು ಅಲ್ಲಿಯೇ ಕಂಡುಕೊಳ್ಳಬೇಕೆಂದೂ ಶ್ರುತಿಯು ತಿಳಿಸುತ್ತಾ ಅದರ ಫಲವನ್ನೂ ಹೇಳುತ್ತದೆ. ಹೇಗೆಂದರೆ ಯಾವ ಸಾಧಕನು ಈ ಬ್ರಹ್ಮವು ನನ್ನ ಆತ್ಮನೇ- ಎಂದರೆ ಸ್ವರೂಪವೇ ಆಗಿದೆ- ಎಂದು ಶಾಸ್ತ್ರಾಚಾರ್ಯೋಪದೇಶಗಳಿಂದ ಕೇಳಿ ಅನಂತರ ಅಂತರ್ಮುಖನಾಗಿ ತನ್ನ ಮನಸ್ಸನ್ನೂ ಆ ಬ್ರಹ್ಮದಲ್ಲಿಯೇ ನೆಲೆಗೊಳಿಸಿ ತಾನೇ ಪರಬ್ರಹ್ಮವಾಗಿ ಉಳಿದುಬಿಡುವನೋ ಆಗ ಎಲ್ಲಾ ಕಾಮಗಳನ್ನೂ ಏಕಕಾಲದಲ್ಲಿ ಅನುಭವಿಸುತ್ತಾನೆ- ಎಂದು ಶ್ರುತಿಯು ತಿಳಿಸುತ್ತದೆ. ಇದೇ ಮುಕ್ತಿಯು ಅಥವಾ ಪರಪ್ರಾಪ್ತಿಯು. ಈ ಸ್ಥಿತಿಯಲ್ಲಿ ಜ್ಞಾನಿಯು ತಾನು ಬೇರೆಯಾಗಿ ಉಳಿದಿರುವದಿಲ್ಲ. ಅಖಂಡವಾದ ಬ್ರಹ್ಮವೇ ತಾನಾಗಿಬಿಟ್ಟಿರುತ್ತಾನೆ. ಆದ್ದರಿಂದ ಸಕಲಕಾಮಗಳೂ ಅವನಿಗೆ ದೊರಕಿದ್ದು ಪರಿಪೂರ್ಣಕಾಮನಾಗಿರುತ್ತಾನೆ. ಈ ಅನುಭವವೇ ಬ್ರಹ್ಮಾನುಭವವೆನಿಸುತ್ತದೆ. ಬ್ರಹ್ಮವೇ ಎಲ್ಲವೂ ಆಗಿರುವದರಿಂದ, ಮತ್ತು ಆ ಬ್ರಹ್ಮವೇ ತಾನಾಗಿಬಿಟ್ಟಿರುವದರಿಂದ ಜ್ಞಾನಿಗೆ ಮತ್ತೆ ಪಡೆಯಬೇಕಾದದ್ದು ಏನೂ ಇರುವದೇ ಇಲ್ಲ. ಇದನ್ನು ಅನುಭವದಿಂದಲೇ ಗುರುತಿಸಬೇಕು. ಉದಾಹರಣೆಗೆ- ಕನಸಿನಲ್ಲಿ ತಾನೇ ಎಲ್ಲವೂ ಆಗಿರುವದು ನಮಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ನಮ್ಮ ಕನಸಿನಲ್ಲಿ ಒಂದು ಮಗು ಒಂದು ಹಣ್ಣನ್ನು ಚಪ್ಪರಿಸುತ್ತಿದ್ದರೆ, ಹಾಗೆಯೇ ಒಂದುಸಭೆಯಲ್ಲಿ ಒಬ್ಬ ವಿದ್ವಾಂಸನು ಉಪನ್ಯಾಸಮಾಡುತ್ತಿದ್ದರೆ- ಅನಂತರ ಸಭಿಕರು ಅವನಿಗೆ ಬಹುಮಾನವನ್ನು ನೀಡಿದರೆ- ಇತ್ಯಾದಿ ಎಲ್ಲವೂ ನಮ್ಮ ಕನಸೇ ಆದ್ದರಿಂದ ಆ ಭೋಗಗಳನ್ನು ಅನುಭವಿಸಿದವನು ನಾನೇ ಅಲ್ಲವೆ ? ಹಾಗೆಯೇ ಎಚ್ಚರದಲ್ಲಿ ಸರ್ವಾತ್ಮಭಾವದ ಅನುಭವವನ್ನು ಪಡೆದ ಜ್ಞಾನಿಯೂ ಪರಿಪೂರ್ಣಕಾಮನಾಗಿರುತ್ತಾನೆ- ಎಂದು ಶ್ರುತಿಯು ತಿಳಿಸುತ್ತದೆ.

ಹೀಗೆ ಶ್ರುತಿಯು ಬ್ರಹ್ಮಪ್ರಾಪ್ತಿಯನ್ನು ತಿಳಿಸಿದ ಅನಂತರ ಈ ಬ್ರಹ್ಮಾನುಭವವನ್ನು ಸಾಧಿಸುವದು ಹೇಗೆಂಬುದನ್ನು ಒಂದಾನೊಂದು ವಿಚಾರಸರಣಿಯಿಂದ ತಿಳಿಸಲು ಹೊರಟಿರುತ್ತದೆ. ಈ ವಿಚಾರಸರಣಿಗೆ **''ಪಂಚಕೋಶಪ್ರಕ್ರಿಯೆ''** ಎಂದು ವೇದಾಂತದಲ್ಲಿ ಕರೆದಿರುತ್ತದೆ. ಮೊದಲು ಈ ಪ್ರಕ್ರಿಯೆಯಲ್ಲಿ ಅನ್ನಮಯಾತ್ಮನಿಂದ ವಿಚಾರವು ಆರಂಭವಾಗುತ್ತದೆ. ಕಡೆಯಲ್ಲಿ ಆನಂದಮಯಾತ್ಮನನ್ನೂ ವಿಚಾರಮಾಡಿ ಕಟ್ಟಕಡೆಗೆ **''ಆನಂದ''**ದಲ್ಲಿ ನೆಲೆಗೊಳ್ಳುತ್ತದೆ. ಅದೇ ಪರಬ್ರಹ್ಮವು. ಸಾಧಕನು ಅದೇ ಸ್ವರೂಪಾನಂದದಲ್ಲಿ ಒಂದಾದಾಗ ಮುಕ್ತನಾಗಿಬಿಡುತ್ತಾನೆ. ಅವನಿಗೆ ಮತ್ತೆ ಜನನ ಮರಣರೂಪವಾದ ಸಂಸಾರವಿರುವದಿಲ್ಲ- ಈ ಪಂಚಕೋಶಪ್ರಕ್ರಿಯೆಯನ್ನು ಅವಲಂಬಿಸಿ ವಿಚಾರಮಾಡುತ್ತಾ ಕಡೆಯಲ್ಲಿ ಆನಂದಪರಬ್ರಹ್ಮದಲ್ಲಿ ನೆಲೆನಿಲ್ಲುವ ಕ್ರಮವನ್ನು ಇನ್ನು ಮುಂದೆ ವಿವರಿಸಲಾಗುವದು. ಅದೇ **ಜೀವನ್ಮುಕ್ತಿಯೆನಿಸುವದು. ಅದೇ ಪರಮಪುರುಷಾರ್ಥವು**.

ಇಂಥ ಜೀವನ್ಮುಕ್ತಿಯನ್ನು ಸಂಪಾದಿಸಲು ಈ ಉಪನಿಷತ್ತಿನಲ್ಲಿ ಮತ್ತೊಂದು ಪ್ರಕ್ರಿಯೆಯನ್ನು ಬಳಸಲಾಗಿದೆ. ಅದಕ್ಕೆ **'ಕಾರ್ಯಕಾರಣಪ್ರಕ್ರಿಯೆ'** ಎಂದು ಹೆಸರು. ಈ ಪ್ರಕ್ರಿಯೆಯನ್ನು ಮತ್ತೆ ಕೆಲವು ಉಪನಿಷತ್ತುಗಳಲ್ಲಿಯೂ ಬಳಸಲಾಗಿದೆ. ಈ ಉಪನಿಷತ್ತಿನಲ್ಲಿ ಪ್ರಾರಂಭಕ್ಕೆ ಕಾರ್ಯಕಾರಣಪ್ರಕ್ರಿಯೆಯನ್ನು ಬಳಸಿದ್ದು ಅನಂತರ ಪಂಚಕೋಶಪ್ರಕ್ರಿಯೆಯನ್ನು ಅವಲಂಬಿಸಿ ಬ್ರಹ್ಮತತ್ತ್ವವನ್ನು ವಿಚಾರಮಾಡಲಾಗಿದೆ. ಆದರೆ ಇಲ್ಲಿ ಪ್ರಕ್ರಿಯೆಗಳಿಗೆ ಪ್ರಾಧಾನ್ಯವೇನೂ ಇರುವದಿಲ್ಲ. ಯಾವ ಯಾವ ಪ್ರಕ್ರಿಯೆಯನ್ನು ಬಳಸುವದರಿಂದ ಜಿಜ್ಞಾಸುಗಳಿಗೆ ಪ್ರತ್ಯಗಾತ್ಮನನ್ನು ಅರಿತುಕೊಳ್ಳಲು ನೆರವಾಗುವದೋ ಆ ಪ್ರಕ್ರಿಯೆಗೆ ಬ್ರಹ್ಮವನ್ನು ತಿಳಿಸುವದಷ್ಟೇ ಗುರಿಯು. ಅನಂತರ ಅದಕ್ಕೇನೂ ತಾತ್ಪರ್ಯವಿಲ್ಲ- ಎಂದೇ ಬಲ್ಲವರು ಹೇಳುತ್ತಾರೆ. ಆದ್ದರಿಂದ ಈಗ ಮೊದಲು ಕಾರ್ಯಕಾರಣಪ್ರಕ್ರಿಯೆಯನ್ನು ಬಳಸಿ ಬ್ರಹ್ಮವನ್ನು ಜಿಜ್ಞಾಸೆಮಾಡಲಾಗುವದು.

ಶ್ರುತಿಯಲ್ಲಿ ''ಆತ್ಮನ ಆಕಾಶಃ ಸಂಭೂತಃ । ಆಕಾಶಾದ್ ವಾಯುಃ ।'' ಹೀಗೆ ವಿವರಣೆ ಇದೆ. ಆತ್ಮ ಅಥವಾ ಪರಬ್ರಹ್ಮದಿಂದ ಆಕಾಶವು ಉಂಟಾಯಿತು. ಅದರಿಂದ ವಾಯುವು ಹುಟ್ಟಿತು- ಇತ್ಯಾದಿ ಸೃಷ್ಟಿಯ ವಿವರವು ಇದೆ. ಇಲ್ಲಿ 'ಹುಟ್ಟಿತು' ಎಂಬ ಮಾತಿಗೆ ಅವಧಾರಣೆ ಇರುವದಿಲ್ಲ. ಲೋಕದೃಷ್ಟಿಯಿಂದ ಹುಟ್ಟಿರುವದನ್ನು ಅನುವಾದಮಾಡಿ ಈ ಪಂಚಭೂತಗಳು ಹುಟ್ಟಿದವು- ಎಂಬುದೇನಿದೆಯೋ ಅದು ಬ್ರಹ್ಮದಿಂದಲೇ ಹೊರತು ಬೇರೆಯ ಯಾವ ಕಾರಣವಸ್ತುವಿನಿಂದಲೂ ಅಲ್ಲ-ಎಂದು ತಾತ್ಪರ್ಯವು. ಹೀಗೆ ಬ್ರಹ್ಮದಲ್ಲಿ ಸೃಷ್ಟಿಕರ್ತೃತ್ವವನ್ನು ಅಧ್ಯಾರೋಪಮಾಡಿ ಆ

ಮೂಲಕ ಬ್ರಹ್ಮಸ್ವರೂಪವನ್ನು ಜಿಜ್ಞಾಸುಗಳಿಗೆ ತಿಳಿಸಿಕೊಡಲಾಗಿದೆ. ಪ್ರಕೃತ ಸೃಷ್ಟಿಯ ಕೆಲವು ವಿವರಗಳನ್ನು ಕೊಡಲಾಗುವದು. ಬ್ರಹ್ಮದಿಂದ ಹುಟ್ಟಿದ ಆಕಾಶದಿಂದ ಕ್ರಮವಾಗಿ ವಾಯು, ತೇಜಸ್ಸು, (ಅಗ್ನಿ) ನೀರು, ಭೂಮಿ, ಅನಂತರ ಗಿಡಮರಗಳು, ಪೈರುಗಳು, ಅನ್ನ- ಮುಂದೆ ಅದರಿಂದ ಮನುಷ್ಯರು ಹುಟ್ಟಿರುತ್ತಾರೆ- ಎಂದು ವಿವರಿಸಲಾಗಿದೆ. ಸೃಷ್ಟಿಯು ಅತ್ಯಂತವಿಸ್ತಾರವಾಗಿದ್ದರೂ ಅದರ ತಿರುಳಾದ ಮನುಷ್ಯನೇ ಇಲ್ಲಿ ಮುಖ್ಯನು. ಏಕೆಂದರೆ ಅವನು ಮಾತ್ರವೇ ಬ್ರಹ್ಮವಿದ್ಯೆಗೆ ಅಧಿಕಾರಿಯು. ಉಳಿದ ಯಾವ ಪಶುಪ್ರಾಣಿಗಳಿಗೂ ತಮ್ಮ ಆತ್ಮನು ಬ್ರಹ್ಮವು- ಎಂದು ತಿಳಿಯುವ ಅವಕಾಶವಿರುವದಿಲ್ಲ. ಹೀಗೆ ಬ್ರಹ್ಮವಿದ್ಯೆಗೆ ಅರ್ಹನಾದ ಮಾನವನನ್ನು ಬ್ರಹ್ಮಸ್ವರೂಪಕ್ಕೆ ಕೊಂಡೊಯ್ಯುವ ಸಾಧನವೇ **ಬ್ರಹ್ಮವಿದ್ಯೆಯು**.

ಈಗ ಈ ಮಾನವನಿಗೆ ಬ್ರಹ್ಮವಿದ್ಯೆಯ ಮೂಲಕ ತನ್ನ ಸ್ವರೂಪವೇ ಆಗಿರುವ ಆತ್ಮ ಅಥವಾ ಬ್ರಹ್ಮವನ್ನು ಮುಟ್ಟಿಸುವದಕ್ಕಾಗಿ ಉಪನಿಷತ್ತು ಹೊರಟಿದೆ. ಆದರೆ ಸ್ವಭಾವದಿಂದ ಮಾನವನಿಗೆ ಬ್ರಹ್ಮವಲ್ಲದ್ದನ್ನೇ ಬ್ರಹ್ಮವೆಂದು ಎಂದರೆ ಆತ್ಮನೆಂದು ತಿಳಿದಿರುವ ಪರಿಸ್ಥಿತಿಯಿದೆ. ಇದನ್ನು ಶಾಸ್ತ್ರದಲ್ಲಿ 'ಅವಿದ್ಯೆ' ಎಂದು ಕರೆದಿದ್ದಾರೆ. ಈ ಅವಿದ್ಯೆಯನ್ನು ಕ್ರಮಕ್ರಮವಾಗಿ ಕಳೆಯಬೇಕಾಗಿದೆ. ಆದ್ದರಿಂದ ಏನಾದರೊಂದು ಆಲಂಬನವಿಲ್ಲದೆ ಅವಿದ್ಯಾಕಲ್ಪಿತವಾದ ಅನಾತ್ಮಬುದ್ಧಿಯನ್ನು ಹೋಗಲಾಡಿಸಲು ಸಾಧ್ಯ ವಾಗುತ್ತಿಲ್ಲ. ಅದಕ್ಕಾಗಿ ಮಾನವನ ಈ ಅನ್ನಮಯವಾದ ಶರೀರವನ್ನೇ ''ಅನ್ನ ಮಯಾತ್ಮ''ನೆಂದು ಕಲ್ಪಿಸಿ ಹೇಳಲಾಗಿದೆ. ಇದು ಪ್ರತಿಯೊಬ್ಬನಿಗೂ ಅನುಭವ ದಲ್ಲಿದೆ. ಶರೀರವನ್ನು ಎಲ್ಲರೂ 'ನಾನು' ಎನ್ನುವರೇ ಹೊರತು 'ನನ್ನದು' ಎಂದು ಕೂಡ ತಿಳಿದಿರುವದಿಲ್ಲ. ಆದರೆ ಶರೀರವು ಎಂದಿಗೂ 'ನಾನು' ಆಗಲಾರದು. ಹಾಗಾದರೆ ಶರೀರಕ್ಕಿಂತ ಬೇರೆಯಾಗಿ ಯಾರಿದ್ದಾರೆ ? ಎಂಬ ಪ್ರಶ್ನೆಗೆ ವಿಚಾರ ಮಾಡಿದಾಗ ದೊರೆಯುವ ಉತ್ತರವೇನೆಂದರೆ 'ಪ್ರಾಣನು' ಎನ್ನುವದೇ ಆಗಿದೆ. ಈ ವಿಚಾರಸರಣಿಯೇ ಈಗ ಬೇಕಾಗಿದೆ. ಪ್ರಾಣವಿಲ್ಲದ ಶರೀರಕ್ಕೆ ಬೆಲೆಯೇನೂ ಇಲ್ಲ. ಆದ್ದರಿಂದ ಶರೀರಾತ್ಮನಿಗಿಂತ ಪ್ರಾಣಾತ್ಮನೇ ಹೆಚ್ಚಿನವನೆಂದಾಯಿತು. ಆಗ ಪ್ರಾಣ ನನ್ನು ಆತ್ಮನೆಂದು ತಿಳಿದಾಗ ಶರೀರವು ಒಂದು ಕೋಶ (ಚೀಲ)ವಾಯಿತು. ಹೀಗೆ ಮುಂದು ಮುಂದಿನ ಆತ್ಮರುಗಳನ್ನು ಗುರುತಿಸುತ್ತಾ ಹೋದಂತೆಲ್ಲ ಹಿಂದು ಹಿಂದಿನ ಉಪಾಧಿಗಳು ಆತ್ಮನಲ್ಲವೆಂದು ಗೊತ್ತಾಗುತ್ತದೆ. ಕಡೆಯಲ್ಲಿ ಪಂಚಕೋಶಾತೀತನಾದ ಪರಿಶುದ್ಧಾತ್ಮನನ್ನೇ ಗುರುತಿಸಲಾಗುತ್ತದೆ. ಮತ್ತೆ ವಿಚಾರಮಾಡೋಣ.

ಈವರೆಗೆ ಅನ್ನಮಯಾತ್ಮನನ್ನು ವಿಚಾರಮಾಡಿ ಅವನಿಗಿಂತ ಸೂಕ್ಷ್ಮನಾದ ಪ್ರಾಣಮಯಾತ್ಮನಲ್ಲಿ ಆತ್ಮಬುದ್ಧಿಯನ್ನು ಕಂಡುಕೊಳ್ಳುವ ಮೂಲಕ ಪರಿಶುದ್ಧಾತ್ಮನ

ಅನ್ವೇಷಣೆಗೆ ಸಿದ್ಧವಾದದ್ದಾಯಿತು. ಆದರೆ ಪ್ರಾಣಮಯಾತ್ಮನ ವಿವರವನ್ನು ಉಪನಿಷತ್ತಿನಲ್ಲಿ ಏನು ಹೇಳಲಾಗಿದೆ ? ಎಂಬಿದನ್ನು ವಿಚಾರಮಾಡುವ ಮೂಲಕ ಮುಂದುವರೆಯೋಣ. ನಮ್ಮ ಜೀವನಕ್ರಮದಲ್ಲಿ ಎಲ್ಲರಿಗೂ ಅನ್ನಮಯಾತ್ಮನ ಪರಿಚಯವು ಚೆನ್ನಾಗಿದೆ. ಏಕೆಂದರೆ ಎಲ್ಲರೂ ಆಹಾರಕ್ಕಾಗಿ ಹಾತುವರೆಯುತ್ತಾರೆ. ಆಹಾರವಿಲ್ಲದೆ ಜೀವಿಸಲು ಸಾಧ್ಯವಿಲ್ಲ. ಆದರೆ ಅನ್ನಮಯಾತ್ಮನು ಸ್ವತಂತ್ರನಲ್ಲ. ಶರೀರದೊಳಗೆ ಪ್ರಾಣನು ಕೆಲಸಮಾಡಿದರೆ ಮಾತ್ರ ಜೀವನವೆನಿಸುತ್ತದೆ. ಪ್ರಾಣ ವಿಲ್ಲದ ಶರೀರಕ್ಕೆ ಬೆಲೆಯೇನೂ ಇಲ್ಲ. ಆದ್ದರಿಂದ ಸ್ಥೂಲವಾದ ಈ ಅನ್ನಮಯನಿಗೆ ಆಧಾರನಾಗಿರುವವನೇ ಪ್ರಾಣನು. ಈ ಪ್ರಾಣನ ಮಹಿಮೆಯನ್ನು ಶ್ರುತಿಯಲ್ಲಿ ಹೀಗೆ ವರ್ಣಿಸಿದೆ :-

**''ಪ್ರಾಣಂ ದೇವಾ ಅನು ಪ್ರಾಣಂತಿ । ......... ಪ್ರಾಣೋ ಹಿ ಭೂತಾನಾಮಾಯುಃ''** ॥೩॥

ಇದರ ಅಭಿಪ್ರಾಯವೇನೆಂದರೆ : ಅನ್ನಮಯನಿಗಿಂತಲೂ ಪ್ರಾಣಮಯನು ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತಾನೆ. ಅನ್ನವಿಲ್ಲದೆ ಒಂದೆರಡು ದಿನಗಳನ್ನು ಕಳೆಯಬಹುದು. ಆದರೆ ಉಸಿರಾಡದೆ ಒಂದು ನಿಮಿಷವೂ ಇರಲಾಗುವದಿಲ್ಲ. ಇದು ಸಾಮಾನ್ಯರ ಸ್ಥಿತಿಯಾಗಿದೆ. ಇನ್ನು ರೋಗಗಳಿಗೆ ತುತ್ತಾದವರು ಕೂಡ ಕೆಲವು ಕಾಲದವರೆಗೆ ಆಹಾರವಿಲ್ಲವಾದರೂ ಬದುಕಿರುತ್ತಾರೆ. ಆದ್ದರಿಂದ ಅನ್ನಮಯಾತ್ಮನು ಪ್ರಾಣನಿಗಿಂತ ಸ್ಥೂಲನೆಂದಾಯಿತು. ಸೂಕ್ಷ್ಮನಾದ ಪ್ರಾಣಮಯನನ್ನು ಪ್ರಾಣಾತ್ಮ ನೆಂದು ಈಗ ಕರೆಯಲಾಗಿದೆ. ಇವನಿಗೂ ಶಿರ ಆದಿಗಳನ್ನು ಶ್ರುತಿಯಲ್ಲಿ ಕಲ್ಪಿಸಲಾಗಿದೆ. ಹೇಗೆಂದರೆ : ಮಾನವನ ಶರೀರದಲ್ಲಿ **ಪ್ರಾಣನು** ಸರ್ವವ್ಯಾಪಿಯಾಗಿದ್ದು ಎಲ್ಲಾ ಇಂಧ್ರಿಯಗಳನ್ನೂ ವ್ಯಾಪಿಸಿಕೊಂಡು ಕ್ರಿಯಾಶೀಲನಾಗಿರುತ್ತಾನೆ. ಉಂಡ ಆಹಾರವು ಕರಗಿದಾಗ ಅದನ್ನು ಹೊರಕ್ಕೆ ತಳ್ಳುತ್ತಾನೆ. ಆಗ **ಅಪಾನ**ನೆಂದು ಹೆಸರು. ಹಾಗೆಯೇ ಹೊಕ್ಕಳಿನಲ್ಲಿದ್ದುಕೊಂಡು ಶರೀರವು ನೆಟ್ಟಗೆ ನಿಲ್ಲುವಂತೆ ಮಾಡುತ್ತಾನೆ. ಆಗ **ಸಮಾನ** ನೆಂದು ಹೆಸರು. ಇನ್ನು ಕತ್ತಿನ ಭಾಗದಲ್ಲಿದ್ದುಕೊಂಡು ನಾಲಗೆಯಿಂದ ಮಾತನಾಡು ವಂತೆ ವ್ಯಾಪಾರಮಾಡುತ್ತಾನೆ. ಆಗ **ಉದಾನ**ನೆಂದು ಹೆಸರು. ಇನ್ನು ಉಗುರಿನ ತುದಿಯಿಂದಾರಂಭಿಸಿ ತಲೆಗೂದಲಿನವರೆಗೂ ವ್ಯಾಪಿಸಿರುವ ಪ್ರಾಣನಿಗೆ **ವ್ಯಾನ**ನೆಂದು ಹೆಸರು. ಈ ಮೂಲಕ ಇಡಿಯ ಶರೀರವನ್ನೆಲ್ಲ ವ್ಯಾಪಿಸಿರುವದರಿಂದ **ವ್ಯಾನ**ನೆನಿಸು ತ್ತಾನೆ. ಹೀಗೆ ಪ್ರಾಣಾತ್ಮನು ಅನ್ನಾತ್ಮನಿಗಿಂತ ಸೂಕ್ಷ್ಮನೂ ವ್ಯಾಪಕನೂ ನಿತ್ಯನೂ ಆಗಿರುವನು.

ಈಗ ಮನೋಮಯಾತ್ಮನನ್ನು ವಿಚಾರಮಾಡೋಣ. ಇವನು ಪ್ರಾಣಮಯ ನಿಗಿಂತ ಸೂಕ್ಷ್ಮನು. ಏಕೆಂದರೆ ಉಸಿರಾಡುವ ಪ್ರಾಣಿಗಳಲ್ಲೆಲ್ಲ ಪ್ರಾಣಮಯಾತ್ಮನಿರು

ತ್ತಾನೆ. ಆದರೆ ಮನೋಮಯನು ಮನುಷ್ಯರಲ್ಲಿಯೇ ಸ್ಫುಟವಾಗಿ ಕಂಡುಬರುತ್ತಾನೆ. ಹೇಗೆಂದರೆ : ಪ್ರಾಣಿಗಳಲ್ಲಿ ಹಸಿವುಬಾಯಾರಿಕೆಗಳ ವೇದನೆಗಳು, ಹಾಗೂ ಅತ್ಯಲ್ಪವಾದ ಮನೋವೇದನೆಗಳು ಕಂಡುಬರುತ್ತವೆ. ಆದರೆ ಮಾನವನಲ್ಲಿ ಹಾಗಲ್ಲ. ಅವನಿಗೆ ಸೂಕ್ಷ್ಮವಾದ ಅಂತಃಕರಣವಿದೆ. ಅದರಿಂದ ನಾಳೆಗೇನು, ಮುಂದೇನು ? ಎಂದೆಲ್ಲ ಯೋಚಿಸುವ ಸಾಮರ್ಥ್ಯವಿದೆ. ಮತ್ತು ಈ ಶರೀರವನ್ನು ಬಿಟ್ಟನಂತರವೂ ತಾನು ಸುಖವಾಗಿರಬೇಕೆಂದು ಸತ್ಕರ್ಮಗಳನ್ನು ಸಂಕಲ್ಪಿಸಿ ಮಾಡುತ್ತಾನೆ. ಇನ್ನೂ ಮುಂದುವರೆದು· ತಾನು ಯಾರು ? ತನಗೆ ಕಾಣುವ ಪ್ರಪಂಚದ ತಿರುಳೇನು ? ದೇಹವನ್ನು ಬಿಟ್ಟಮೇಲೆ ಆತ್ಮವು ಎಲ್ಲಿಗೆ ಹೋಗುತ್ತದೆ. ? ದೇವತೆಗಳೆಂದರೆ ಯಾರು? ಪರಲೋಕಗಳ ಸ್ವರೂಪವೇನು ? ಸ್ವರ್ಗವನ್ನು ಸಂಪಾದಿಸುವದು ಹೇಗೆ ? ಇತ್ಯಾದಿ ರೀತಿಯಿಂದ ಚಿಂತನೆಮಾಡುವ ಸಾಮರ್ಥ್ಯವಿದೆ. ಇವೆಲ್ಲವೂ ಮನಸ್ಸಿನ ವ್ಯಾಪಾರಗಳೇ ಆಗಿವೆ. ಆದ್ದರಿಂದ ಮನಸ್ಸುಳ್ಳವನನ್ನು ಮನುಷ್ಯನೆಂದು ಕರೆಯುತ್ತಾರೆ. ಹೀಗೆ ಮನುಷ್ಯರಲ್ಲೆಲ್ಲ ಮನೋಮಯಾತ್ಮನು ವ್ಯಾಪಿಸಿಕೊಂಡಿರುತ್ತಾನೆ. ಆದ್ದರಿಂದ ಮನೋಮಯನು ಉಳಿದ ಅನ್ನಮಯ, ಪ್ರಾಣಮಯಾತ್ಮರಿಗಿಂತ ಶ್ರೇಷ್ಠನೆನಿಸಿರು ತ್ತಾನೆ.

ಇಲ್ಲಿ ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ವಿಶೇಷವಾಗಿ ತಿಳಿಸುವದೇನೆಂದರೆ ಮಾನವನಿಗೆ ಭೌತಿಕವಿದ್ಯೆ- ಅಧ್ಯಾತ್ಮವಿದ್ಯೆಗಳನ್ನು ತಿಳಿದು ವಿಚಾರಮಾಡುವ ವಿಶೇಷಯೋಗ್ಯತೆಯೂ ಇದೆ. ಅದರಲ್ಲಿಯೂ ವೇದ-ವೇದಾಂಗ- ವೇದಾಂತಶಾಸ್ತ್ರಗಳ ಅಧ್ಯಯನ, ಚಿಂತನಾದಿಗಳಿಂದ ತನ್ನ ಜ್ಞಾನಶಕ್ತಿ ಯನ್ನು ಬೆಳೆಯಿಸಿಕೊಂಡು ಚತುರ್ವಿಧವಾದ ಪುರುಷಾರ್ಥಗಳನ್ನೂ ಸಾಧಿಸಬಹು ದಾಗಿದೆ. ಇಂಥ ಅವಕಾಶವು ಸೃಷ್ಟಿಯಲ್ಲಿ ಮಾನವನನ್ನು ಬಿಟ್ಟರೆ ಬೇರಾರಿಗೂ ಇರುವದಿಲ್ಲ- ಎಂದು ತಿಳಿಸಿ ಮಾನವನು ಪಡೆಯಬೇಕಾದ ಪರಮಪುರುಷಾರ್ಥಕ್ಕೆ ಆಧಾರವಾದ ಅಧ್ಯಾತ್ಮವಿದ್ಯೆಯು ಮನೋವೃತ್ತಿರೂಪವಾಗಿದ್ದರೂ ಅನಿತ್ಯವಲ್ಲ. ಏಕೆಂದರೆ ಅದು ಚೈತನ್ಯವಿಶಿಷ್ಟವಾಗಿದೆ. ಆತ್ಮಚೈತನ್ಯವು ನಿತ್ಯವೂ ಸತ್ಯವೂ ಆದ್ದರಿಂದ ವೇದಗಳ ಮೂಲಕ ಆ ತತ್ತ್ವವನ್ನು ಮನಗಂಡಾಗ ಮಾನವನು ಅಮೃತನಾಗುತ್ತಾನೆ. ಹೀಗೆ ಮನೋಮಯಾತ್ಮನನ್ನು ಮನುಷ್ಯನು ತಾನು ಪಡೆಯಲಿರುವ ಪರಮ ಪುರುಷಾರ್ಥವಾದ ಮೋಕ್ಷಕ್ಕೆ ದ್ವಾರವಾಗಿ ಮಾಡಿಕೊಂಡು ಕೃತಾರ್ಥನಾಗ ಬಹುದಾಗಿದೆ- ಎಂದಿದ್ದಾರೆ. ಈ ಮನೋಮಯಾತ್ಮನ ವರ್ಣನೆಯನ್ನು ಮಾಡುವಾಗ ಶ್ರುತಿಯು ಕೂಡ ವೇದಗಳನ್ನು ಮನೋಮಯಾತ್ಮನ ಶಿರಸ್ಸು ಹಾಗೂ ಎಡ-ಬಲಭುಜಗಳೆಂದು ವರ್ಣಿಸಿದೆ. ಹೀಗೆ ವೇದವು ನಿತ್ಯವಾದದ್ದು- ಎಂದು ತಿಳಿಸುತ್ತಿದೆ.

ಇದರಿಂದ ವೈದಿಕವಾದ ಕರ್ಮಕಾಂಡ- ಜ್ಞಾನಕಾಂಡಗಳು ಭಗವಂತನು ಮಾನವನಿಗೆ ಅನುಗ್ರಹಿಸಿರುವ ವಿಶೇಷಕೊಡುಗೆಯೆಂದೇ ತಿಳಿಯಬೇಕು. ಮತ್ತು ಪರಮಪುರುಷಾರ್ಥರೂಪವಾದ ಮುಕ್ತಿಯನ್ನು ಪಡೆಯಲು ಮಾನವಜನ್ಮವೇ ಬೇಕು- ಎಂದು ತಿಳಿಸಿದಂತಾಗಿದೆ.

ಈಗ ವಿಜ್ಞಾನಮಯಾತ್ಮನನ್ನು ವಿಚಾರಮಾಡೋಣ. ಮನೋಮಯಾತ್ಮನಂತೆಯೇ ಇವನೂ ಸೂಕ್ಷ್ಮನಾಗಿರುತ್ತಾನೆ. ಹೇಗೆಂದರೆ ಮನಸ್ಸು, ಸಂಕಲ್ಪ- ವಿಕಲ್ಪರೂಪವಾದ ವೃತ್ತಿಗಳುಳ್ಳದ್ದು. ಅದು ನಿಶ್ಚಿತವಾದ ಬುದ್ಧಿರೂಪವಾದ ವೃತ್ತಿಯುಳ್ಳದ್ದಾದರೆ **ವಿಜ್ಞಾನ**ವೆನಿಸುವದು. ಯಾವದೇ ಕೆಲಸವನ್ನು ನಾವು ಮಾಡಬೇಕಾದರೂ ಕೇವಲ ಮನೋವೃತ್ತಿಗಳಲ್ಲಿಯೇ ನಿಂತರೆ ಕಾರ್ಯಸಿದ್ಧಿಯಾಗುವದಿಲ್ಲ. ಆದ್ದರಿಂದ ಆ ಮಜಲನ್ನು ದಾಟಿ ಒಂದಾನೊಂದು ನಿರ್ಣಯಕ್ಕೆ ಬರಬೇಕು. ಅನಂತರ ಅಲ್ಲಿ ನಿಲ್ಲಬೇಕು. ಕಾರ್ಯಸಿದ್ಧಿಯಾಗುತ್ತದೆಯೆಂದು ನಂಬಬೇಕು. ಇದನ್ನು **ಶ್ರದ್ಧೆ**ಯೆನ್ನುವರು. ವಿಜ್ಞಾನಾತ್ಮನಿಗೆ ಈ ಶ್ರದ್ಧೆಯೇ ಶಿರಸ್ಸೆಂದು ಉಪನಿಷತ್ತಿನಲ್ಲಿ ವರ್ಣಿಸಿದೆ. ಹಾಗೆಯೇ ಋತ- ಸತ್ಯಗಳು ಎಡ ಬಲ ಪಾರ್ಶ್ವಗಳೆಂದು ಹೇಳಿದೆ. ಹೀಗೆ ವಿಜ್ಞಾನಾತ್ಮನು ಮನೋಮಯಾತ್ಮನಿಗಿಂತ ಸೂಕ್ಷ್ಮನಾಗಿದ್ದುಕೊಂಡಿದ್ದಾನೆ. ಶ್ರುತಿಯು ಈ ಆತ್ಮನನ್ನು ಹಿರಿಯನೆಂದು ದೇವತೆಗಳೆಲ್ಲರೂ ಉಪಾಸನೆಮಾಡುತ್ತಾರೆ- ಎಂದೂ ಹೊಗಳುತ್ತಿದೆ. ಇದರ ಅಭಿಪ್ರಾಯವೇನೆಂದರೆ ದೇವತೆಗಳು ಎಂದರೆ ಇಂದ್ರಿಯಗಳು. ಇವು ಏನಾದರೂ ವ್ಯಾಪಾರಮಾಡಬೇಕಾದಲ್ಲಿ ಒಳಗಿನಿಂದ ಪ್ರೇರಣೆಯಾಗಬೇಕು. ಆ ಪ್ರೇರಣೆಯು ನಿಶ್ಚಿತವಾದ ಬುದ್ಧಿವೃತ್ತಿಯಾಗಿರಬೇಕು. ಅದೇ ವಿಜ್ಞಾನಾತ್ಮನು, ಆದ್ದರಿಂದ ಈ ಸ್ಥಿತಿಯಲ್ಲಿ ವಿಜ್ಞಾನಾತ್ಮನನ್ನು ಬ್ರಹ್ಮವೆಂದೇ ತಿಳಿದರೂ ಫಲವುಂಟು. ಅದೇನೆಂದರೆ : ಮಾಡಬೇಕಾದ ಕೆಲಸವು ಈ ವಿಜ್ಞಾನಾತ್ಮನ ಕೃಪೆಯಿಂದಲೇ ಚೆನ್ನಾಗಿ ಆಗುವದು. ಆದರೆ ಈ ವಿಜ್ಞಾನಾತ್ಮನು **ಕರ್ತೃ**ವಾದ್ದರಿಂದ ಇವನೇ ಕಡೆಯವನಲ್ಲ. ಏಕೆಂದರೆ ಕರ್ತೃವು ಯಾವಾಗಲೂ ಫಲಕ್ಕಾಗಿ ಕರ್ಮವನ್ನು ಮಾಡುತ್ತಾನೆ. ಹೀಗಿರುವದರಿಂದ ಈ ವಿಜ್ಞಾನಾತ್ಮನಿಗೂ ಅಂತರನಾದ ಮತ್ತೊಬ್ಬ ಆತ್ಮನಿದ್ದಾನೆ- ಎಂದಾಯಿತು. ಅವನೇ ಆನಂದಮಯಾತ್ಮನು- ಎಂದು ಶ್ರುತಿಯು ತಿಳಿಸುತ್ತಿದೆ. ಈಗ ಆನಂದಮಯಾತ್ಮನನ್ನು ವಿಚಾರಮಾಡೋಣ.

ಶ್ರುತಿಯು ಆನಂದಮಯಾತ್ಮನು ವಿಜ್ಞಾನಮಯಾತ್ಮನನ್ನೂ ವ್ಯಾಪಿಸಿಕೊಂಡು ಅವನಿಗಿಂತಲೂ ಒಳಗಿದ್ದಾನೆ- ಎಂದು ತಿಳಿಸುತ್ತಿದೆ. ಇವನಿಗೂ ಶಿರ ಆದಿಗಳನ್ನು ಕಲ್ಪಿಸಿ ಹೇಳಿರುತ್ತದೆ. ಹೇಗೆಂದರೆ : ಈ ಆನಂದಮಯಾತ್ಮನಿಗೆ ಪ್ರಿಯವೇ ಶಿರಸ್ಸು. ಮೋದ ಪ್ರಮೋದಗಳು ಬಲ ಎಡ ರೆಕ್ಕೆಗಳು, ಆನಂದತತ್ತ್ವವೇ ಆತ್ಮನು. ಬ್ರಹ್ಮವೇ

ಆಧಾರವು- ಎಂದು ವರ್ಣಿಸಿರುತ್ತದೆ. ಇದರ ಅಭಿಪ್ರಾಯವು ಹೀಗಿದೆ : ಮನುಷ್ಯನು ಏನೇ ಕೆಲಸಮಾಡಿದರೂ ಫಲದ ಆಸೆಯಿಂದಲೇ ಮಾಡುತ್ತಾನೆ. ಆ ಫಲವು ಅವನ ಕರ್ಮಕ್ಕೆ ತೃಪ್ತಿಯನ್ನುಂಟುಮಾಡುತ್ತದೆ. ಇದು ಲೋಕಪ್ರಸಿದ್ಧವಾಗಿದೆ. ಇದರಂತೆಯೇ ವಿಜ್ಞಾನವು ಕರ್ತೃವಾಗಿದ್ದು ಆನಂದವು ಭೋಕ್ತೃವಾಗಿದೆ. ಹೀಗೆ ಪಂಚಕೋಶ ಪ್ರಕ್ರಿಯೆಯನ್ನು ಈ ಉಪನಿಷತ್ತಿನಲ್ಲಿ ಬಳಸಲಾಗಿದೆ. ಕಡೆಯಲ್ಲಿ ಆನಂದಮಯಾತ್ಮ ನನ್ನೂ ದಾಟಿ ''ಆನಂದ ಆತ್ಮಾ'' ಎಂದು ಸ್ಫುಟವಾಗಿ ಆನಂದಸ್ವರೂಪವಾದ ಬ್ರಹ್ಮ ವನ್ನೇ ಪರಮಾರ್ಥವೆಂದು ಇಲ್ಲಿ ಉಪಸಂಹಾರಮಾಡಿರುತ್ತದೆ. ಈ ಪರಮಾರ್ಥಾತ್ಮ ನನ್ನು ಅರಿತುಕೊಳ್ಳಲು ಅನ್ನಮಯಾದ್ಯಾತ್ಮರುಗಳನ್ನು ಉಪಾಯವಾಗಿ ಬಳಸಿ ಕಡೆ ಯಲ್ಲಿ ಆನಂದಪರಬ್ರಹ್ಮದಲ್ಲಿಯೇ ಶ್ರುತಿಯು ಜಿಜ್ಞಾಸುಗಳನ್ನು ನೆಲೆಗೊಳಿಸಿ ವಿಶ್ರಾಂತವಾಗಿದೆ.

ಇಲ್ಲಿ ಕೆಲವರು ಭ್ರಾಂತರಾಗಿರುವದು ಹೇಗೆಂದರೆ : ಆನಂದಮಯಾತ್ಮನಿಂದ ಮುಂದಕ್ಕೆ ಬೇರೆ ಕಲ್ಪಿತಾತ್ಮರು (ಕೋಶಾತ್ಮರು) ಗಳನ್ನು ಶ್ರುತಿಯಲ್ಲಿ ಹೇಳಿಲ್ಲವಾದ್ದ ರಿಂದ ಆನಂದಮಯವೇ ಪರಬ್ರಹ್ಮವೆಂದು ತಿಳಿದು ಸಿದ್ಧಾಂತಮಾಡಿರುತ್ತಾರೆ. ಆದರೆ ಶ್ರುತಿಯು ''ಆನಂದ ಆತ್ಮಾ'' ಎಂದು ಸ್ಪಷ್ಟವಾಗಿ ತಿಳಿಸಿ 'ಮಯಟ್' ಪ್ರತ್ಯಯ ವಿಲ್ಲದ- ಎಂದರೆ ವಿಕಾರಾರ್ಥವಿಲ್ಲದ ಅಖಂಡಾನಂದತತ್ತ್ವವನ್ನೇ ಬ್ರಹ್ಮವೆಂದು ಪ್ರತಿಪಾದಿಸಿರುತ್ತದೆ. ಇದಕ್ಕೆ ತಕ್ಕಂತೆ ಉಪನಿಷತ್ತಿನ ಉಪಸಂಹಾರದಲ್ಲಿಯೂ ''ಆನಂದಂ ಬ್ರಹ್ಮಣೋ ವಿದ್ವಾನ್॥ ನ ಬಿಭೇತಿ ಕುತಶ್ಚನೇತಿ'' ಎಂದು ಆನಂದಶಬ್ದವನ್ನು ಮಾತ್ರ ಬಳಸಿದೆಯೇ ಹೊರತು 'ಆನಂದಮಯ'ನೆಂದು ತಿಳಿಸಿಲ್ಲ. ಆದ್ದರಿಂದ ಅನ್ನಮಯನಿಂದಾರಂಭಿಸಿ ಆನಂದಮಯಾಂತವಾದ ಐದು ಆತ್ಮರುಗಳೂ ಕಲ್ಪಿತಾತ್ಮರಾಗಿದ್ದು ಮುಂದುಮುಂದಿನ ಆತ್ಮರನ್ನು ತಿಳಿದಾಗ ಹಿಂದು ಹಿಂದಿನದು 'ಕೋಶ'ಗಳಾಗಿ ಬಿಡುವವು. ಇದೇ ಪಂಚಕೋಶಪ್ರಕ್ರಿಯೆಯ ರಹಸ್ಯವಾಗಿದೆ. ಆನಂದಾತ್ಮನಾದರೊ, ಪಂಚಕೋಶಾತೀತನಾಗಿದ್ದಾನೆ. ಅವನನ್ನು ಇನ್ನು ಮುಂದೆ ಉಪನಿಷತ್ತಿನಲ್ಲಿ 'ಬ್ರಹ್ಮ'ವೆಂದೇ ನಿರ್ದೇಶಿಸಲಾಗುತ್ತದೆ. ಈ ರೀತಿಯಾಗಿ ಪಂಚ ಕೋಶಗಳನ್ನು ಅಧ್ಯಾರೋಪಮಾಡಿ ಅನಂತರ ಒಂದೊಂದನ್ನೂ ಅಲ್ಲಗಳೆಯುವ ಮೂಲಕ ಶ್ರುತಿಯು ಪಂಚಕೋಶಾತೀತನಾದ ಪರಿಶುದ್ಧಾತ್ಮನನ್ನೇ ಬೋಧಿಸುತ್ತಿದೆ.

ಈಗ ಮುಂದಿನ ಗ್ರಂಥಭಾಗವನ್ನು ವಿಚಾರಮಾಡೋಣ :-

**''ಅಸನ್ನೇವ ಸ ಭವತಿ ........... ಅಥಾತೋಽನು ಪ್ರಶ್ನಾಃ'' ॥೬॥**

ಈವರೆಗೆ ಆತ್ಮಸ್ವರೂಪವನ್ನು ವರ್ಣನೆಮಾಡುವಾಗ ಸೋಪಾಧಿಕವಾಗಿ ಪಂಚಕೋಶಗಳ ವಿವರದೊಡನೆ ತಿಳಿಸಿದ್ದಾಗಿದೆ. ಆದರೆ ಈ ಆತ್ಮನೇ ಪರಬ್ರಹ್ಮ

ವಾಗಿದ್ದರೂ ಕೋಶಾತೀತನಾದ ಆತ್ಮನು ನಮ್ಮ ಪ್ರತ್ಯಗಾತ್ಮನೆಂದೂ ಅವನೇ ಜಗತ್ಕಾರಣನೆಂದೂ ತಿಳಿಸಿರುವದಿಲ್ಲ. ಆದ್ದರಿಂದ ಪಂಚಕೋಶಪ್ರಕ್ರಿಯೆಯ ಮೂಲಕ ಆನಂದಾತ್ಮನನ್ನು ಗೊತ್ತುಪಡಿಸಿ ಅವನೇ ಸರ್ವಾಂತರನೆಂದೂ, ಆ ಆತ್ಮನಿಗೆ ನಿಜವಾಗಿ ಪಂಚಕೋಶಗಳ ಸಂಪರ್ಕವಿಲ್ಲವೆಂದೂ, ಹಾಗೆಂತ ತಿಳಿಯುವದೇ ಆತ್ಮಜ್ಞಾನವೆಂದೂ ವಿವರಿಸಿದ್ದಾಗಿದೆ. ಈಗ ಜಗತ್ಕಾರಣನಾದ ಪರಮಾತ್ಮನೇ ಸರ್ವರ ಆತ್ಮನೆಂದು ಕಾರ್ಯಕಾರಣಪ್ರಕ್ರಿಯೆಯನ್ನು ಬಳಸಿ ಪ್ರತಿಪಾದಿಸಲಾಗುವದು. ಇದಕ್ಕೆ ಮುಂಚೆ ಅಸದ್ವಾದವನ್ನು ನಿರಾಕರಿಸಲಾಗುವದು.

ನಮ್ಮ ಭರತಖಂಡದಲ್ಲಿ ಹಿಂದೆ ಬೌದ್ಧಮತವು ಪ್ರಚಾರದಲ್ಲಿತ್ತು. ಈಗಲೂ ಸ್ವಲ್ಪಮಟ್ಟಿಗೆ ಇದೆ. ಈ ಮತದಲ್ಲಿ ಗೌತಮಬುದ್ಧನ ಕಾಲಾನಂತರ ಕೆಲವು ಪರಿವರ್ತನೆಗಳಾಗಿ ಶೂನ್ಯವಾದವೂ, ಕ್ಷಣಿಕವಿಜ್ಞಾನವಾದವೂ ತಲೆಯೆತ್ತಿದವು. ಶ್ರೀಶಂಕರಾಚಾರ್ಯರ ಅವತಾರಕಾಲಕ್ಕೆ ಇವು ಪ್ರಚುರವಾಗಿದ್ದವೆಂದು ತಿಳಿದು ಬರುತ್ತದೆ. ಆದರೆ ಬ್ರಹ್ಮಕಾರಣವಾದವು ಇದಕ್ಕಿಂತಲೂ ಸನಾತನವಾದದ್ದು. ಎಲ್ಲಾ ಉಪನಿಷತ್ತುಗಳಲ್ಲಿಯೂ ಬ್ರಹ್ಮಕಾರಣವಾದವನ್ನೇ ಪ್ರಸ್ತಾಪಿಸಿರುತ್ತದೆ. ಆದರೂ ಬೌದ್ಧರ ಶೂನ್ಯವಾದವು ಉಪನಿಷತ್ತುಗಳಲ್ಲಿರುವ ಬ್ರಹ್ಮವಾದಕ್ಕೇ ವಿರೋಧಿಯಾದ್ದರಿಂದ ಶ್ರೀ ಶಂಕರಾಚಾರ್ಯರು ಶೂನ್ಯವಾದವನ್ನು ನಿರಾಕರಿಸಿ ಆ ಕಾಲಕ್ಕೆ ಬ್ರಹ್ಮಕಾರಣವಾದವನ್ನು ಪ್ರತಿಪಾದಿಸಿ ಸ್ಥಾಪಿಸಿದರು. ಇದಕ್ಕೆ ಆಧಾರವು ಉಪನಿಷತ್ತುಗಳೇ ಆಗಿವೆ. ಈಗ ಈ ತೈತ್ತಿರೀಯೋಪನಿಷತ್ತಿನಲ್ಲಿ ಬ್ರಹ್ಮಕಾರಣವಾದವನ್ನು ನಿರೂಪಿಸಿರುವದನ್ನು ಶ್ರೀ ಶಂಕರಭಗವತ್ಪಾದರ ಭಾಷ್ಯದ ಆಧಾರದಿಂದ ವಿಚಾರಮಾಡೋಣ.

ಶ್ರುತಿಯ ಅಭಿಪ್ರಾಯವು ಹೀಗಿದೆ : ''ಯಾವನು ಬ್ರಹ್ಮವೆಂಬುದು ಇಲ್ಲ-ಎನ್ನುವನೋ ಅವನು ತಾನೇ ಇಲ್ಲವಾಗುವನು. ಆದರೆ ಬ್ರಹ್ಮವು ಇದೆ- ಎನ್ನುವವನನ್ನು ಸಂತನು (ಸತ್ಪುರುಷನು) ಎಂದು ಬಲ್ಲವರು ಹೇಳುವರು.'' ಅನಂತರ ಶ್ರುತಿಯು ಮುಂದುವರೆದು ಹೀಗೆನ್ನುತ್ತಿದೆ : ''ಈ ಬ್ರಹ್ಮವನ್ನು ಅರಿತವನು ದೇಹವನ್ನು ಬಿಟ್ಟ ಅನಂತರ ಬ್ರಹ್ಮವನ್ನು ಸೇರುತ್ತಾನೊ ? ಮತ್ತು ಹಾಗೆಯೇ ಬ್ರಹ್ಮದಲ್ಲಿ ಒಂದಾಗಿ ಪರಮಾನಂದವನ್ನು ಹೊಂದುತ್ತಾನೊ ?'' ಈ ರೀತಿಯಾಗಿ ಪ್ರಶ್ನೆಗಳು ಎದ್ದಿರುವವು. ಹಾಗೆಯೇ ಇವುಗಳಿಗೆ ಉತ್ತರಗಳೂ ಕೊಡಲ್ಪಟ್ಟಿವೆ. ಈ ಪ್ರಶ್ನೋತ್ತರಗಳ ರೂಪದಿಂದ ಬ್ರಹ್ಮವೇ ಜಗತ್ಕಾರಣವೆಂದೂ ಆ ಪರಬ್ರಹ್ಮವನ್ನು ಸರಿಯಾಗಿ ಅರಿತವನು ಆ ಪರಬ್ರಹ್ಮದಲ್ಲಿಯೇ ಒಂದಾಗಿ ಮುಕ್ತಿಯನ್ನು ಪಡೆಯುತ್ತಾನೆಂದೂ, ಹಾಗೆ ಪಡೆಯುವಾಗ ಅವಿದ್ಯಾಕಲ್ಪಿತವಾದ ಅನ್ನಮಯಾದಿಪಂಚಕೋಶಗಳನ್ನೂ ಮೀರಿ ಆನಂದಬ್ರಹ್ಮರೂಪನಾಗಿ ನೆಲೆನಿಲ್ಲುತ್ತಾನೆಂದೂ ತಿಳಿಸಿದೆ. ಈ

ವಿಷಯಗಳನ್ನು ಈಗ ಪರಿಶೀಲಿಸೋಣ.

ಬ್ರಹ್ಮಕಾರಣವಾದವು ಉಪನಿಷತ್ತುಗಳಲ್ಲಿ ಬಹಳ ಕಡೆ ಕಂಡುಬರುತ್ತದೆ. ಆದರೆ **ಬ್ರಹ್ಮವು ಜಗತ್ಕಾರಣವೇ** - ಎಂದು ಅವಧಾರಣೆ ಇರುವದಿಲ್ಲ. ಇದಕ್ಕೆ ಬದಲು ಈ ಜಗತ್ತಿಗೆ ಕಾರಣವನ್ನು ಹುಡುಕಿದಾಗ ಅದು ಬ್ರಹ್ಮವೇ ಆಗಿರಬೇಕೇ ಹೊರತು ಬೇರೊಂದಾಗಲಾರದು- ಎಂಬ ಅಭಿಪ್ರಾಯದಿಂದ ಹೇಳಲಾಗಿರುತ್ತದೆ. ಕಡೆಯಲ್ಲಿ ಈ ಜಗತ್ಕಾರಣತ್ವವನ್ನು ಬ್ರಹ್ಮದಲ್ಲಿ ಆರೋಪಿಸಿದ್ದೇ ಹೊರತು ಪ್ರತಿಪಾದಿಸುವದಕ್ಕಲ್ಲ- ಎಂದೂ ತಿಳಿಯಬೇಕು. ಈ ಕ್ರಮದಿಂದ ಬ್ರಹ್ಮಜಿಜ್ಞಾಸೆಯು ಮುಂದುವರೆದಿದೆ. ಈಗ ಶ್ರುತಿಯು ಬ್ರಹ್ಮಕಾರಣತ್ವವನ್ನು ಹೀಗೆ ಮುಂದುವರೆಸಿ ವಿವರಿಸುತ್ತದೆ. ಬ್ರಹ್ಮವು ''ತಾನು ಬಹುವಾಗುವೆನು'' ಎಂದು ಬಯಸಿತು. ಅದನ್ನೇ ಚೆನ್ನಾಗಿ ಆಲೋಚಿಸಿತು. ಅನಂತರ ಈ ನಾಮರೂಪಾತ್ಮಕವಾದ ಪ್ರಪಂಚವೆಲ್ಲವನ್ನೂ ಉಂಟುಮಾಡಿತು. ಮತ್ತು ಅದನ್ನು ಒಳಹೊಕ್ಕಿತು. ಸತ್-ತ್ಯತ್ ಎಂಬ ನಾಮರೂಪಗಳಾಗಿ ಹರಡಿ ಕೊಂಡಿತು. ಈ ರೀತಿಯಾಗಿ ಜಗತ್ತಿನ ಸೃಷ್ಟಿಯನ್ನು ತಿಳಿಸುತ್ತಾ ಜಗತ್ತಿನ ವಿಜ್ಞಾನಕ್ಕಿಂತ ಅದರ ಸೃಷ್ಟಿಕರ್ತನ ವಿಜ್ಞಾನದಲ್ಲಿಯೇ ತಾತ್ಪರ್ಯವೆಂದು ಪ್ರತಿಪಾದಿಸಲಾಗಿದೆ. ಆದ್ದರಿಂದ ಈಗ ಸೃಷ್ಟಿಕರ್ತನನ್ನು ತಿಳಿಯುವದಕ್ಕೆ ನಮ್ಮ ಪ್ರಯತ್ನವನ್ನು ಮುಂದುವರೆಸೋಣ.

ಲೋಕದಲ್ಲಿ ಒಂದು ಸುಂದರವಾದ ಶಿಲಾವಿಗ್ರಹವನ್ನು ನೋಡಿದಾಗ ಅದು ಎಷ್ಟು ಮುದ್ದಾಗಿದೆ, ಎಷ್ಟೊಂದು ರಮಣೀಯವಾಗಿದೆ- ಎಂದು ನಾವು ಕೊಂಡಾಡುತ್ತೇವೆ. ಇದು ಸರಿ. ಆದರೆ ಸ್ವಲ್ಪ ಮುಂದುವರೆದು ಆಲೋಚನೆಮಾಡಿದರೆ ''ವಿಗ್ರಹವೇ ಇಷ್ಟು ಸುಂದರವಾಗಿರುವಾಗ ಇದನ್ನು ನಿರ್ಮಿಸಿದ ಶಿಲ್ಪಿಯು ಎಂಥ ಜಾಣನೂ ಕುಶಲನೂ ಆಗಿರಬಹುದು? ಎನಿಸುವದಿಲ್ಲವೆ ? ಹಾಗೆಯೇ ಈ ಪ್ರಪಂಚವನ್ನೆಲ್ಲ ನೋಡಿದಾಗ ಸಮುದ್ರ, ಪರ್ವತಗಳು, ನದಿಗಳು, ಗಿಡಮರಗಳು, ಪ್ರಾಣಿಗಳು, ಪಕ್ಷಿಗಳು ಇತ್ಯಾದಿ ಆಧಿಭೌತಿಕ ಪ್ರಪಂಚ- ಮತ್ತು ಕಣ್ಣೆತ್ತಿ ನೋಡಿದಾಗ ಕಾಣುವ ಆಕಾಶ, ನಕ್ಷತ್ರಗಳು, ಸೂರ್ಯಚಂದ್ರರು, ಮೋಡಗಳು, ಮಳೆ ಬಿಸಿಲುಗಳು- ಇತ್ಯಾದಿ ವೈಚಿತ್ರ್ಯಗಳು, ಹಗಲುರಾತ್ರಿಗಳು- ಮುಂತಾದ ಸೃಷ್ಟಿಯ ರಹಸ್ಯಗಳು, ಮತ್ತು ನಮ್ಮ ಶರೀರದೊಳಗಿನ ಅವಯವಗಳು, ಪ್ರಾಣಸಂಚಾರ, ಮನಸ್ಸಿನ ಹರಿದಾಟ- ಎಚ್ಚರವೇ ಮುಂತಾದ ಅವಸ್ಥೆಗಳು ಹೀಗೆ ಅಪರಿಮಿತವಾದ ದೃಶ್ಯಗಳು- ಇವುಗಳನ್ನೆಲ್ಲ ಸೃಷ್ಟಿಸಿದವನು ಯಾರು ? ಎಂದು ಆಶ್ಚರ್ಯವಾಗುವದಿಲ್ಲವೆ ? ಸುಪ್ರಸಿದ್ಧ ಕನ್ನಡಸಾಹಿತಿಗಳೂ ''ಮಂಕುತಿಮ್ಮನ ಕಗ್ಗ'' ಕವಿತೆಗಳ ರಚನಕಾರರೂ ಆದ ದಿ। ಡಿ.ವಿ. ಗುಂಡಪ್ಪನವರ ''ನಿವೇದನ'' ಎಂಬ ಪದ್ಯದ ಒಂದು

ಸಾಲು ಹೀಗಿದೆ : ''ಮೇಲೆ ನೋಡೆ ಕಣ್ಣ ತಣಿಪ ನೀಲ ಪಟದಿ ವಿವಿಧರೂಪ ಜಾಲಗಳನ್ನು ಬಣ್ಣಿಸಿರ್ಪ ಚಿತ್ರಚತುರನಾರ್'' ಎಂದಂತೆ ಮನಸ್ಸಿನಿಂದ ಊಹಿಸುವ ದಕ್ಕೂ ಸಾಧ್ಯವಾಗದಷ್ಟು ವಿಚಿತ್ರವಾದ ಪ್ರಪಂಚವನ್ನು ಸೃಷ್ಟಿಮಾಡಿರುವ ಸೃಷ್ಟಿಕರ್ತನು ಯಾವನಿರಬಹುದು ? ಅವನು ಎಂಥ ಸರ್ವಜ್ಞನೂ ಸರ್ವಶಕ್ತನೂ ಆಗಿರಬೇಕು ? ಎನಿಸುವದಿಲ್ಲವೆ ? ಅವನೇ ಪರಮಾತ್ಮನು, ಪರಬ್ರಹ್ಮವನ್ನು ಈ ರೀತಿಯಾಗಿ ಚಿಂತನೆ ಮಾಡಿದಾಗ ಸೃಷ್ಟಿಕರ್ತನಾಗಿ ಪರಮಾತ್ಮನು ನಮ್ಮ ಅಂತಃಕರಣಕ್ಕೆ ಗೋಚರಿಸುತ್ತಾನೆ. ಅವನೇ ನಮ್ಮೆಲ್ಲರ ಆತ್ಮನು. ಹಾಗೆಂತ ತಿಳಿಯುವದೇ ಆತ್ಮಜ್ಞಾನವು- ಎಂದು ಉಪನಿಷತ್ತಿನಲ್ಲಿ ತಿಳಿಸಿದೆ.

ಈಗ ಪರಬ್ರಹ್ಮವನ್ನು ಅರಿಯಲು ಮತ್ತೊಂದು ಯುಕ್ತಿಯನ್ನು ಶ್ರುತಿಯು ಬಳಸುತ್ತಿದೆ. ಏನೆಂದರೆ ಬ್ರಹ್ಮವು ಇದೆ-ಎಂಬುದಕ್ಕೆ ಅದು ರಸರೂಪವಾಗಿರುವದೇ ಗುರುತಾಗಿರುತ್ತದೆ. ಹೇಗೆಂದರೆ ನಮ್ಮ ಜೀವನವನ್ನೇ ನೋಡೋಣ. ಪ್ರತಿ ಯೊಬ್ಬನೂ 'ನಾನು ಸುಖವಾಗಿ ಬಾಳಬೇಕು' ಎಂದು ಬಯಸುತ್ತಾನೆ. ಆ 'ಸುಖ' ಎಂಬಿದೇ ಬ್ರಹ್ಮವು. ನಮ್ಮ ಪೂಜ್ಯ ಗುರುಗಳು ಹೇಳುತ್ತಿದ್ದ ಒಂದು ಉದಾಹರಣೆ ಹೀಗಿದೆ : ಒಬ್ಬ ವ್ಯಕ್ತಿಯು ಮತ್ತೊಬ್ಬ ಮಿತ್ರ ಅಥವಾ ಪರಿಚಯಸ್ಥನನ್ನು ಹೀಗೆ ಕೇಳಿದನಂತೆ. ಆತನು ಆ ಕಾಲದಲ್ಲಿ ಮೇಷ್ಟರಾಗಿದ್ದನು. ಅವನನ್ನು ಕುರಿತು ನಿಮಗೆ ಮಾಹೆಯಾನ ಸಂಬಳ ಎಷ್ಟು ? ಮಿತ್ರನು ಹೀಗೆಂದನು : ''ಮಾಹೆಯಾನ ೧೨ ರೂ. ಗಳು'' 'ನಿಮಗೆ ಸರ್ವೀಸು ಎಷ್ಟಾಗಿದೆ ?' ಉತ್ತರ : 'ಹದಿನೈದು ವರ್ಷಗಳು'. ಆಗ ಆ ವ್ಯಕ್ತಿಯು ''ಸರಿ, ನಿಮ್ಮ ಸಂಪಾದನೆ ಇನ್ನು ೧೫ ವರ್ಷಗಳಿಗೆ ಒಟ್ಟು ರೂ. ೨೧೬೦ ಗಳಾಗುತ್ತವೆ. ಅಷ್ಟು ಹಣವನ್ನು ನಾನು ಈಗಲೆ ಪಾವತಿಮಾಡಿದಲ್ಲಿ ನೀವು ದೇಹತ್ಯಾಗ ವನ್ನು ಮಾಡಬಹುದಲ್ಲ ?'' ಎಂದನಂತೆ. ಕೂಡಲೆ ಆ ಮೇಷ್ಟರು ''ಅಯ್ಯೊ, ದಡ್ಡ, ನಾನು ಬದುಕನ್ನು ಅನುಭವಿಸುತ್ತಾ ಬಾಳುವದು ಹೆಚ್ಚೊ, ಹಣಕ್ಕಾಗಿ ದೇಹತ್ಯಾಗ ಮಾಡುವದು ಹೆಚ್ಚೊ ? ನಿನ್ನ ಪ್ರಶ್ನೆಯೇ ತಪ್ಪು'' ಎಂದನಂತೆ. ಇದರಿಂದ ತಿಳಿದುಬರುವದೇನೆಂದರೆ ಜೀವನವು (ಬಾಳು) ಅಮೂಲ್ಯವಾದುದು. ಇದರ ರಹಸ್ಯವೇ ನಾವು ಬ್ರಹ್ಮವೇ ಆಗಿರುವದು. ಹೀಗೆ ಬ್ರಹ್ಮವು ಸರ್ವಪ್ರಾಣಿಗಳ ಆತ್ಮನಾಗಿ ರಸರೂಪವಾಗಿರುತ್ತದೆ. ಆ ರಸರೂಪವಾದ ಬ್ರಹ್ಮದ ಬಲದಿಂದಲೇ ನಾವು ಆನಂದ ವನ್ನು ಹೊಂದಿದ್ದೇವೆ. ಹೀಗೆ ಆನಂದವು ನಮ್ಮ ಆತ್ಮನೇ ಆದದ್ದರಿಂದ ನಾವೆಲ್ಲರೂ ಬಾಳುತ್ತಿದ್ದೇವೆ. ಒಂದು ವೇಳೆ ನಮ್ಮ ನಿಜಸ್ವರೂಪವು ಆನಂದವಲ್ಲದೆ ಹೋಗಿದ್ದರೆ ಜೀವಿಸಬೇಕೆಂದು ಯಾರು ತಾನೆ ಬಯಸುತ್ತಿದ್ದರು ? ಎಂದು ಶ್ರುತಿಯೇ ಘೋಷಿಸು ತ್ತಿದೆ. ಈ ಆನಂದತತ್ತ್ವವನ್ನು ನಾವು ಅನುಭವಿಸುತ್ತಿದ್ದೇವಾದರೂ ಅರಿತುಕೊಂಡಿರು

ವದಿಲ್ಲ. ಆದ್ದರಿಂದ ಅದನ್ನು ಅರಿತು ಆನಂದಸ್ವರೂಪರಾಗಿ ನೆಲೆನಿಂತು ಕೃತಾರ್ಥರಾಗ ಬೇಕೆಂದು ಶ್ರುತಿಯು ನಮಗೆ ಎಚ್ಚರಿಸಿ ತಿಳಿಸುತ್ತಿದೆ.

ಈಗ ಬ್ರಹ್ಮವು ಇದೆ- ಎಂಬುದಕ್ಕೆ ಮತ್ತೊಂದು ಕಾರಣವನ್ನೂ ಶ್ರುತಿಯು ನಿರ್ದೇಶಮಾಡುತ್ತಿದೆ. ಅದೇನೆಂದರೆ : ಭಯಾಭಯಗಳು. ಜ್ಞಾನಿಗಳಿಗೆ ಅಭಯಕ್ಕೆ ಕಾರಣವಾಗಿಯೂ ಅಜ್ಞಾನಿಗಳಿಗೆ ಭಯಕ್ಕೆ ಕಾರಣವಾಗಿಯೂ ಬ್ರಹ್ಮವು ಇದ್ದು ಕೊಂಡಿದೆ. ಇದನ್ನು ಶ್ರುತಿಯು ಹೀಗೆ ವಿವರಿಸುತ್ತದೆ. ಅಜ್ಞಾನಿಯು ತಾನು ಬೇರೆ ; ಬ್ರಹ್ಮವು ಬೇರೆ- ಎಂದು ತಿಳಿದಿರುತ್ತಾನೆ. ಆಗ ತನ್ನನ್ನೂ ತನ್ನದೆಂಬುದನ್ನೂ ಬೇರೊಂದರಿಂದ ಕಾಪಾಡಿಕೊಳ್ಳಲು ಹವಣಿಸುತ್ತಾನೆ. ಆಗ ಭಯವು ಅವನನ್ನು ಕಾಡುತ್ತದೆ. ಉದಾಹರಣೆಗೆ ಒಂದು ಬಸ್‌ನಲ್ಲಿ ಪ್ರಯಾಣವನ್ನು ಮಾಡುವಾಗ ನಾವು ನಮ್ಮ ಪದಾರ್ಥಗಳನ್ನು ಎಚ್ಚರಿಕೆಯಿಂದ ಮತ್ತೆಮತ್ತೆ ಕಾದಿರಿಸಿಕೊಳ್ಳುತ್ತೇವೆ. ಏಕೆಂದರೆ ಬಸ್‌ನಲ್ಲಿರುವ ಉಳಿದ ಪ್ರಯಾಣಿಕರು ನಮ್ಮವರಲ್ಲ. ಈ ಭಾವನೆಯೇ ಭಯಕ್ಕೆ ಕಾರಣ. ಇಲ್ಲಿ ಭೇದಬುದ್ಧಿಯು ಅಭಯಕ್ಕೆ ಅಡ್ಡಿಯಾಗಿದೆ. ಆದರೆ ನಾವೇ ನಮ್ಮ ಬಂಧುಗಳೊಡನೆ ಒಂದು ಮದುವೆಯ ನಿಮಿತ್ತ ಒಟ್ಟಿಗೆ ಒಂದು ಬಸ್‌ನಲ್ಲಿ ಪ್ರಯಾಣಮಾಡುತ್ತಿದ್ದರೆ ನಾವೆಲ್ಲರೂ ಒಂದೇ - ಎಂಬ ಭಾವನೆಯಿರುವದರಿಂದ ಲಗೇಜು ಬಗ್ಗೆ ನಿಶ್ಚಿಂತೆಯಾಗಿದ್ದು ಆನಂದದಿಂದ ಪ್ರಯಾಣಮಾಡುತ್ತೇವೆ. ಇಲ್ಲಿ ಅಭೇದಬುದ್ಧಿಯೇ ಸುಖಕ್ಕೆ ಕಾರಣವಾಗಿದೆ. ಹೀಗೆಯೇ ಏಕತ್ವವನ್ನು ಕಂಡುಕೊಂಡ ವನಿಗೆ ಜಗತ್ತೆಲ್ಲವೂ ತನ್ನ ಕುಟುಂಬವೇ- ಎಂಬ ಅಬೇಧಬುದ್ಧಿಯಿರುವದರಿಂದ ಹಾಗೂ ಆ ತಿಳಿವಳಿಕೆಯಿಂದ ಅಭಯವನ್ನು ಹೊಂದುತ್ತಾನೆ. ಹಾಗಿಲ್ಲದವನು ಭಯಕ್ಕೆ ವಶನಾಗುತ್ತಾನೆ. ಅಂತೂ ಅಜ್ಞಾನಿಗಳಿಗೆ ಭಯಕ್ಕೂ ಜ್ಞಾನಿಗಳಿಗೆ ಅಭಯಕ್ಕೂ ಕಾರಣಾಗಿರುವದೇ ಪರಬ್ರಹ್ಮವು- ಎಂದಾಯಿತು. ಹೀಗೆ ವಿಚಾರಮಾಡಿ ದಂತೆಲ್ಲ ಸರ್ವವೂ ಬ್ರಹ್ಮವೇ ಆಗಿದ್ದು ತಾನೂ ಅದರಲ್ಲೇ ಒಂದಾಗಿಬಿಟ್ಟಾಗ ಬ್ರಹ್ಮವೇ ಆಗಿ ಸಾಧಕನು ಸಿದ್ಧನಾಗಿ ನೆಲೆಗೊಳ್ಳುತ್ತಾನೆ- ಎಂದಭಿಪ್ರಾಯ.

ಬ್ರಹ್ಮವು ಭಯ-ಅಭಯಗಳಿಗೆ ಕಾರಣವಾಗಿರುತ್ತದೆ ; ಆದ್ದರಿಂದ ಬ್ರಹ್ಮವು ಇದೆ- ಎಂದು ತಿಳಿಸಿದ್ದಾಗಿದೆ. ಇದನ್ನೇ ಮುಂದಿನ ಮಂತ್ರದಲ್ಲಿ ಇನ್ನಷ್ಟು ವಿವರಿಸ ಲಾಗಿದೆ. ಅದನ್ನು ವಿಚಾರಮಾಡೋಣ.

**ಓಂ ॥ ಭೀಷಾಸ್ಮಾದ್ ವಾತಃ ಪವತೇ........ ಪಂಚಮ ಇತಿ ॥ ೮ ॥**

ಈ ಮಂತ್ರಭಾಗದಲ್ಲಿ ಬ್ರಹ್ಮವು ಇದೆ- ಎಂಬುದನ್ನು ದೃಢಪಡಿಸಲು ಸೃಷ್ಟಿಯಲ್ಲಿರುವ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ. ಹೇಗೆಂದರೆ ಈ ಜಗತ್ತಿನಲ್ಲಿ ಗಾಳಿ ಬೀಸುತ್ತಿದೆ. ಸೂರ್ಯನು ಉದಯಿಸುತ್ತಾನೆ. ಬೆಂಕಿಯು

ಉರಿಯುತ್ತಾ ಸುಡುತ್ತದೆ. ಇಂದ್ರನು ಮಳೆಗರೆಯುತ್ತಾನೆ. ಮೃತ್ಯುದೇವತೆಯು ಆಯುಷ್ಯವು ಪೂರೈಸಿದ ಪ್ರಾಣಿಗಳನ್ನು ಪರಲೋಕಕ್ಕೆ ಕೊಂಡೊಯ್ಯುತ್ತಿರುವನು. ದೇವತೆಗಳ ಈ ಕಾರ್ಯಗಳು ಸ್ವಲ್ಪವೂ ವ್ಯತ್ಯಾಸವಾಗದೆ ನಡೆಯುತ್ತಲೇ ಇವೆ. ಈ ಸ್ಥಿತಿಯನ್ನು ಪರಿಶೀಲಿಸಿದರೆ ಮನುಷ್ಯನಿಗಿಂತ ಮಿಗಿಲಾದ ಅಪರಿಮಿತ ಬಲವೀರ್ಯ ಪರಾಕ್ರಮಾದಿಗುಣಗಳುಳ್ಳ ವಾಯು, ಸೂರ್ಯ- ಮುಂತಾದ ದೇವತೆಗಳು ತಮ್ಮ ತಮ್ಮ ಕಾರ್ಯಗಳನ್ನು ಸ್ವಲ್ಪವೂ ವಿಳಂಬಮಾಡದೆ ನಡೆಯಿಸುತ್ತಿರಬೇಕಾದರೆ ಇವರುಗಳನ್ನೆಲ್ಲ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಕಾರ್ಯನಿರ್ವಹಣೆಯನ್ನು ಮಾಡುವಂತೆ ಪ್ರಚೋದಿಸುವ ಒಂದು ಶಕ್ತಿಯು ಇರಬೇಕಲ್ಲವೆ ? ಅದೇ ಬ್ರಹ್ಮವು- ಎಂದು ಅಭಿಪ್ರಾಯ. ಈ ತಳಹದಿಯಿಂದ ವಿಚಾರಮಾಡಿದಾಗ ಇಡಿಯ ಜಗತ್ತಿನ ಸೃಷ್ಟಿ ಸ್ಥಿತಿ-ವ್ಯಾಪಾರಗಳೆಲ್ಲವೂ ಬ್ರಹ್ಮದ ಆಜ್ಞೆಯಿಂದಲೇ ಹಾಗೂ ಬ್ರಹ್ಮದ ಶಕ್ತಿಯಿಂದಲೇ ನಡೆಯುತ್ತಿವೆ- ಎಂದಾಗುತ್ತದೆ. ಜಗತ್ತಾದರೊ, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂದು ಮೂರು ವಿಭಾಗವಾಗಿದೆ. ಒಂದಕ್ಕೊಂದು ನಿಕಟಸಂಬಂಧವನ್ನು ಹೊಂದಿದೆ. ಉದಾಹರಣೆಗೆ ಸೂರ್ಯನು ಉದಯಿಸಿದರೆ ಹೂವುಗಳು ಅರಳುತ್ತವೆ. ಮಳೆ ಬಂದರೆ ಪೈರುಗಳು ಬೆಳೆಯುತ್ತವೆ. ಒಂದು ಕಾಳನ್ನು ಭೂಮಿಯಲ್ಲಿ ಬಿತ್ತಿದರೆ ನೂರು ಕಾಳುಗಳಾಗುವವು. ಒಂದೇ ಒಂದು ತೆಂಗಿನಕಾಯನ್ನು ನೆಟ್ಟರೆ ಮರವಾಗಿ ಸಾವಿರಾರು ಕಾಯಿಗಳು ದೊರಕುವವು. ಹೀಗೆಯೇ ವಿಚಾರಿಸುತ್ತಾ ಹೋದಂತೆಲ್ಲ ಮನುಷ್ಯನ ಶಕ್ತಿ, ಪ್ರಯತ್ನಗಳನ್ನು ಮೀರಿದ ದೈವಶಕ್ತಿಯ ಅನುಭವವಾಗುವದು. ಹೀಗೆ ನಾಮರೂಪಗಳಿಂದ ಬಿಡಿಬಿಡಿಯಾದ, ಅನೇಕಕರ್ತೃಭೋಕ್ತೃಗಳಿಂದ ಕೂಡಿದ- ಮತ್ತು ಆಯಾ ದೇಶಕಾಲನಿಮಿತ್ತಕ್ರಿಯಾದಿಗಳಿಗೆ ತಕ್ಕಂತೆ ಫಲವನ್ನು ಉಂಟುಮಾಡುವ ಅತ್ಯಂತ ಕ್ರಮಬದ್ಧವಾದ ಈ ಪ್ರಪಂಚವು ಸಾಗುತ್ತಿರುವದನ್ನು ನೋಡಿದರೆ ಇದಕ್ಕೆ ಆಶ್ರಯವಾದ ಬ್ರಹ್ಮವು ಇರಲೇಬೇಕೆಂಬುದು ಸಿದ್ಧವಾಗುತ್ತದೆ. ಮತ್ತು ಅದು ಮಾನವರಿಗಿಂತ, ದೇವತೆಗಳಿಗಿಂತ ಹಾಗೂ ಸ್ಥಾವರಗಳಾದ ಪರ್ವತ, ನದಿ, ವನ, ಭೂಮಿ- ಇವುಗಳಿಗಿಂತ ಮತ್ತು ಚೇತನರಾದ ಪಶುಪಕ್ಷಿ ಪ್ರಾಣಿಗಳು, ಮನುಷ್ಯರಿಗಿಂತ ಹಾಗೂ ನಮ್ಮನ್ನು ಮೀರಿದ ಜ್ಞಾನಕ್ರಿಯಾಶಕ್ತಿಗಳುಳ್ಳ ಇಂದ್ರ, ವಾಯು, ಪರ್ಜನ್ಯ, ಅಗ್ನಿ, ಮೃತ್ಯು- ಮುಂತಾದ ದೇವತೆಗಳಿಗಿಂತ ಮಿಗಿಲಾದದ್ದಾಗಿಯೂ ಸ್ವತಂತ್ರವೂ ಸರ್ವಜ್ಞವೂ ಸರ್ವಶಕ್ತಿಸಮನ್ವಿತವೂ ಆಗಿರಲೇಬೇಕು- ಎಂದು ತಿಳಿದುಬರುತ್ತದೆ. ಹೀಗೆ ವಿಚಾರಮಾಡುತ್ತಾ ಹೋದಂತೆಲ್ಲ ನಮ್ಮ ಬುದ್ಧಿಶಕ್ತಿಯೂ ಕ್ರಿಯಾಶಕ್ತಿಯೂ ಕುಂಠಿತವಾಗಬಹುದೇ ಹೊರತು ಬ್ರಹ್ಮದ ಸೃಷ್ಟಿಯನ್ನು ಪರಿಪೂರ್ಣವಾಗಿ ತಿಳಿಯಲಾಗುತ್ತಿಲ್ಲ. ಆದ್ದರಿಂದ ಬ್ರಹ್ಮವು ಇದೆ- ಎಂಬಿದೇ ಸಿದ್ಧಾಂತವಾಗಿದೆ.

ಈಗ ಬ್ರಹ್ಮವು ಪರಮಾನಂದಸ್ವರೂಪವಾಗಿದೆ- ಎಂಬಿದನ್ನು ವಿಚಾರ ಮಾಡಲಾಗುವದು. ಈ ಹಿಂದೆ ''ಆನಂದ ಆತ್ಮಾ'' ಎಂದು ತಿಳಿಸಿದ್ದಾಗಿದೆ. ನಮ್ಮೆಲ್ಲರ ಆತ್ಮನೂ ಆನಂದರೂಪನೇ ಆಗಿದ್ದಲ್ಲಿ ದುಃಖ-ಸಂಕಟಗಳೇಕೆ ಜಗತ್ತಿನಲ್ಲಿ ಕಂಡು ಬರುತ್ತಿವೆ? ಎಂಬ ಸಂದೇಹವುಂಟಾಗುತ್ತದೆ. ಇದಕ್ಕೆ ಶಾಸ್ತ್ರವು ಹೇಳುವ ಪರಿಹಾರವೇನೆಂದರೆ : ಬ್ರಹ್ಮವಲ್ಲದ್ದನ್ನು ಅಥವಾ ಬ್ರಹ್ಮದಂತೆ ತೋರುವದನ್ನೇ ನಾವು ಬ್ರಹ್ಮವೆಂದು ಭ್ರಮಿಸಿರುವ ತಪ್ಪುತಿಳಿವಳಿಕೆಯನ್ನು ದಾಟಿ ನಿಜವಾದ ಬ್ರಹ್ಮಸ್ವರೂಪವನ್ನೇ ಅರಿತಾಗ ಅಂಥವನು ಈ ಆನಂದರೂಪವಾದ ಬ್ರಹ್ಮವನ್ನು ಪಡೆದು ನೆಲೆನಿಲ್ಲುತ್ತಾನೆ. ಆ ಸ್ವರೂಪವು ಅಜರವೂ ಅಮರವೂ ಅಭಯವೂ ಆಗಿದೆ- ಎಂದೇ ಶಾಸ್ತ್ರವು ಸಾರುತ್ತಿದೆ. ಮತ್ತು ತನ್ನ ಸ್ವರೂಪವನ್ನು ಹೀಗೆ ಕಂಡುಕೊಂಡವನು ಎಲ್ಲೆಲ್ಲಿಯೂ ಎಂದೆಂದೂ ತಾನೇ ಈ ಎಲ್ಲವೂ ಎಂಬ ಅಖಂಡಾನಂದದಲ್ಲಿಯೇ ನೆಲೆನಿಲ್ಲುತ್ತಾನೆ- ಎಂದು ತಿಳಿಸುತ್ತಿದೆ. ಈ ಜಿಜ್ಞಾಸೆಯನ್ನು ಈಗ ಮುಂದುವರೆಸೋಣ.

ಉಪನಿಷತ್ತಿನಲ್ಲಿರುವ ಈ ಭಾಗಕ್ಕೆ **''ಆನಂದಮೀಮಾಂಸೆ''** ಎಂದು ಹೆಸರನ್ನು ಕೊಡಲಾಗಿದೆ. ಮೀಮಾಂಸೆ- ಎಂದರೆ ಪೂಜ್ಯವಾದ ವಸ್ತುವನ್ನು ಕುರಿತು ಮಾಡುವ ವಿಚಾರವೆಂದು ಅರ್ಥ. ಬ್ರಹ್ಮವು ಪರಮಪೂಜ್ಯವಸ್ತುವಾಗಿದ್ದು ಅದನ್ನು ವಿಚಾರ ಮಾಡುವದಕ್ಕೆ ಬ್ರಹ್ಮಮೀಮಾಂಸೆ- ಎಂದೂ ಕರೆಯುತ್ತಾರೆ. ಮತ್ತು ಬ್ರಹ್ಮವು ಆನಂದ ರೂಪವಾಗಿದೆಯಾಗಿ ಆನಂದಮೀಮಾಂಸೆ- ಎಂದೂ ಹೆಸರಿಸಲಾಗಿದೆ. ಆದರೆ ಈ ಆನಂದವನ್ನು ಕಂಡುಕೊಳ್ಳಲು ಒಂದು ವಿಚಾರಕ್ರಮವು ಅವಶ್ಯವಾಗಿರುತ್ತದೆ. ಇದನ್ನು **ಪ್ರಕ್ರಿಯೆ-** ಎಂಬ ಪಾರಿಭಾಷಿಕಶಬ್ದದಿಂದ ಕರೆಯುತ್ತಾರೆ. ಪ್ರಕೃತ ಅನ್ನಮಯದಿಂದಾರಂಭಿಸಿ ಆನಂದಮಯಪರ್ಯಂತವಾದ ಪಂಚಕೋಶಗಳನ್ನು ವರ್ಣಿಸಿ ಕಡೆಯಲ್ಲಿ ಪಂಚಕೋಶಾತೀತನಾದ ಆನಂದಬ್ರಹ್ಮವನ್ನೇ ತಿಳಿಸಿದ್ದಾಗಿದೆ. ಈ ಆನಂದಬ್ರಹ್ಮವನ್ನು ವಿಚಾರದಿಂದ ಮುಟ್ಟಲು ಅನುಕೂಲವಾಗುವಂತೆ ಒಂದು ಸೋಪಾನಕ್ರಮದಲ್ಲಿ ಶ್ರುತಿಯು ವಿಚಾರವನ್ನು ಒಯ್ದಿರುತ್ತದೆ. ಅದನ್ನೇ ಈಗ ವಿವರವಾಗಿ ತಿಳಿಯೋಣ.

ಪರಮಾನಂದವೇ ಬ್ರಹ್ಮವಾದ್ದರಿಂದ ಆನಂದವೆಂದರೇನು ? ಎಂಬಿದನ್ನು ಮಾನವನ ಮಟ್ಟದಿಂದ ಶ್ರುತಿಯು ಪ್ರಾರಂಭಿಸಿದೆ. ಹೇಗೆಂದರೆ : ಮನುಷ್ಯಾನಂದವೆಂದರೇನು ? ಎಂಬುದನ್ನು ಹೀಗೆ ವಿವರಿಸಲಾಗಿದೆ. ಮಾನವಜೀವನದಲ್ಲಿ ಸುಖ ಭೋಗಕ್ಕೆ ಮುಖ್ಯವಾದ ವಯಸ್ಸು- ಎಂದರೆ ಯೌವನವು. ತೀರ ಬಾಲಕನಾಗಲಿ, ವೃದ್ಧನಾಗಲಿ ಮಾನುಷಭೋಗಗಳನ್ನು ತೃಪ್ತಿಕರವಾಗಿ ಅನುಭವಿಸಲಾಗುವದಿಲ್ಲ. ಆದ್ದರಿಂದ ಶ್ರುತಿಯೂ ಯುವಕನನ್ನು ಆರಿಸಿಕೊಂಡಿದೆ. ಇನ್ನು ಕೇವಲ ಯುವಕನಾಗಿದ್ದರೆ ಸಾಲದು. ಅಧ್ಯಾಯಕಃ- ಎಂದರೆ ಸಂಪೂರ್ಣವಿದ್ಯಾವಂತನೂ ಆಗಿರ

ಬೇಕು ಮತ್ತು ಆಶಿಷ್ಠಃ - ಎಂದರೆ ಸ್ವರ್ಗಾದಿಪುಣ್ಯಲೋಕಗಳಲ್ಲಿನ ಭೋಗಗಳ ಬಗ್ಗೆ ಆಸೆಯುಳ್ಳವನಾಗಿರಬೇಕು. ಮತ್ತು ಶರೀರ- ಮನಸ್ಸುಗಳಿಂದ ದೃಢವಾದ ಶಕ್ತಿ ಸ್ಥೈರ್ಯಗಳುಳ್ಳವನಾಗಿರಬೇಕು. ಇನ್ನು ಬಲಿಷ್ಠನೂ ಆಗಿರಬೇಕು. ಎಂದರೆ ಶರೀರ ಶಕ್ತಿಯು ಎಲ್ಲಾ ರೀತಿಯಿಂದಲೂ ಅತ್ಯುತ್ತಮವಾಗಿರಬೇಕು ಇಂಥ ಒಬ್ಬ ವ್ಯಕ್ತಿಯು. ಇದ್ದಾನೆಂದು ಇಟ್ಟುಕೊಳ್ಳೋಣ. ಏಕೆಂದರೆ ಈ ಎಲ್ಲಾ ಯೋಗ್ಯತೆಗಳೂ ಒಬ್ಬ ನಲ್ಲಿಯೇ ದೊರಕುವದು ಕಷ್ಟವೇ ಸರಿ. ಈಗ ಇವೆಲ್ಲದರ ಜೊತೆಗೆ ಇಂಥವನಿಗೆ ಈ ಇಡಿಯ ಭೂಮಂಡಲವೇ ಸಮಸ್ತ ಐಶ್ವರ್ಯಸಮೇತವಾಗಿ ಅವನಿಗೆ ಅಧೀನವಾಗಿರ ಬೇಕು. ಹೀಗೆ ಕಲ್ಪಿಸಿಕೊಂಡಾಗ ಇಂಥ ಮಹನೀಯನ ಸುಖಸೌಭಾಗ್ಯಗಳನ್ನು ಪೂರ್ಣವಾಗಿ ಲೆಕ್ಕಕ್ಕೆ ತೆಗೆದುಕೊಂಡಾಗ ಅದನ್ನು ಒಂದು **ಮನುಷ್ಯಾನಂದ**ವೆಂದು ಕರೆಯಲಾಗುವದು- ಎಂದು ಶ್ರುತಿಯು ತಿಳಿಸುತ್ತದೆ.

ವಾಚಕರೆ, ಶ್ರುತಿಯು ವಿವರಿಸಿರುವ ಈ ಮನುಷ್ಯಾನಂದವೇ ಈ ಕಲಿಗಾಲದಲ್ಲಿ ಇಡಿಯ ಜಗತ್ತಿನಲ್ಲಿರುವ ಮಾನವರಲ್ಲಿ ಒಬ್ಬನಿಗೂ ಇರುವದಿಲ್ಲ. ಹಿಂದೆ ಕೃತಾದಿಯುಗಗಳಲ್ಲಿ ಇದ್ದಿತೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಯಾವ ದೇಶದ ರಾಜನಿಗಾಗಲಿ ಪ್ರಧಾನಿಗಾಗಲಿ ಮನುಷ್ಯಾನಂದವೇ ದಕ್ಕಿರುವದಿಲ್ಲ. ಇನ್ನು ಬ್ರಹ್ಮಾನಂದದ ಪ್ರಾಪ್ತಿಯಾದರೂ ಹೇಗಾದೀತು ? ಆದ್ದರಿಂದ ಬ್ರಹ್ಮಾನಂದದ ಮಜಲನ್ನು ಗೊತ್ತುಮಾಡಲು ಮನುಷ್ಯಾನಂದದ ಒಂದು ಮಜಲನ್ನು ಶ್ರುತಿಯೇ ಕಲ್ಪಿಸಿ ಹೇಳಿರುತ್ತದೆ. ಆ ಸ್ಥಿತಿಯಿಂದ ಆರಂಭಿಸಿ ಬ್ರಹ್ಮಾನಂದವನ್ನು ಗುರುತಿಸೋಣ. ಈಗಾಗಲೇ ತಿಳಿಸಿರುವ ಮನುಷ್ಯಾನಂದವನ್ನು ನೂರುಪಟ್ಟು ಹೆಚ್ಚಿಸಿದರೆ ಅದನ್ನು ಮನುಷ್ಯಗಂಧರ್ವರ ಆನಂದವೆನ್ನುತ್ತಾರೆ. ಈ ಆನಂದವು ಶ್ರೋತ್ರಿಯನೂ ಕಾಮಗಳಿಗೆ ವಶನಾಗದವನೂ ಆದವನಿಗೆ ದೊರಕುತ್ತದೆ- ಎಂದು ಶ್ರುತಿಯು ತಿಳಿಸುತ್ತಿದೆ. ಇದರ ಉದ್ದೇಶವೇನೆಂದರೆ : **ಮನುಷ್ಯನು ಬಯಕೆಗಳನ್ನು ಕಡಿಮೆಮಾಡಿಕೊಂಡಂತೆಲ್ಲ ಆನಂದದ ಪ್ರಮಾಣ (ಅಳತೆ) ಯನ್ನು ಹಿಗ್ಗಿಸಿಕೊಳ್ಳುತ್ತಾ ಹೋಗುತ್ತಾನೆ.** ಇದು ನಮ್ಮ ಋಷಿಗಳು ಕಂಡುಕೊಂಡಿರುವ ತತ್ತ್ವವಾಗಿರುತ್ತದೆ. ಆದರೆ ಈಗ ವೈಜ್ಞಾನಿಕಸುಖಸಾಧನಗಳು ಬಹಳವಾಗಿ ಬೆಳೆದಿದ್ದು ಅವುಗಳ ಉಪಯೋಗವು ಹೆಚ್ಚಿದಂತೆಲ್ಲ ಮಾನವನು ಅಸುಖಿಯೂ ದುರ್ಬಲನೂ ಚಿಂತಾ ಕ್ರಾಂತನೂ ಆಗುತ್ತಿದ್ದಾನೆ. ನಾಗರಿಕತೆಯ ಹೆಸರಿನಲ್ಲಿ ತನ್ನ ಬಲವೀರ್ಯಆರೋಗ್ಯಾ ದಿಗಳನ್ನು ಕೆಡಿಸಿಕೊಂಡು ದುಃಖಿಯೂ ಆಗಿದ್ದಾನೆ. ಆದರೆ ಮನುಷ್ಯಾನಂದವನ್ನು ಗುರಿಯಾಗಿ ಇಟ್ಟುಕೊಂಡು ವೇದಾಂತೋಪದೇಶಗಳ ಪ್ರಕಾರ ವಿಚಾರಮಾಡಿದರೆ ಮನುಷ್ಯನು ಮೊದಲು ಇಂದ್ರಿಯಭೋಗಗಳಿಂದ ನಿವೃತ್ತನಾಗಬೇಕು. ಆಗ

ಮನಸ್ಸನ್ನು ಆನಂದತತ್ತ್ವಚಿಂತನೆಗೆ ತೊಡಗಿಸಲು ಸಾಧ್ಯವಾಗುತ್ತದೆ. ಸಾಧನೆಯು ವಿಚಾರಕ್ರಮದಿಂದ ಮುಂದುವರೆದರೂ ಸಾಕು. ಕಾಷ್ಠತಪಸ್ಸಿನ ಆವಶ್ಯಕತೆ ಇಲ್ಲ. ಅಧ್ಯಾತ್ಮಮಾರ್ಗವು ಅಂತಃಕರಣಪ್ರಧಾನವಾಗಿರುವದರಿಂದ ಅದನ್ನು ತತ್ತ್ವವಿಚಾರದ ಕಡೆಗೆ ತಿರುಗಿಸುವದೊಂದೇ ಸಾಧಕನ ಕರ್ತವ್ಯವಾಗಿರುತ್ತದೆ. ಅನಂತರ ಬಾಹ್ಯಕಾಮಗಳ ಸೆಳೆತವು ಕಡಿಮೆಯಾದಾಗ ಅಂತಃಕರಣಶುದ್ಧಿಯು ಆದಂತೆಲ್ಲ ತತ್ತ್ವವಿಚಾರವು ರುಚಿಸುತ್ತಾ ಬರುವದು. ಮೊದಲು ಬೌದ್ಧಿಕವಾಗಿ ಆರಂಭವಾದ ಸಾಧನವು ಮುಂದೆ ಹಾರ್ದಿಕವಾಗಿ ಪಕ್ವವಾದಂತೆಲ್ಲ ಶಾಂತಿಯೂ ತೃಪ್ತಿಯೂ ಒದಗುವವು. ಆಗ ಸಾಧಕನು ಮುಂದುವರೆಯಲು ತಕ್ಕ ಸಂನಿವೇಶವು ಒದಗುತ್ತದೆ.

ಈಗ ಪ್ರಕೃತವಿಚಾರಕ್ಕೆ ಬರೋಣ. ಮನುಷ್ಯಾನಂದದ ಮಜಲನ್ನು ದಾಟಿದಾಗ ಮನುಷ್ಯಗಂಧರ್ವಾನಂದದ ಅನುಭವವು ಉಂಟಾಗುವದು. ಇಲ್ಲಿ ಆನಂದವು ಮನುಷ್ಯಾನಂದದ ನೂರುಪಟ್ಟು ಹೆಚ್ಚಾಗಿರುವದು. ಮತ್ತು ಈ ಆನಂದವು ದೊರಕುವದಕ್ಕೆ ಮನುಷ್ಯಾನಂದದಲ್ಲಿ ವೈರಾಗ್ಯವುಂಟಾಗಿರಬೇಕು. ಮುಖ್ಯವಾಗಿ ಸಾಧಕನು ಕಾಮಗಳನ್ನು ತ್ಯಜಿಸಿದವನಾಗಿಯೂ ಶಾಸ್ತ್ರಜ್ಞನಾಗಿಯೂ ಅನುಷ್ಠಾನತತ್ಪರನೂ ಆಗಿರಬೇಕು. ಅನುಷ್ಠಾನಕರ್ಮಗಳೆಂದರೆ ಶಾಸ್ತ್ರೀಯಕರ್ಮಗಳು. ಇವುಗಳ ವಿಚಾರದಲ್ಲಿ ರುಚಿ ಹುಟ್ಟಿದಾಗ ಸಾಧಕನು ಮಾಡಲು ಉಪಕ್ರಮಿಸುತ್ತಾನೆ. ಮಾಡಿದ ಅನಂತರ ಮಾನಸಿಕವಾಗಿ ತೃಪ್ತಿಯನ್ನೂ ಅನುಭವಿಸುತ್ತಾನೆ. ಇದೇ ಆನಂದದ ಸೋಪಾನವಾಗಿರುತ್ತದೆ. ಹೀಗೆ ಏರುತ್ತಾ ಹೋದಂತೆಲ್ಲ ಆನಂದದ ಆವಿರ್ಭಾವವು ಸ್ಫುಟವಾಗುತ್ತದೆ. ಸ್ಫುಟವಾದಂತೆಲ್ಲ ಬ್ರಹ್ಮಾನಂದವನ್ನು ಸಮೀಪಿಸುತ್ತಾ ಹೋಗುತ್ತದೆ. ಇದನ್ನೇ **ಆನಂದಮೀಮಾಂಸೆ-** ಎಂದು ಉಪನಿಷತ್ತಿನಲ್ಲಿ ತಿಳಿಸಿದೆ.

ಈಗ ಬ್ರಹ್ಮಾನಂದದ ಮಜಲನ್ನು ಮುಟ್ಟುವದಕ್ಕೆ ಮುಂದುವರೆಯೋಣ. ಶ್ರುತಿಯು ಹೀಗೆನ್ನುತ್ತಿದೆ. ಮನುಷ್ಯಗಂಧರ್ವಾನಂದವು ನೂರುಪಟ್ಟು ಹೆಚ್ಚಿದರೆ ಚಿರಲೋಕವಾಸಿಗಳಾದ ಪಿತೃದೇವತೆಗಳ ಆನಂದವೆನಿಸುತ್ತದೆ. ಇದು ಮತ್ತೆ ನೂರುಪಟ್ಟು ಹೆಚ್ಚಿದರೆ ಆಜಾನದೇವತೆಗಳ ಆನಂದವೆನಿಸುತ್ತದೆ. ಹೀಗೆಯೇ ಆಜಾನದೇವತೆಗಳ ಆನಂದವು ನೂರುಪಟ್ಟು ಹೆಚ್ಚಿದರೆ ಕರ್ಮದೇವತೆಗಳ ಆನಂದವೆನಿಸುತ್ತದೆ. ಇದು ಕೂಡ ನೂರುಪಟ್ಟು ಹೆಚ್ಚಿದರೆ ದೇವತೆಗಳ ಆನಂದವೆನಿಸುತ್ತದೆ. ಇದು ನೂರುಪಟ್ಟಾದರೆ ಇಂದ್ರನ ಆನಂದವೆನಿಸುವದು. ಇದು ನೂರುಪಟ್ಟಾದರೆ ಬೃಹಸ್ಪತಿಯ ಆನಂದವೆನಿಸುವದು. ಇದು ನೂರುಪಟ್ಟಾದರೆ ಪ್ರಜಾಪತಿಯ ಆನಂದವೆನಿಸುವದು. ಇದು ನೂರುಪಟ್ಟಾದರೆ ಬ್ರಹ್ಮದ ಆನಂದವೆನಿಸುವದು. ಇಲ್ಲಿಂದ ಮುಂದಕ್ಕೆ ಗಣಿತವು ಕೆಲಸಮಾಡಲಾರದು. ಏಕೆಂದರೆ ಬ್ರಹ್ಮಾನಂದವು ಗಣಿತದ ಮಜಲನ್ನು ಮೀರಿರುತ್ತದೆ- ಎಂದಭಿಪ್ರಾಯ.

ಈಗ ಈ ಆನಂದಮೀಮಾಂಸೆಯ ರಹಸ್ಯವನ್ನು ವಿಚಾರಮಾಡೋಣ. ಶ್ರುತಿಯು ಬ್ರಹ್ಮಾನಂದವೆಂದರೇನು ? ಎಂಬುದನ್ನು ತಿಳಿಸಲು ಈ ರೀತಿಯಾದ ವಿವರಣೆಯನ್ನು ನೀಡಿದೆಯಾದರೂ ಅದು ಅಖಂಡವಾದುದು. ಅದನ್ನು ಸಾಧಕನು ತಾನೇ ಪಡೆದುಕೊಂಡು ಅನುಭವಿಸಬೇಕೇ ಹೊರತು ಮತ್ತೆ ಯಾರಿಂದಲೂ ಪಡೆದುಕೊಳ್ಳಲಾಗುವದಿಲ್ಲ. ಏಕೆಂದರೆ ಅಲ್ಲಿ ಆನಂದ ಆನಂದಿಸುವವನು- ಎಂಬ ವಿಭಾಗವೇ ಇರುವದಿಲ್ಲ. ಹೀಗೆ ದ್ವೈತಬುದ್ಧಿಯನ್ನು ದಾಟಿರುವ ಬ್ರಹ್ಮಾನಂದವು ಮಾತಿಗಾಗಲಿ ಮನಸ್ಸಿಗಾಗಲಿ ಎಟಕುವಂಥದ್ದಲ್ಲ. ಆದರೂ ಏನಾದರೊಂದು ಕಲ್ಪಿತಕ್ರಮ (ಪ್ರಕ್ರಿಯೆ)ವನ್ನು ಬಳಸಿಯೇ ಉಪದೇಶಿಸಬೇಕಾಗಿರುವದರಿಂದ ಈ ಶತಗುಣವೃದ್ಧಿಕ್ರಮವನ್ನು ಕಲ್ಪಿಸಿ ಉಪಯೋಗಿಸಲಾಗಿದೆ. ಹೀಗೆ ಹೇಳಿದ್ದರಿಂದ ಬ್ರಹ್ಮಾನಂದದ ವಿಷಯಕ್ಕೆ ನಮ್ಮ ಬುದ್ಧಿಯನ್ನು ಕೊಂಡೊಯ್ದಂತಾಗುತ್ತದೆ. ಮುಂದೆ ಸಾಧಕನು ಆ ಮಜಲಿನಲ್ಲಿ ನೆಲೆನಿಂತಾಗ ಏನನ್ನೂ ಹೇಳಲಾಗದೆ ತಾನೇ ತಾನಾಗಿ ಬ್ರಹ್ಮನಂದಸ್ವರೂಪನಾಗಿಬಿಡುತ್ತಾನೆ. ಹೀಗೆ ಆನಂದಮೀಮಾಂಸೆಯು ಬ್ರಹ್ಮ ಸ್ವರೂಪದಲ್ಲಿ ಅಡಕವಾಗಿಬಿಡುತ್ತದೆ.

ಈಗ ಪರಮಾನಂದದ ಅದ್ವಿತೀಯತ್ವವನ್ನು ವಿಚಾರಮಾಡೋಣ. ಬ್ರಹ್ಮವೇ ಆನಂದವೆನಿಸಿರುವದರಿಂದ ಆ ಸ್ವರೂಪದಲ್ಲಿ ಭೇದವಿರುವದಿಲ್ಲ. ಭೇದವು ಹೇಗೆಂದರೆ ಆನಂದ-ಆನಂದಪಡುವವನು- ಎಂಬ ರೀತಿಯಲ್ಲಿ ದ್ವೈತವಾಗಿರಬೇಕು. ಲೌಕಿಕಾನಂದದಲ್ಲಿ ಇದು ಹೊಂದುತ್ತದೆ. ಹೇಗೆಂದರೆ ಒಂದು ಉದಾಹರಣೆಯಿಂದ ತಿಳಿಯೋಣ. ಒಬ್ಬನಿಗೆ ಪಾಯಸವನ್ನು ಕಂಡರೆ ಬಹಳ ಪ್ರೀತಿ ಎಂದುಕೊಳ್ಳೋಣ. ಅಂಥವನು ರುಚಿಯಾದ ಪಾಯಸವನ್ನು ಕುಡಿದಾಗ ಆನಂದವಾಯಿತು, ತೃಪ್ತಿ ಯಾಯಿತು- ಎನ್ನುತ್ತಾನಷ್ಟೆ; ಇಲ್ಲಿ ಆನಂದಪಟ್ಟವನು, ಆನಂದವೆಂಬ ಫಲ- ಎರಡೂ ಬೇರೆಯಾಗಿರುತ್ತವೆ. ಆದ್ದರಿಂದ ಇದು ಬ್ರಹ್ಮಾನಂದಕ್ಕೆ ಸಮನಲ್ಲ. ಆದರೆ ಬ್ರಹ್ಮಾನಂದವು ಎಂಥದ್ದೆಂದರೆ ಅದರಲ್ಲಿ ಆನಂದ- ಆನಂದಿಸುವವನು- ಎಂಬ ವಿಭಾಗವಿರುವದಿಲ್ಲ. ಉದಾಹರಣೆಗೆ ಸುಷುಪ್ತಿಯನ್ನು ನೋಡಿರಿ ಅಲ್ಲಿ ಏನಾದರೂ ವ್ಯವಹಾರವಿದೆಯೆ ? ದ್ವೈತವಿದೆಯೆ ? ಏನೂ ಇಲ್ಲ. ಆದರೂ ಎದ್ದ ಮೇಲೆ 'ನಾನು ಸುಖವಾಗಿ ನಿದ್ರೆ ಮಾಡಿದೆನು' ಎಂದು ಜನರು ಹೇಳುತ್ತಾರೆ. ಈ ಶಬ್ದಪ್ರಯೋಗವೂ ಎಚ್ಚರದಲ್ಲೇ ಆಗಿದ್ದು ಇದು ಎಚ್ಚರಕ್ಕೆ ಮಾತ್ರ ಸೇರಿರುತ್ತದೆ. ಆದ್ದರಿಂದ ಸುಷುಪ್ತಿಯ ಅನುಭವವು ಮಾತ್ರ ನಮಗೆ ತಿಳಿದಿದೆಯೇ ಹೊರತು ಎಚ್ಚರದಂತೆ ಅಲ್ಲಿ ಶಬ್ದಪ್ರತ್ಯಯಗಳ ಹಾಗೂ ಗ್ರಾಹ್ಯಗ್ರಾಹಕಗಳ ಅನುಭವವಿರುವದಿಲ್ಲ. ಇಂಥ ಅದ್ವೈತಸ್ಥಿತಿಯು ಮಾತು-ಮನಸ್ಸುಗಳ ಮಜಲನ್ನು ಮೀರಿರುತ್ತದೆ. **ಇದೇ ಸ್ಥಿತಿಯು**

**ಯಾವನಿಗೆ ಎಚ್ಚರದಲ್ಲಿ ಅನುಭವಕ್ಕೆ ಬರುತ್ತದೆಯೋ ಅವನೇ ಜ್ಞಾನಿಯು.** ಹೀಗೆ ಜ್ಞಾನಿಯ ಅನುಭವವು ಶಬ್ದಪ್ರಪಂಚ ಹಾಗೂ ಮನಃಪ್ರಪಂಚವನ್ನು ಮೀರಿರುತ್ತದೆ. ಇದನ್ನೇ ಶ್ರುತಿಯು ''ಯತೋ ವಾಚೋ.....'' ಎಂದು ತಿಳಿಸುತ್ತಿದೆ.

ಈಗ ಬ್ರಹ್ಮಜ್ಞಾನಿಯ ಸ್ವರೂಪವನ್ನು ತಿಳಿಸಲು ಶ್ರುತಿಯು ಹೊರಟಿರುತ್ತದೆ. ಯಾವನು ಹೀಗೆ ''ತನ್ನ ಆತ್ಮನೇ ಬ್ರಹ್ಮವು ; ಅದೇ ಆನಂದವು'' ಎಂದು ಅರಿತು ಆ ಸ್ವಭಾವದಲ್ಲಿಯೇ ನೆಲೆನಿಂತಿರುವನೋ ಅವನು ಈ ಹಿಂದೆ ವರ್ಣಿಸಿದ ಅನ್ನಮಯಾದ್ಯಾತ್ಮರುಗಳನ್ನು ದಾಟುತ್ತಾನೆ- ಎಂದು ಹೇಳುತ್ತಿದೆ. ಇಲ್ಲಿ ದಾಟುವದು (ಸಂಕ್ರಮಣ) ಎಂಬ ಶಬ್ದಕ್ಕೆ ಒಂದಾಗಿಬಿಡುವದು- ಎಂದರ್ಥ. ಹೇಗೆ ಒಂದು ನೂರು- ಎಂಬ ಸಂಖ್ಯೆಯಲ್ಲಿ ತೊಂಭತ್ತೊಂಭತ್ತರವರೆಗಿನ ಸಂಖ್ಯೆಗಳೆಲ್ಲವೂ ಅಡಕವಾಗಿವೆಯೋ ಹಾಗೆ - ಎಂದು ಅರಿಯಬೇಕು. ಇದರ ವಿವರ ; ಅನ್ನಮಯಾತ್ಮನು ಪ್ರಾಣಮಯಾತ್ಮದಲ್ಲಿ ಅಡಕವಾಗಿರುತ್ತಾನೆ- ಎಂದರೆ ಪ್ರಾಣನನ್ನು ಸಾಧಕನು ಆತ್ಮನಾಗಿ ಅರಿತಾಗ ಅನ್ನಮಯನು ಬೇರೆಯಾಗಿ ಉಳಿದಿರುವದಿಲ್ಲ- ಎಂದರ್ಥ. ಕೆಲವು ವೇಳೆ ರೋಗಿಯೂ ಅನ್ನವಿಲ್ಲವಾದರೂ ಬದುಕಿದ್ದು ಉಸಿರಾಡುತ್ತಿರಬಹುದು. ಆಗ ಉಸಿರೇ ಶರೀರದ ತಿರುಳಾಗಿರುವದು. ದೇಹವು ಕೃಶವಾದರೂ ಜೀವನು ಬದುಕಿರಬಹುದು. ಆಗ ಪ್ರಾಣಮಯನು ದೊಡ್ಡವನೆನಿಸುವನು. ಇದೇ ರೀತಿಯಾಗಿ ಆನಂದಮಯನವರೆಗೂ ಉತ್ಕರ್ಷವು ಕಂಡುಬರುತ್ತದೆ. ಹೇಗೆಂದರೆ ಅನ್ನ-ಪ್ರಾಣ-ಮಯಾತ್ಮರುಗಳಿಗಿಂತಲೂ ಮನೋಮಯನು ದೊಡ್ಡವನು. ಪ್ರಾಣಿಗಳು ಆಹಾರ- ನಿದ್ರೆ- ಉಸಿರಾಡುವಿಕೆಗಳಿಂದ ಜೀವಿಸುತ್ತಿದ್ದರೂ ನಾಳೆಗೇನು ? ಎಂಬ ಯೋಚನೆ ಅವುಗಳಿಗಿಲ್ಲ. ಏಕೆಂದರೆ ಅವುಗಳಿಗೆ ಮನೋವ್ಯಾಪಾರವಿಲ್ಲ. ಮನುಷ್ಯನಿಗೆ ದೇಹ- ಪ್ರಾಣಗಳಿಗಿಂತ ಮಿಗಿಲಾದ ಮನಸ್ಸಿದೆ. ಅದರ ಮೂಲಕ ಅವನು ಉಳಿದ ಪ್ರಾಣಿಗಳಿಗಿಂತ ಉತ್ತಮನೆನಿಸಿದ್ದಾನೆ. ಹೇಗೆಂದರೆ ಸರ್ಕಸ್ ಆಟದಲ್ಲಿ ಮನುಷ್ಯನು ತನ್ನ ಬುದ್ಧಿಶಕ್ತಿಯಿಂದ ಹುಲಿಯನ್ನು ಕೂಡ ಹಿಡಿದು ಆಡಿಸಬಲ್ಲವನಾಗಿರುತ್ತಾನೆ. ಇದು ಅವನ ಬುದ್ಧಿಶಕ್ತಿಯ ಪ್ರಭಾವವಾಗಿದೆ. ಆದ್ದರಿಂದ ಮನೋಮಯನು ಪ್ರಾಣಮಯನಿಗಿಂತ ಮಿಗಿಲಾದವನಾಗಿದ್ದು ಅವನನ್ನು ತನ್ನಲ್ಲಿ ಅಡಕಮಾಡಿಕೊಂಡಿದ್ದಾನೆ. ಇದೇ ಸಂಕ್ರಮಣಕ್ರಮವು. ಇನ್ನು ಮನಸ್ಸಿಗಿಂತ ವಿಜ್ಞಾನವು ದೊಡ್ಡದು. ವಿಜ್ಞಾನವೆಂದರೆ ನಿಶ್ಚಯಾತ್ಮಕ ಬುದ್ಧಿಯು. ಇದಿಲ್ಲದೆ ಯಾವ ಕಾರ್ಯವೂ ಆಗುವದಿಲ್ಲ. ಆದ್ದರಿಂದ ವಿಜ್ಞಾನಾತ್ಮನು ಮನೋಮಯನಿಗಿಂತ ಮಿಗಿಲಾದವನೆಂದಾಯಿತು. ಆಗ ಮನೋಮಯನು ವಿಜ್ಞಾನಮಯನಲ್ಲಿ ಅಡಕವಾಗುತ್ತಾನೆ. ಕಡೆಯದಾಗಿ ಈ ವಿಜ್ಞಾನಮಯನು ಆನಂದಮಯನಲ್ಲಿ ಅಡಕವಾಗು

ತ್ತಾನೆ. ವಿಜ್ಞಾನವು ಕರ್ಮ, ಆನಂದವು ಫಲ. ಆದ್ದರಿಂದ ಫಲಕ್ಕಾಗಿಯೇ ಎಲ್ಲರೂ ಕರ್ಮವನ್ನು ಮಾಡುತ್ತಾರಾದ್ದರಿಂದ ವಿಜ್ಞಾನಮಯಾತ್ಮನು ಆನಂದಮಯಾತ್ಮನಲ್ಲಿ ಒಂದಾಗಿಬಿಡುತ್ತಾನೆ.

ಈಗ ಶ್ರುತಿಯು ಆನಂದಮಯಾತ್ಮನೂ ಸಂಸಾರಿಯೇ ಆದ್ದರಿಂದ ಅವನು ಸಹ ಕಡೆಯಲ್ಲಿ ಆನಂದ (ಬ್ರಹ್ಮ)ದಲ್ಲಿ ಒಂದಾಗುತ್ತಾನೆ ಎಂದು ತಿಳಿಸುತ್ತದೆ. ಈ ಆನಂದವೇ ಕಟ್ಟಕಡೆಯ ಮಜಲು. ಇದೇ ಬ್ರಹ್ಮಪ್ರಾಪ್ತಿಯೆನಿಸುತ್ತದೆ. ಆಗ ಯಾವ ವ್ಯವಹಾರವೂ ಇರುವದಿಲ್ಲ. ಏಕಮೇವಾದ್ವಿತೀಯ ಆನಂದಬ್ರಹ್ಮವೊಂದೇ ಉಳಿದು ಕೊಳ್ಳುತ್ತದೆ. ಅದೇ ಸರ್ವರ ಆತ್ಮನು, ಆ ಆತ್ಮನನ್ನು ಅರಿತಾಗ ಸಂಸಾರಭಯವಿರುವ ದಿಲ್ಲ. ಅಂಥ ಆತ್ಮಜ್ಞಾನವೇ ಮುಕ್ತಾಯ- ಎಂದು ವರ್ಣಿಸಲಾಗಿದೆ. ಆ ಸ್ಥಿತಿಯಲ್ಲಿ ಜ್ಞಾನನಿಷ್ಠನಾದವನಿಗೆ ಕರ್ತೃತ್ವಾದಿಗಳ ಭ್ರಾಂತಿಯು ನಿವೃತ್ತಿಯಾಗಿರುವದರಿಂದ ಯಾವ ಸಂಸಾರತಾಪವೂ ಇರುವದಿಲ್ಲ. ಹೀಗೆ ಅನ್ನಮಯಾದ್ಯಾತ್ಮರುಗಳನ್ನು ಕಟ್ಟಕಡೆಗೆ ಆನಂದರೂಪವಾದ ಪರಬ್ರಹ್ಮದಲ್ಲಿ ಅಡಕಮಾಡಿ ಕಂಡುಕೊಂಡಾಗ ಮಾನವನು ಅಭಯವನ್ನು ಹೊಂದುತ್ತಾನೆ- ಎಂಬಿದು ತೀರ್ಮಾನವಾಗಿದೆ.

ಈಗ ಸಂಕ್ರಮಣ- ಎಂದರೇನು ? ಎಂಬಿದನ್ನು ನೋಡೋಣ. ಇದು ಸಹ ಜ್ಞಾನವಾಚಕವೇ ಆಗಿದೆ. ಹೇಗೆಂದರೆ : ಅನ್ನಮಯಾತ್ಮನಿಂದಾರಂಭಿಸಿ ಆನಂದ ಮಯನವರೆಗಿನ ಸಂಕ್ರಮಣದಲ್ಲಿ ಉತ್ತರೋತ್ತರವಾಗಿ ಸೂಕ್ಷ್ಮದಲ್ಲಿ ಸ್ಥೂಲವು ಒಂದಾಗಿರುವದನ್ನು ತಿಳಿಸಿದೆ. ಉದಾಹರಣೆಗೆ ಮಾವಿನಹಣ್ಣು ಸಿಹಿಯಾಗಿದೆ - ಎನ್ನುವಾಗ ವಿವೇಚನೆಮಾಡಿದರೆ ಹಣ್ಣು ಅದರ ಬಣ್ಣ, ಆಕಾರ, ರಸ,- ಎಲ್ಲವೂ 'ಸಿಹಿ' ಯಲ್ಲಿಯೇ ಒಂದಾಗಿದೆಯೆಲ್ಲವೆ ? ಸಿಹಿಯನ್ನು ಬಿಟ್ಟರೆ ಮಾವಿನ ಹಣ್ಣೆಂಬುದು ಸ್ವತಂತ್ರವಾಗಿ ಎಲ್ಲಿದೆ? ಆದರೂ ವ್ಯವಹಾರಕಾಲಕ್ಕೆ ಹಣ್ಣು ಸಿಹಿ- ಎಂಬ ನಾಮಭೇದಗಳಿರಬಹುದು. ಇದ್ದರೂ ಸಿಹಿಗಿಂತ ಬೇರೆಯಾದ ಸ್ವತಂತ್ರವಾದ ವಸ್ತುವು ಯಾವದೂ ಇರುವದಿಲ್ಲ. ಹಾಗೆಯೇ ಅನ್ನಮಯಾದ್ಯಾತ್ಮರುಗಳೂ ವಿಚಾರಮಾಡಿದಂತೆಲ್ಲ ಒಂದರಲ್ಲಿ ಮತ್ತೊಂದು ಅಡಕವಾಗಿದ್ದು ಕೊನೆಗೆ ಆನಂದ ತತ್ತ್ವದಲ್ಲಿ ನೆಲೆನಿಲ್ಲುವದು. ಈ ಸಂದರ್ಭದಲ್ಲಿ ಸಂಕ್ರಮಣ ಎಂಬ ಶಬ್ದವನ್ನು ಬಳಸಿದೆಯಾಗಿ ಆ ಸಂಕ್ರಮಣವೂ ಕಡೆಯಲ್ಲಿ ಆನಂದದಲ್ಲಿಯೇ ಅಡಕವಾಗಿ ಬಿಡುತ್ತದೆ. ಆಗ ಅದು ಬ್ರಹ್ಮವೇ ಎಂಬಿದು ನಿಶ್ಚಯವಾಗುತ್ತದೆ.

ಈಗ ಆನಂದವಲ್ಲಿಯನ್ನು ಉಪಸಂಹಾರಮಾಡೋಣ. ಕಟ್ಟಕಡೆಗೆ ಆನಂದವೇ ತತ್ತ್ವವಾಗಿ ಉಳಿಯುವದರಿಂದ ಅದೇ ಬ್ರಹ್ಮವೆಂದು ಅರಿತವನು

ಬ್ರಹ್ಮಜ್ಞಾನಿಯೆನಿಸುವನು. ಆಗ ಅವನು ಶೋಕಮೋಹಭಯಾದಿ ಸಂಸಾರಧರ್ಮಗಳನ್ನೆಲ್ಲ ಮೀರಿರುವನು. ಹಾಗೆಯೇ ಅವನಿಗೆ ಕರ್ತೃತ್ವಾದಿಗಳೆಲ್ಲವೂ ಜ್ಞಾನದಿಂದ ಬಾಧಿತವಾಗಿರುವದರಿಂದ ಪಾಪಪುಣ್ಯಗಳ ಚಿಂತೆಯಿರುವದಿಲ್ಲ. ಅವು ಈ ಜ್ಞಾನಿಯನ್ನು ಎಂದಿಗೂ ಮುಟ್ಟಲಾರವು. ಹೀಗೆ ಬ್ರಹ್ಮಜ್ಞಾನದ ಫಲವಾಗಿ ದೊರಕುವ ನಿತ್ಯಾನಂದಸ್ವರೂಪವೇ **ಜೀವನ್ಮುಕ್ತಿಯು**. ಇದು ಕಡೆಯ ಮಜಲು. ಇದೇ ಮುಖ್ಯ ಮುಕ್ತಿಯು. ಇನ್ನು ಪ್ರಾರಬ್ಧವಶದಿಂದ ಕೆಲವು ಕಾಲದವರೆಗೆ ಜ್ಞಾನಿಗೆ ದೇಹಾದಿಗಳಿರಬಹುದು. ಆದರೆ ಅವುಗಳಲ್ಲಿ ನಾನು ಎಂಬ ಅಭಿಮಾನವು ಅವನಿಗೆ ಇರುವದಿಲ್ಲ. ಕಡೆಗೆ ಪಾರಬ್ಧಕರ್ಮವು ಪೂರೈಸಿದಾಗ ದೇಹವು ಬಿದ್ದುಹೋಗುತ್ತದೆ. ಇದನ್ನು **ವಿದೇಹಮುಕ್ತಿ**ಯೆಂದು ಕರೆಯುತ್ತಾರೆ. ಹೀಗಾಗಿ ಜ್ಞಾನಿಯ ಶರೀರವು ಹಾವು ಪೊರೆ ಬಿಟ್ಟಂತೆ ಬಿದ್ದುಹೋದಾಗ ಅಂಥವನನ್ನು ವಿದೇಹಮುಕ್ತನೆಂದು ಕರೆಯಲಾಗುತ್ತದೆ. ಜ್ಞಾನಿಯ ದೃಷ್ಟಿಯಿಂದ ಅವನು ಯಾವಾಗಲೂ ನಿತ್ಯಶುದ್ಧಬುದ್ಧಮುಕ್ತಬ್ರಹ್ಮವೇ ಆಗಿರುತ್ತಾನೆ- ಎಂಬಿದು ಉಪನಿಷತ್ತಿನ ಸಂದೇಶವಾಗಿದೆ.

----------

# ಭೃಗುವಲ್ಲಿ

ಈವರೆಗೆ ತೈತ್ತಿರೀಯೋಪನಿಷತ್ತಿನ ಶೀಕ್ಷಾವಲ್ಲಿ, ಬ್ರಹ್ಮವಲ್ಲಿಗಳ ಅಭಿಪ್ರಾಯ ವನ್ನು ಮನನಮಾಡಿದ್ದಾಗಿದೆ. **'ಸತ್ಯಂ ಜ್ಞಾನಮನಂತಂ ಬ್ರಹ್ಮ'** ಎಂಬ ಸೂತ್ರವಾಕ್ಯ ವನ್ನು ಆಧಾರವಾಗಿಟ್ಟುಕೊಂಡು ಶ್ರೀ ಶಂಕರಭಗವತ್ಪಾದರು ಬ್ರಹ್ಮವೆಂಬುದು ಎಲ್ಲರ ಆತ್ಮನಾಗಿದ್ದು ಸತ್ಯವೂ, ಜ್ಞಾನವೂ, ಅನಂತವೂ ಆಗಿದೆ- ಎಂಬಿದನ್ನು ವಿವರಿಸಿ ಅನಂತರ ಅನ್ನಮಯಾದ್ಯಾತ್ಮರುಗಳನ್ನು ಪ್ರಸ್ತಾಪಿಸಿ ಉತ್ತರೋತ್ತರವಾಗಿ ಸೂಕ್ಷ್ಮವೂ ವ್ಯಾಪಿಯೂ ಆಗಿರುವ ಆನಂದಮಯಾಂತವಾದ ಕಲ್ಪಿತಾತ್ಮರುಗಳನ್ನು ತಿಳಿಸಿಕೊಟ್ಟು ಕಡೆಗೆ ಆನಂದರೂಪವಾದ ಪರಬ್ರಹ್ಮವೇ ಸರ್ವರ ಆತ್ಮನೆಂದು ತಿಳಿಸಿಕೊಟ್ಟಿದ್ದಾರೆ. ಅನಂತರ ಆ ಆನಂದಪರಬ್ರಹ್ಮವು ಇದೆ- ಎಂದು ತಿಳಿಸಲು ಜಗತ್‌ಸೃಷ್ಟಿಯನ್ನು ಪ್ರಸ್ತಾಪಿಸಿ ಸೃಷ್ಟಿಕರ್ತೃವು ಬ್ರಹ್ಮವೇ ಎಂದೂ ಅದು ಜಗತ್ತನ್ನೆಲ್ಲ ಒಳಹೊಕ್ಕು ವ್ಯಾಪಿಸಿ ಕೊಂಡಿದೆಯೆಂದೂ ತಿಳಿಸಿದ್ದಾರೆ. ಮುಂದುವರೆದು ರಸರೂಪವಾಗಿರುವದರಿಂದ ಬ್ರಹ್ಮವು ಇದೆ-ಎಂದು ವಿವರಿಸಿ ಮತ್ತೆ ಭಯಾಭಯಗಳಿಗೆ ಕಾರಣವಾಗಿರುವದರಿಂದ ಬ್ರಹ್ಮವು ಇದೆಯೆಂದೂ ಅದು ಆನಂದಸ್ವರೂಪವೇ ಎಂದೂ ತಿಳಿಸಿರುತ್ತಾರೆ. ಇಂಥ ಆನಂದಬ್ರಹ್ಮವು ತನ್ನ ತನ್ನ ಆತ್ಮವೇ ಎಂದು ಸಾಧಕನು ತಿಳಿಯಬೇಕಾದರೆ ಮನುಷ್ಯಾನಂದದಿಂದಾರಂಭಿಸಿ ಬ್ರಹ್ಮಾನಂದದವರೆಗೂ ಶತಗುಣೋತ್ತರವಾಗಿ ಲೆಕ್ಕ ಮಾಡಿದಾಗ ಗಣಿತಕ್ಕೂ ಎಟುಕದ ಸ್ಥಿತಿಯಲ್ಲಿನ ಬ್ರಹ್ಮಾನಂದವನ್ನು ಗುರುತಿಸಿ ಉಪಸಂಹಾರಮಾಡಿದ್ದಾರೆ. ಈ ಪ್ರಕ್ರಿಯೆ ಯನ್ನು **'ಆನಂದಮೀಮಾಂಸೆ'** ಎಂದು ಕರೆದಿದೆ. ಹೀಗೆ ವಿಚಾರಮಾಡಿ ಬ್ರಹ್ಮವನ್ನೇ ಪ್ರತಿಯೊಬ್ಬನ ನಿಜವಾದ ಆತ್ಮ ಸ್ವರೂಪವೆಂದು ತಿಳಿಸಿ ಇದನ್ನರಿತವನಿಗೆ ಸಂಸಾರ ಭಯವಿಲ್ಲವೆಂದು ಕಡೆಯಲ್ಲಿ ಉಪಸಂಹಾರಮಾಡಲಾಗಿದೆ.

ಈಗ ಈ ಉಪನಿಷತ್ತಿನ ಮೂರನೆಯ ವಲ್ಲಿಯಾದ ಭೃಗುವಲ್ಲಿಯನ್ನು ವಿಚಾರಮಾಡೋಣ. ಈ ವಲ್ಲಿಯಲ್ಲಿ ಹಿಂದೆ ಪ್ರಸ್ತಾಪಿಸಿರುವ ಬ್ರಹ್ಮವಿದ್ಯೆಯ ಪ್ರಾಪ್ತಿಗೆ ಸಾಧನಗಳಾದ ತಪಸ್ಸು, ಜಿಜ್ಞಾಸೆ- ಮುಂತಾದವುಗಳನ್ನು ಹೇಳಿದೆ. ಮತ್ತು ಅನ್ನವೇ ಮುಂತಾದ ವಿಷಯಗಳ ಉಪಾಸನೆಗಳನ್ನೂ ಹೇಳಲಾಗಿದೆ. ಇವುಗಳನ್ನು ಕುರಿತು ಈಗ ಪ್ರಸ್ತಾಪಮಾಡೋಣ. ಮೊದಲು ತಂದೆ-ಮಕ್ಕಳ ಸಂವಾದರೂಪವಾಗಿ ಉಪನಿಷತ್ತು ಪ್ರಾರಂಭವಾಗಿದೆ. ಮಗನನ್ನು ಶಿಷ್ಯನೆಂದೂ ತಂದೆಯನ್ನು ಗುರುವೆಂದೂ ಭಾವಿಸ ಲಾಗಿದೆ. ಒಮ್ಮೆ ವರುಣನ ಮಗನಾದ ಭೃಗುವೆಂಬಾತನು ತನ್ನ ತಂದೆಯ ಬಳಿಗೆ ಬಂದು ''ಪೂಜ್ಯರೆ, ನನಗೆ ಬ್ರಹ್ಮವನ್ನು ತಿಳಿಸಿಕೊಡಬೇಕು'' ಎಂದು ಕೇಳಿದನು. ಆಗ

ವರುಣನು ಹೀಗೆಂದನು: **"ಎಲೈ ಭೃಗುವೆ, ನೀನು ಕೇಳಿರುವ ಪ್ರಶ್ನೆಗೆ ಉತ್ತರವು ಹೀಗಿದೆ. ಜಗತ್ತಿನಲ್ಲಿರುವ ಈ ಭೂತ (ಪ್ರಾಣಿಗಳೇ ಮುಂತಾದವು) ಗಳೆಲ್ಲವೂ ಯಾವದರಿಂದ ಹುಟ್ಟುವವೋ- ಅನಂತರ ಯಾವದನ್ನೇ ಆಶ್ರಯಿಸಿಕೊಂಡು ಜೀವಿಸಿರುವವೋ, ಕೊನೆಯಲ್ಲಿ ಮತ್ತೆ ಯಾವದರಲ್ಲಿಯೇ ಒಂದಾಗಿಬಿಡುವವೋ ಅದನ್ನು ವಿಚಾರಮಾಡಿ ತಿಳಿಯುವವನಾಗು ; ಅದೇ ಬ್ರಹ್ಮವು"** ಎಂದು ಉಪದೇಶಿಸಿದನು. ಆಗ ಭೃಗುವು ಬ್ರಹ್ಮವನ್ನು ತಿಳಿಯಲಿಚ್ಛೆಯುಳ್ಳವನಾಗಿ ತಪಸ್ಸು ಮಾಡಿದನು.

ಈಗ ತಪಸ್ಸು ಎಂದರೇನು ? ವಿಚಾರಮಾಡೋಣ. **ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರವಾಗಿ ಮಾಡಿ ಒಂದೇ ಗುರಿಯಲ್ಲಿ ನೆಲೆಗೊಳಿಸುವದೇ ತಪಸ್ಸು**- ಎನಿಸುತ್ತದೆ. ಇದು ಕಷ್ಟಸಾಧ್ಯವಾದುದೇ ಸರಿ. ಏಕೆಂದರೆ ಮನಸ್ಸು ಚಂಚಲವಾಗಿರುತ್ತದೆ. ಅದಕ್ಕೆ ಅನುಗುಣವಾಗಿಯೇ ಇಂದ್ರಿಯಗಳೂ ವ್ಯಾಪಾರಮಾಡುತ್ತವೆ. ಇನ್ನು ಸೃಷ್ಟಿಯಲ್ಲಿ ಇಂದ್ರಿಯಗಳು ಹೊರಮುಖವಾಗಿಯೇ ಏರ್ಪಡಿಸಲ್ಪಟ್ಟಿರುವದರಿಂದ ಅವುಗಳನ್ನು ಒಳಮುಖವಾಗಿ ಮಾಡುವದು ಕಷ್ಟಸಾಧ್ಯವೇ ಸರಿ. ಆದರೆ ಬ್ರಹ್ಮವೇ ನಮ್ಮ ಆತ್ಮನಾಗಿರುವದರಿಂದ, ಹಾಗೂ ಆತ್ಮನನ್ನು ನಮ್ಮೊಳಗೇ ಕಂಡುಕೊಳ್ಳಬೇಕಾಗಿರುವದರಿಂದ ತಪಸ್ಸು ಅನಿವಾರ್ಯವಾಗಿದೆ. ಆದ್ದರಿಂದ ತಂದೆಯಾದ ವರುಣನು ಭೃಗುವಿಗೆ ತಪಸ್ಸುಮಾಡಿಯೇ ಜಗನ್ಮೂಲವಾದ ಬ್ರಹ್ಮವನ್ನು ಕಂಡುಕೊಳ್ಳಬೇಕೆಂದು ಆದೇಶವನ್ನಿತ್ತನು.

ಈಗ ಭೃಗುವು ತಪಸ್ಸನ್ನು ಕೈಗೊಂಡನು. ತನ್ನೊಳಗೇ ತಾನೇ ಚಿಂತನೆ ಮಾಡುತ್ತಿರುವಲ್ಲಿ ಅನ್ನವು ಬ್ರಹ್ಮವೆಂದು ಅವನಿಗೆ ಅರಿವಾಯಿತು. ಹೇಗೆಂದರೆ ಸೃಷ್ಟಿಯಲ್ಲಿರುವ ಪ್ರಾಣಿಗಳೆಲ್ಲವೂ ಜೀವಿಸಿರುವದು ಅನ್ನದಿಂದಲೇ ಆಗಿದೆ. ಹಾಗೆಯೇ ಎಲ್ಲಾ ಜೀವಿಗಳೂ ಅನ್ನದಿಂದಲೇ ಹುಟ್ಟಿ-ಬಾಳಿ -ಕಡೆಗೆ ಅನ್ನದಲ್ಲಿಯೇ ಒಂದಾಗುತ್ತವೆ. ಆದ್ದರಿಂದ ಅನ್ನದಲ್ಲಿ ಬ್ರಹ್ಮದ ಲಕ್ಷಣವಿರುವದರಿಂದ ಅದೇ ಬ್ರಹ್ಮವು ಎಂದು ತಿಳಿದನು. ಸ್ವಲ್ಪ ಕಾಲಾನಂತರ ಮತ್ತೆ ಆಲೋಚಿಸಿ ಅನ್ನವೂ ವಿನಾಶವುಳ್ಳದ್ದು ; ಇದು ಬ್ರಹ್ಮವು ಹೇಗಾದೀತು ? ಎಂಬ ಸಂಶಯವುಂಟಾಯಿತು. ಆಗ ಮತ್ತೆ ತಂದೆಯ ಬಳಿಗೆ ಬಂದು "ಪೂಜ್ಯರೆ, ಬ್ರಹ್ಮವನ್ನು ತಿಳಿಸಿಕೊಡಿರಿ" ಎಂದನು. ಆಗ ತಂದೆಯು "ಆಗಲಿ, ನೀನೇ ಇನ್ನೂ ತಪಸ್ಸು ಮಾಡು; ಬ್ರಹ್ಮವು ತಿಳಿಯಲಿದೆ" ಎಂದನು. ಅದರಂತೆ ಭೃಗುವು ತನ್ನ ತಪಸ್ಸನ್ನು ಮುಂದುವರೆಸಿದನು.

ಅನಂತರ ಪ್ರಾಣವು ಬ್ರಹ್ಮವೆಂದು ಅವನಿಗೆ ಅರಿವಾಯಿತು. ಹೇಗೆಂದರೆ ಅನ್ನಮಯಶರೀರಕ್ಕಿಂತ ಪ್ರಾಣವು ಸೂಕ್ಷ್ಮವಾದುದು, ಮತ್ತು ತಿರುಳಾದುದೂ ಆಗಿದೆ. ಒಬ್ಬ ವ್ಯಕ್ತಿಯು ದೇಹತ್ಯಾಗಮಾಡಿದರೆ ಶರೀರವು ಇದ್ದುಕೊಂಡೇ ಇರುತ್ತದೆ.

ಆದರೆ ಪ್ರಾಣವ್ಯಾಪಾರವು ನಿಂತುಹೋಗಿರುತ್ತದೆ. ಪ್ರಾಣವಿಲ್ಲದ ಶರೀರಕ್ಕೆ ಏನೂ ಬೆಲೆಯಿಲ್ಲ. ಆದ್ದರಿಂದ ಅನ್ನಮಯಾತ್ಮನಿಗಿಂತ ಪ್ರಾಣಮಯಾತ್ಮನು ಮುಖ್ಯನು. ಈ ಪ್ರಾಣಮಯನೇ ಬ್ರಹ್ಮವು- ಎಂದು ಭೃಗುವು ತಿಳಿದನು. ಆದರೆ ಇದೇ ಸರಿಯೊ, ಅಲ್ಲವೊ- ಎಂದು ತಿಳಿಯಲು ಮತ್ತೆ ತಂದೆಯ ಬಳಿಗೆ ಬಂದನು. ಆಗ ತಂದೆಯು 'ಇನ್ನೂ ಹೆಚ್ಚು ಕಾಲ ತಪಸ್ಸು ಮಾಡು, ಬ್ರಹ್ಮವು ತಿಳಿಯಲಿದೆ' ಎಂದನು. ಆಗ ಭೃಗುವು ಮತ್ತೆ ತಪಸ್ಸನ್ನು ಕೈಗೊಂಡನು.

ಕೆಲವು ಕಾಲಾನಂತರ ಭೃಗುವಿಗೆ ಪ್ರಾಣಕ್ಕಿಂತ ಮನಸ್ಸು ಹೆಚ್ಚಿನದೆಂದು ಹೊಳೆಯಿತು. ಈ ಮನೋಮಯನೇ ಬ್ರಹ್ಮವು ಎಂದು ತಿಳಿದನು. ಪ್ರಾಣವುಳ್ಳ ಜಂತುಗಳೆಲ್ಲವೂ ಪ್ರಾಣಿ- ಎನಿಸುವವು ಆದರೆ ಮನುಷ್ಯನೂ ಒಂದು ಪ್ರಾಣಿಯೇ ಆದರೂ ಅವುಗಳಿಗಿಂತ ವಿಶಿಷ್ಟನಾಗಿರುತ್ತಾನೆ. ಹೇಗೆಂದರೆ ಪ್ರಾಣಿಗಳಿಗೆ ಹಸಿವು ಬಾಯಾರಿಕೆ, ನಿದ್ರೆಗಳಿವೆ ; ಮನುಷ್ಯನಿಗೆ ಇವುಗಳ ಜೊತೆಗೆ ಆಲೋಚನೆ ಮಾಡುವ ಶಕ್ತಿಯೂ ಇದೆ. ಇವನಿಗೆ ನಾಳೆಗೇನು ? ಎಂದು ಆಲೋಚಿಸುವ ಸಾಮರ್ಥ್ಯವಿದೆ. ಹಾಗೆಯೇ ತಾನು ಈ ಲೋಕವನ್ನು ಬಿಟ್ಟರೆ ಎಲ್ಲಿಗೆ ಹೋದೇನು ? ಅಲ್ಲಿಯೂ ಸುಖವಾಗಿರಲು ಈಗ ಏನು ಮಾಡಬೇಕು ? ಪುಣ್ಯ - ಪಾಪಗಳೆಂದರೇನು ? ಹೀಗೆಲ್ಲ ಆಲೋಚಿಸುವ ಮನಸ್ಸಿದೆ. ಆದ್ದರಿಂದ ಪ್ರಾಣಾತ್ಮನಿಗಿಂತ ಮನೋಮಯಾತ್ಮನು ಹೆಚ್ಚಿನವನೆಂದು ತಿಳಿದನು. ಮತ್ತು ಅದೇ ಬ್ರಹ್ಮವಿರಬಹುದು- ಎಂದು ಭಾವಿಸಿ ತಂದೆಯ ಬಳಿಗೆ ಬಂದನು. ಆಗ ತಂದೆಯು ''ಇನ್ನೂ ತಪಸ್ಸನ್ನು ಮುಂದುವರೆಸು'' ಎಂದನು.

ಮತ್ತೆ ಭೃಗುವು ತಪಸ್ಸನ್ನು ಮುಂದುವರೆಸಲಾಗಿ, ಕೆಲವು ಕಾಲದ ಅನಂತರ ವಿಜ್ಞಾನವು ಹೆಚ್ಚಿನದೆಂದು ಹೊಳೆಯಿತು. ವಿಜ್ಞಾನವೆಂದರೆ ನಿಶ್ಚಯಾತ್ಮಕವಾದ ಬುದ್ಧಿಯು. ಅದೇ ಬ್ರಹ್ಮವು- ಎಂದು ತಿಳಿದನು. ಹೇಗೆಂದರೆ ಮನಸ್ಸು ಸೂಕ್ಷ್ಮ ವಾದರೂ ಚಂಚಲವು. ಒಂದು ನಿರ್ಣಯಕ್ಕೆ ಬರಲು ಅದಕ್ಕೆ ಶಕ್ತಿ ಸಾಲದು. ನೂರಾರು ಆಲೋಚನೆಗಳು ಅದರಲ್ಲಿ ತುಂಬಿದ್ದು, ಬ್ರಹ್ಮವೆಂಬ ಪರಮಾರ್ಥವನ್ನು ಗೊತ್ತುಪಡಿಸಲು ಅದಕ್ಕೆ ಸಾಮರ್ಥ್ಯವು ಸಾಲದು. ಈ ಕಾರಣದಿಂದಲೇ ನಮ್ಮ ಭರತಖಂಡದಲ್ಲಿ ಬೇರೆ ಬೇರೆಯ ದರ್ಶನಗಳು ಹುಟ್ಟಿಕೊಂಡಿವೆ. ಇವುಗಳನ್ನು ಕಂಡುಹಿಡಿದವರೂ ಋಷಿಗಳೆನಿಸಿದ್ದಾರೆ. ಆದರೆ ಕಪಿಲ, ಕಣಾದ, ಗೌತಮ, ಜೈಮಿನ್ಯಾದಿ ಋಷಿಗಳು ತತ್ತ್ವಚಿಂತಕರುಗಳೇ ಆದರೂ ಐಕಮತ್ಯವಿರುವದಿಲ್ಲ. ಇದಕ್ಕೆ ಕಾರಣ ವಿಜ್ಞಾನಾತ್ಮನ ಅರಿವು ಇಲ್ಲದ್ದು- ಎನ್ನಬಹುದು. ಇರಲಿ. ಈಗ ಭೃಗುವು ಕಂಡುಕೊಂಡ ನಿಶ್ಚಯಾತ್ಮಕಬುದ್ಧಿರೂಪವಾದ ವಿಜ್ಞಾನವು ಬ್ರಹ್ಮವೆಂದು

ನಿರ್ಣಯಿಸಿದಾಗ ಮತ್ತೆ ತಂದೆಯ ಬಳಿಗೆ ಬಂದನು. ಆಗ ತಂದೆಯು 'ಇನ್ನೂ ವಿಚಾರಮಾಡು ನಿಜವು ತಿಳಿದೀತು' ಎಂದನು. ಇಲ್ಲಿ ನಿಜವೇನೆಂದರೆ ವಿಜ್ಞಾನಾತ್ಮನು ಉಳಿದ ಅನ್ನಮಯಾದ್ಯಾತ್ಮರುಗಳಿಗಿಂತ ವಿಶಿಷ್ಟನಾದವನೆಂಬುದು ಸತ್ಯವಾದರೂ ಅವನು ಕರ್ತೃವಾಗಿಯೇ ಸಿದ್ಧನಾಗಿರುತ್ತಾನೆ. ಹೇಗೆಂದರೆ ಭೌತಿಕವಿಜ್ಞಾನಿಗಳನ್ನು ನೋಡಿರಿ. ಅವರು ತಮ್ಮ ಕರ್ತೃತ್ವಶಕ್ತಿಯಿಂದ ಕಂಡುಹಿಡಿದ ವಸ್ತುಗಳೆಲ್ಲವೂ ಸುಖಸಾಧನಗಳೇ ಆಗಿರುವದಿಲ್ಲ. ಕೆಲವು ಮಾರಕಗಳೂ ಆಗಿವೆ. ಹಾಗೆಯೇ ಆ ವಿಜ್ಞಾನಿಯೂ ಅತೃಪ್ತನೇ ಆಗಿರುತ್ತಾನೆ. ಕೆಲವು ವೇಳೆ ತಾನು ಕಂಡುಹಿಡಿದ ನಿಜವು ಜಗತ್ತಿನ ಶಾಂತಿಗೆ ಮಾರಕವಾಯಿತಲ್ಲ ? ನಾನೇಕೆ ಕಂಡುಹಿಡಿಯಬೇಕಾಗಿತ್ತು ? ಎಂದು ಪಶ್ಚಾತ್ತಾಪಪಟ್ಟಿರಲೂಬಹುದು. ಆದ್ದರಿಂದ ವಿಜ್ಞಾನಾತ್ಮನನ್ನೂ ಮೀರಿದ ಬ್ರಹ್ಮವು ಇದೆ ; ಅದಕ್ಕಾಗಿ ತಪಸ್ಸುಮಾಡು ಎಂದು ತಂದೆಯು ಹೇಳಿದನು.

ಕಟ್ಟಕಡೆಗೆ ಭೃಗುವು ತನ್ನ ಚಿಂತನೆಯ ಫಲವಾಗಿ ಆನಂದವೇ ಬ್ರಹ್ಮವು- ಎಂದು ಕಂಡುಕೊಂಡನು. ಇಲ್ಲಿ ರಹಸ್ಯವೇನೆಂದರೆ ಆನಂದಮಯನು ಬ್ರಹ್ಮವಲ್ಲ. ಮಯ- ಎಂಬ ಶಬ್ದವು ವಿಕಾರವೆಂಬ ಅರ್ಥವನ್ನು ತಿಳಿಸುತ್ತದೆ. ಆದ್ದರಿಂದ ವಿಜ್ಞಾನಮಯನಿಗಿಂತ ಮಿಗಿಲಾದ ಆನಂದಮಯನೂ ಬ್ರಹ್ಮವಲ್ಲ. ಅವನು ಭೋಕ್ತೃವೆನಿಸಿರುತ್ತಾನೆ. ಹೀಗೆ ಕರ್ತೃಭೋಕ್ತೃಗಳಾದ ವಿಜ್ಞಾನಮಯ- ಆನಂದಮಯರನ್ನೂ ಮೀರಿದ ಆನಂದ ತತ್ತ್ವವೇ ಪರಬ್ರಹ್ಮವು. ಅಲ್ಲಿ ಆನಂದ ಆನಂದಿ- ಎಂಬ ವಿಭಾಗವಿರುವದಿಲ್ಲ ಅದು ಅಖಂಡವಾದ ಆನಂದಸ್ವರೂಪವಾಗಿರುತ್ತದೆ. ಹಾಗೂ ಅಲ್ಲಿ ಯಾವ ದ್ವೈತ ವಿಭಾಗವೂ ಇರುವದಿಲ್ಲ. ಇಂಥ ಪರಮಾನಂದವೇ ಪರಬ್ರಹ್ಮವು. ಇದನ್ನು ಭೃಗುವು ತನ್ನ ವಿಚಾರಕ್ರಮ, ಹಾಗೂ ತಪಸ್ಸುಗಳಿಂದ ತನ್ನಲ್ಲಿಯೇ ಕಂಡುಕೊಂಡನು. ಆ ಸ್ಥಿತಿಯಲ್ಲಿ ಏನೊಂದು ದ್ವೈತವೂ ಇರುವದಿಲ್ಲ. ಈ ಸ್ವರೂಪವು ನಿತ್ಯವೂ ಸತ್ಯವೂ ಶಾಶ್ವತವೂ ಅಜವೂ ಅಜರವೂ ಅಮೃತವೂ ಅಭಯವೂ ಆದುದಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಜಿಜ್ಞಾಸುವಿನ ಆತ್ಮವೇ ಆಗಿದೆ. ಹೀಗೆ ಬ್ರಹ್ಮಪ್ರಾಪ್ತಿಯೆಂಬುದು ಅಪ್ರಾಪ್ತ ಪ್ರಾಪ್ತಿಯಲ್ಲ. ಎಂದೆಂದೂ ಪ್ರಾಪ್ತವೇ ಆಗಿದ್ದು ಅವಿದ್ಯಾದೆಶೆಯಲ್ಲಿ ಅಪ್ರಾಪ್ತ ವಾದಂತೆ ಇದ್ದು ಜ್ಞಾನವುಂಟಾದಾಗ ಪ್ರಾಪ್ತವಾದಂತೆ ವ್ಯವಹರಿಸಲ್ಪಡುತ್ತದೆ. ಇಂಥ ಪರಬ್ರಹ್ಮವೇ ತಾನೆಂದೂ, ಅದೊಂದೇ ಪರಮಾರ್ಥವೆಂದೂ ನಿಶ್ಚಯವಾದರೆ ಬ್ರಹ್ಮವಿದ್ಯೆಯು ಪರಿಸಮಾಪ್ತವಾಗುತ್ತದೆ. ಹೀಗೆ ಭೃಗುವು ಬ್ರಹ್ಮವನ್ನರಿತು ಕೃತಾರ್ಥನಾದನು.

ಈಗ ಭೃಗುವಲ್ಲಿಯ ಮುಂದಿನ ಭಾಗವನ್ನು ವಿಚಾರಮಾಡೋಣ. ಈ ಬ್ರಹ್ಮ ವಿದ್ಯೆಯನ್ನು ಪಡೆದುಕೊಂಡವನು ವ್ಯವಹಾರಪ್ರಪಂಚದಲ್ಲಿಯೂ ಗಣ್ಯನಾಗಿಯೂ

ಪುಷ್ಟನಾಗಿಯೂ ಭೋಗಿಯಾಗಿಯೂ ಬಾಳುತ್ತಾನೆ- ಎಂದು ಸ್ತುತಿಸಿರುತ್ತದೆ. ಆದ್ದರಿಂದ ಬ್ರಹ್ಮವಿದ್ಯೆಯಲ್ಲಿ ಐಹಿಕಪಾರಲೌಕಿಕಸುಖಗಳೂ ಅಡಕವಾಗಿದ್ದು ಮೋಕ್ಷವೆಂಬ ಪರಮಪುರುಷಾರ್ಥವಂತೂ ಮುಖ್ಯಫಲವಾಗಿ ದೊರಕುತ್ತದೆ- ಎಂದಭಿಪ್ರಾಯ. ಹೀಗೆ ಭೃಗುವು ಬ್ರಹ್ಮವಿದ್ಯೆಯಿಂದ ಕೃತಾರ್ಥನಾಗುವಲ್ಲಿ ಮೊಟ್ಟಮೊದಲು ಅನ್ನವನ್ನು ಬ್ರಹ್ಮವೆಂದು ಕಂಡುಕೊಂಡನು. ಆದ್ದರಿಂದ ಈಗ ಅನ್ನದ ಮಹಿಮೆಯನ್ನು ತಿಳಿಸಲಾಗುವದು. ಅನ್ನವೆಂಬ ಶಬ್ದಕ್ಕೆ ವ್ಯವಹಾರದಲ್ಲಿ ಅಕ್ಕಿಯನ್ನು ಬೇಯಿಸಿ ಮಾಡಿದ ವಸ್ತುವನ್ನು ಹೇಳುವ ರೂಢಿಯಿದೆ. ಇದು ಸರಿ. ಆದರೆ ಈ ಸಂದರ್ಭದಲ್ಲಿ ಅನ್ನಶಬ್ದಕ್ಕೆ ಉಪನಿಷತ್ತಿನಲ್ಲಿ ಇನ್ನೂ ವ್ಯಾಪಕವಾದ ಅರ್ಥವನ್ನು ಸ್ವೀಕರಿಸಿದೆ. ಹೇಗೆಂದರೆ ''ಅತ್ತೀತ್ಯನ್ನಮ್'' ಎಂಬ ವ್ಯುತ್ಪತ್ತಿಯಂತೆ ಪ್ರಾಣಿಗಳ ಸಮೇತ ಮನುಷ್ಯರೇ ಮುಂತಾಗಿ ಎಲ್ಲರೂ ತಿನ್ನುವ ಆಹಾರಕ್ಕೇ ಅನ್ನವೆಂದು ಹೆಸರಿಸಲಾಗಿದೆ. ಆದ್ದರಿಂದ ಪ್ರಾಣಿಗಳ ಜೀವನಾಧಾರವಾದ ಅನ್ನವನ್ನು ಬ್ರಹ್ಮವೆಂದು ಕಂಡುಕೊಳ್ಳಬೇಕು. ಆಗ ನಮ್ಮ ದೃಷ್ಟಿಯಲ್ಲಿ ಬದಲಾವಣೆಯಾಗುತ್ತದೆ. ಹೇಗೆಂದರೆ ಮನುಷ್ಯರಾದಿಯಾಗಿ ಎಲ್ಲ ಪ್ರಾಣಿಗಳೂ ಸ್ವೀಕರಿಸುವ ಆಹಾರವೆಲ್ಲ ಬ್ರಹ್ಮವೇ ಆಗಿರುತ್ತದೆ ; ಮತ್ತು ನಾವು ಅಂಥ ಅನ್ನರೂಪವಾದ ಬ್ರಹ್ಮದ ನೆರವಿಲ್ಲದೆ ಜೀವಿಸಲಾರೆವು- ಎಂದಾಗುತ್ತದೆ. ಹೀಗೆ ನಾವು ತಿನ್ನುವ ಆಹಾರದಲ್ಲಿ ಬ್ರಹ್ಮಬುದ್ಧಿಯನ್ನು ಮಾಡಿಕೊಳ್ಳುವದರಿಂದ, ನಮ್ಮ ಅಂತಃಕರಣಕ್ಕೆ ಶುಭಸಂಸ್ಕಾರವುಂಟಾಗಿ ಬ್ರಹ್ಮಜ್ಞಾನಕ್ಕೆ ಅದು ಸಜ್ಜಾಗುತ್ತದೆ. ಅದಕ್ಕಾಗಿಯೇ ಅನ್ನವನ್ನು ಇಲ್ಲಿ ಸ್ತುತಿಸಲಾಗಿದೆ. ಯಾರೊಬ್ಬರೂ ಅನ್ನವನ್ನು ನಿಂದಿಸಬಾರದು. ಅದು ಒಂದು ವ್ರತ (ನಿಯಮ)ವು ಎಂದು ಅನ್ನದ ಸ್ತುತಿಯನ್ನು ಪ್ರಸ್ತಾಪಿಸಿದೆ.

ಪುರಾಣಸಾಹಿತ್ಯದಲ್ಲಿ ಅನ್ನವನ್ನು ''ಅನ್ನಪೂರ್ಣೇಶ್ವರಿ'' ಎಂದು ಸ್ತುತಿಸಲಾಗಿದೆ. ನಮ್ಮ ಭಾರತದೇಶದಲ್ಲಿ ಈ ಹೆಸರಿನ ದೇವಾಲಯಗಳೂ ಇವೆ. ಅನ್ನಪೂರ್ಣಾದೇವಿಯನ್ನು ಸ್ತುತಿಸುವ ಒಂದು ಅಷ್ಟಕದ ಮೊದಲನೆಯ ಪದ್ಯವು ಹೀಗಿದೆ :

**ನಿತ್ಯಾನಂದಕರೀ ವರಾಭಯಕರೀ ಸೌಂದರ್ಯರತ್ನಾಕರೀ**
**ನಿರ್ಧೂತಾಖಿಲಘೋರಪಾವನಕರೀ ಪ್ರತ್ಯಕ್ಷಮಾಹೇಶ್ವರೀ ॥**
**ಪ್ರಾಲೇಯಾಚಲವಂಶಪಾವನಕರೀ ಕಾಶೀಪುರಾಧೀಶ್ವರೀ ।**
**ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥**

ಅನ್ನಪೂರ್ಣಾದೇವಿಯು ನಿತ್ಯಾನಂದರೂಪಳಾಗಿದ್ದು ಭಕ್ತರಿಗೂ ಆನಂದವನ್ನು ಕೊಡುವವಳೂ ವರದಹಸ್ತ- ಅಭಯಹಸ್ತಗಳುಳ್ಳವಳೂ, ಸೌಂದರ್ಯದ ಸಾಗರದಂತೆ ಇರುವವಳೂ, ಪಾಪಗಳನ್ನೆಲ್ಲ ಪರಿಹರಿಸುವವಳೂ, ಹಿಮವಂತನ ವಂಶವನ್ನು ಪವಿತ್ರಗೊಳಿಸಿದವಳೂ, ಕಾಶೀಕ್ಷೇತ್ರದ ಒಡತಿಯೂ ಆಗಿದ್ದಾಳೆ. ಕೃಪಾಪೂರ್ಣಳಾದ ಆ ಮಾತೆಯನ್ನು ಭಿಕ್ಷೆಯನ್ನು ನೀಡುವಂತೆ ಭಕ್ತನು ಪ್ರಾರ್ಥಿಸಿದ್ದಾನೆ. ಇಲ್ಲಿ ಭಿಕ್ಷೆ- ಎಂಬ ಮಾತಿಗೆ ಜ್ಞಾನಭಿಕ್ಷೆ- ಎಂದೂ ಅರ್ಥಮಾಡಬಹುದು. ಏಕೆಂದರೆ ಕೇನೋಪನಿಷತ್ತಿನ ಕಥೆಯಂತೆ ದೇವೇಂದ್ರನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದವಳೇ ಉಮಾದೇವಿಯು. ಆಕೆಯೇ ಅನ್ನಪೂರ್ಣೇಶ್ವರಿಯೂ ಆಗಿರುತ್ತಾಳೆ. ಹೀಗೆ ಅನ್ನದ ಮಹಿಮೆಯನ್ನು ಅರಿತುಕೊಂಡು ಅದನ್ನು ಗೌರವಿಸಬೇಕು. ಬ್ರಹ್ಮವಿದ್ಯಾ ಪ್ರಾಪ್ತಿಗೆ ಇದು ಕೂಡ ಸಾಧನವೇ ಆಗಿರುತ್ತದೆ.

ಈಗ ಮತ್ತೊಮ್ಮೆ ಅನ್ನವನ್ನು ಸ್ತುತಿಸಲಾಗುತ್ತದೆ. ಅನ್ನವನ್ನು ಬೇಡವೆನ್ನಬಾರದು- ಎಂದರೆ ತಿರಸ್ಕರಿಸಬಾರದು- ಎಂದಭಿಪ್ರಾಯ. ಅನ್ನದ ಆಲಂಬನವಿಲ್ಲದೆ ಪ್ರಾಣವು ಬದುಕಲಾರದು. ಹಾಗೆಯೇ ಕೇವಲ ಅನ್ನವು ಪ್ರಾಣದ ಸಂಪರ್ಕವಿಲ್ಲದೆ ಉಳಿಯಲಾರದು. ಹೇಗೆಂದರೆ ಉಸಿರಾಡುವ ಎಲ್ಲಾ ಪ್ರಾಣಿಗಳಿಗೂ ಮನುಷ್ಯನ ಸಮೇತವಾಗಿ- ಸರ್ವರಿಗೂ ಬದುಕಿರಲು ಆಹಾರರೂಪವಾದ ಅನ್ನವು ಬೇಕೇಬೇಕು. ಹೀಗೆ ಪ್ರಾಣಕ್ಕೆ ಅನ್ನವು ಆಧಾರವಾಗಿದೆ. ಇದೇ ರೀತಿಯಾಗಿ ಅನ್ನಕ್ಕೂ ಪ್ರಾಣದ ಆಶ್ರಯವು ಬೇಕಾಗಿದೆ. ಯಾವ ಪ್ರಾಣಿಯೂ ಅನ್ನವನ್ನೇ ತಿನ್ನದೆ ಇದ್ದರೆ ಅನ್ನವು ಹಳಸಿ ಒಣಗಿಹೋಗುತ್ತದೆ. ಹೀಗೆ ಅನ್ನ-ಪ್ರಾಣಗಳಿಗೆ ಅನ್ಯೋನ್ಯಾಶ್ರಯವಿರುವದರಿಂದ ಇವೆರಡೂ ಮಾನವಜೀವನದ ತಿರುಳಾಗಿವೆ. ಮತ್ತು ಇಡಿಯ ಜಗತ್ತಿನ ಜೀವನಾಧಾರವಾಗಿವೆ. ಆದ್ದರಿಂದ ಈ ಅನ್ನಪ್ರಾಣಗಳನ್ನು ಬ್ರಹ್ಮವೆಂದು ಚಿಂತಿಸಬೇಕು- ಎಂದು ಶ್ರುತಿಯು ತಿಳಿಸುತ್ತದೆ.

ಈಗ ಶ್ರುತಿಯು ಮುಂದುವರೆದು ಅನ್ನವನ್ನು ಬಹಳವಾಗಿ ವೃದ್ಧಿಗೊಳಿಸಬೇಕು- ಎಂದೂ ತಿಳಿಸುತ್ತದೆ. ಇದು ಕೂಡ ಸಮಂಜಸವಾಗಿದೆ. ಏಕೆಂದರೆ ಮನೆಗೆ ಬಂದ ಅತಿಥಿ ಅಭ್ಯಾಗತರುಗಳು, ಬಂಧುಗಳಿಗೆ, ಗೃಹಸ್ಥನು ಅನ್ನವನ್ನು ನೀಡಬೇಕಾಗುತ್ತದೆ. ಹಾಗೂ ಅತಿಥಿಗಳಿಗೆ ಮೊದಲು ಉಳಿದುಕೊಳ್ಳಲು ಸ್ಥಳವನ್ನೂ ನೀಡಬೇಕಾಗುತ್ತದೆ. ಸ್ಥಳವನ್ನು ನೀಡುವ ಬಗ್ಗೆ ನಿರಾಕರಿಸಬಾರದು- ಎಂದೂ ಶ್ರುತಿಯೇ ತಿಳಿಸುತ್ತಿದೆ. ಹೀಗೆ ಸ್ಥಳವನ್ನು ನೀಡಿದ ಮೇಲೆ ಅತಿಥಿಗಳನ್ನು ಉಪವಾಸ ಕೂಡಿಸುವಂತಿಲ್ಲ. ಅವರಿಗೆ ಅನ್ನವನ್ನು ನೀಡಲೇಬೇಕಾಗುತ್ತದೆ. ಆದ್ದರಿಂದ ಗೃಹಸ್ಥನಾದವನು ಅತಿಥಿಸತ್ಕಾರರೂಪವಾಗಿ ಅನ್ನವನ್ನು ದಾನಮಾಡಬೇಕು. ಪುರಾತನಕಾಲದಿಂದಲೂ

ಈ ಪದ್ಧತಿಯು ನಮ್ಮಲ್ಲಿ ಆಚರಣೆಯಲ್ಲಿದೆ. ಆದ್ದರಿಂದ ಅನ್ನಬ್ರಹ್ಮವನ್ನು ಗೃಹಸ್ಥನು ಮೊದಲು ಸಾಕ್ಷಾತ್ಕರಿಸಿಕೊಳ್ಳಬೇಕು. ಅನ್ನದಾನದ ಮೂಲಕ ತನ್ನ ಪಾಪಗಳನ್ನು ಪರಿಹರಿಸಿಕೊಳ್ಳಬೇಕು. ಆಗ ಚಿತ್ತಶುದ್ಧಿಯುಂಟಾಗಿ ಜ್ಞಾನಕ್ಕೆ ತಕ್ಕ ಅರ್ಹತೆಯು ಲಭಿಸುತ್ತದೆ.

ಈಗ ಶ್ರುತಿಯು ಅನ್ನದಾನದ ಮಜಲುಗಳನ್ನು ಪ್ರಸ್ತಾಪಮಾಡುತ್ತಿದೆ. ಹೇಗೆಂದರೆ ಅನ್ನದಾನವನ್ನು ಕೈಗೊಂಡಾಗ ಉತ್ತಮ, ಮಧ್ಯಮ, ಸಾಮಾನ್ಯ- ಎಂಬ ಅಂತರಗಳಿರುತ್ತವೆ. ಹೇಗೆಂದರೆ : (೧) ಬ್ರಹ್ಮವಿದರಾದ ಹಾಗೂ ಶಾಸ್ತ್ರಜ್ಞರಾದ ಮಹಾತ್ಮರು ಅಥವಾ ಸಂನ್ಯಾಸಿಗಳನ್ನು ಆಹ್ವಾನಿಸಿ ಶ್ರದ್ಧಾಭಕ್ತಿಗಳಿಂದ ಅವರನ್ನು ಸತ್ಕರಿಸಿ ಅನ್ನದಾನವನ್ನು ಮಾಡಬೇಕು. ಇದು ಪ್ರಧಾನವಾದ **ಉತ್ತಮವರ್ಗದ ಅನ್ನದಾನ**ವೆನಿಸುತ್ತದೆ. (೨) ಇನ್ನು ಬಂಧುಗಳು, ಸ್ನೇಹಿತರುಗಳನ್ನು ಆಹ್ವಾನಿಸಿ ಅವರ ಜೊತೆಯಲ್ಲಿ ಕೂಡಿ ಭೋಜನಮಾಡುವದು **ಎರಡನೆಯ ವರ್ಗದ ಅನ್ನದಾನ**ವೆನಿಸುವದು. ಇಲ್ಲಿಯೂ ಬ್ರಹ್ಮಸಂಬಂಧವಿದೆಯಾದರೂ ಅದೇ ಪ್ರಧಾನವಾಗಿರುವದಿಲ್ಲ. (೩) ಇದಕ್ಕಿಂತಲೂ ಕಡಿಮೆಯದು ಎಂದರೆ ಭಿಕ್ಷುಕರು, ತಿರುಕರು, ಪಶುಪ್ರಾಣಿಗಳು- ಇಂಥವರಿಗೆ ಅನ್ನವನ್ನು ನೀಡುವದು. ಇದು ಕೂಡ ಅನ್ನದಾನವೆನಿಸಿದರೂ **ಕನಿಷ್ಠ ದರ್ಜೆ**ಯದಾಗಿರುತ್ತದೆ. ಹೀಗೆ ಮೂರು ಬಗೆಯಾದ ಅನ್ನದಾನವೂ ಆಯಾ ಪರಿಸ್ಥಿತಿ ಹಾಗೂ ಮನಸ್ಸಿನ ಒಲವುಗಳಿಗೆ ತಕ್ಕಂತೆ ಫಲವನ್ನು ಕೊಡುತ್ತದೆ. ಹೀಗೆ ಮಾಡಬಹುದಾದ ಅನ್ನದಾನದ ಫಲವೇನೆಂದರೆ:- ದಾನಿಯಾದವನು ಯಾವ ಸ್ಥಿತಿಯಲ್ಲಿ, ಯಾವ ಭಾವನೆಯಿಂದ - ಎಂಥ ಪಾತ್ರದಲ್ಲಿ ಅನ್ನದಾನವನ್ನು ಮಾಡುವನೋ ಅದಕ್ಕೆ ಅನುಗುಣವಾಗಿಯೇ ಅವನೂ ತನ್ನ ಜೀವನದಲ್ಲಿ ಅನ್ನವನ್ನು ಪಡೆಯುವನು- ಎಂದರ್ಥ. ಹೀಗೆ ಬ್ರಹ್ಮಪ್ರಾಪ್ತಿಗೆ ಮೊದಲನೆಯ ಮೆಟ್ಟಿಲಾದ ಅನ್ನದಾನದ ವಿಚಾರವು ಬ್ರಹ್ಮವಿದ್ಯೆಯ ಪ್ರಕರಣದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಈಗಲೂ ನಮ್ಮ ಜನಾಂಗದಲ್ಲಿ ಯಾವದೇ ಶುಭಾಶುಭಕಾರ್ಯಗಳನ್ನು ಕೈಗೊಂಡಾಗ ಅನ್ನದಾನವನ್ನು ಮಾಡುವ ಪದ್ಧತಿ ಇದೆ. ಹೀಗೆ ಅನ್ನದಾನವು ಬ್ರಹ್ಮವಿದ್ಯೆಗೆ ಉಪಕಾರಕವಾಗಿದೆ- ಎಂದು ಭಾವಿಸಿ ಆಚರಿಸಬೇಕು.

ಈ ಸಂದರ್ಭದಲ್ಲಿ ನಮ್ಮಲ್ಲಿ ಹಿರಿಯರೊಬ್ಬರು ಹೇಳುತ್ತಿದ್ದ ಒಂದು ಕಥೆಯು ನೆನಪಿಗೆ ಬರುತ್ತಿದೆ. ಅದನ್ನು ಉಲ್ಲೇಖಿಸಿರುತ್ತೇನೆ. ಧರ್ಮರಾಜನು ರಾಜಸೂಯ ಯಾಗವನ್ನು ಮಾಡಿದಾಗ ಯಾಗಕಾಲಕ್ಕೆ ಬಂದ ಅತಿಥಿಗಳಿಗೆಲ್ಲ ಅನ್ನಸಂತರ್ಪಣೆಯನ್ನು ನಡೆಯಿಸುತ್ತಿದ್ದನು. ಒಂದುಲಕ್ಷ ಜನರು ಶ್ರೋತ್ರಿಯಬ್ರಾಹ್ಮಣರು ಭೋಜನ ಮಾಡಿದ ಕೂಡಲೆ ದೇವಲೋಕದ ಗಂಟೆಯು ಒಂದು ಬಾರಿ 'ಢಣ್' ಎಂದು

ನಾದಮಾಡುತ್ತಿತ್ತಂತೆ. ಒಮ್ಮೆ ಅದು ಒಂದೇ ಸಮನಾಗಿ ಶಬ್ದಮಾಡುತ್ತಾ ಬಂದಿತು. ಇದು ಎಲ್ಲರಿಗೂ ಆಶ್ಚರ್ಯವೆನಿಸಿತು. ಇದಕ್ಕೆ ಕಾರಣವೇನೆಂದು ವಿಚಾರ ಮಾಡಲಾಗಿ ಶುಕಮಹಾಮುನಿಗಳು ಭೋಜನಮಾಡುತ್ತಿದ್ದಾರೆ- ಎಂದು ತಿಳಿದು ಬಂದಿತು ; ಆಗ ಕೃಷ್ಣಭಗವಂತನು ಧರ್ಮರಾಜನನ್ನು ಕುರಿತು ''ಅಯ್ಯ, ಒಬ್ಬ ಬ್ರಹ್ಮ ಜ್ಞಾನಿ (ನಿವೃತ್ತಿಧರ್ಮನಿಷ್ಠನು) ಭೋಜನಮಾಡುವ ಒಂದೊಂದು ತುತ್ತಿಗೂ ಒಂದು ಲಕ್ಷವಿಪ್ರಭೋಜನದ ಫಲವಿದೆ. ಅದಕ್ಕಾಗಿ ದೇವಲೋಕದ ಗಂಟೆ ನಿರಂತರವಾಗಿ ಶಬ್ದಮಾಡುತ್ತಿದೆ'' ಎಂದನಂತೆ. ಇದರಿಂದ ತಿಳಿದುಬರುವದೇನೆಂದರೆ ಅನ್ನ ದಾನಮಾಡುವವನು ಧರ್ಮರಾಜನಂತೆ ಇರಬೇಕು. ಭೋಜನಮಾಡುವವನು ಶುಕಮಹಾಮುನಿಯಂತೆ ಇರಬೇಕು. ಇದೇ ನಿಜವಾದ ಅನ್ನದಾನದ ರಹಸ್ಯವಾಗಿದೆ. ಆದ್ದರಿಂದಲೇ ಶ್ರುತಿಯು ''ಗೃಹಸ್ಥನಾದವನು ಯಾವ ರೀತಿಯಿಂದಾದರೂ ನ್ಯಾಯವಿರೋಧವಿಲ್ಲದಂತೆ ಬಹಳವಾದ ಅನ್ನವನ್ನು ಸಂಪಾದಿಸಿ ದಾನಮಾಡಬೇಕು'' ಎಂದು ಆದೇಶವನ್ನು ನೀಡುತ್ತಿದೆ.

ಹಾಗಾದರೆ ಜನಸಾಮಾನ್ಯರು ಮಾಡಬಹುದಾದ ಅನ್ನದಾನಕ್ಕೆ ಫಲವೇನೂ ಇಲ್ಲವೆ? ಎಂದರೆ ಹಾಗಲ್ಲ. ಶ್ರುತಿಯು ಹೇಳುವದೇನೆಂದರೆ ಮುಖ್ಯವೃತ್ತಿಯಿಂದ- ಎಂದರೆ ಉತ್ತಮರೀತಿಯಿಂದ ಅನ್ನದಾನಮಾಡಿದರೆ ಉತ್ತಮಫಲಗಳೇ ಆಗುವವು. ಮಧ್ಯಮ ಅಥವಾ ಸಾಮಾನ್ಯರೀತಿಯಿಂದ ಅನ್ನದಾನಮಾಡಿದರೆ ಅದಕ್ಕೆ ತಕ್ಕಂತೆ ಫಲಗಳಾಗುವವು. ಇದು ನಿಯಮವಾಗಿದೆ. ಗೃಹಸ್ಥನಾದವನಂತೂ ತನಗಾಗಿ ಎಂದೂ ಯಾವಾಗಲೂ ಅಡಿಗೆಮಾಡಬಾರದು. ದೇವತೆಗಳಿಗೆ, ಬ್ರಾಹ್ಮಣರಿಗೆ, ಮನೆಯಲ್ಲಿರುವ ಬಂಧುಬಾಂಧವರು- ಅತಿಥಿಗಳು- ಮಕ್ಕಳುಗಳಿಗೆ ಭೋಜನಕ್ಕಾಗಿ ಎಂದೇ ಪಾಕಮಾಡಬೇಕು. ಅವರೆಲ್ಲರೂ ಭೋಜನಮಾಡಿದ ಅನಂತರ ಉಳಿಯುವ ಪ್ರಸಾದವನ್ನು ತಾನು ಸ್ವೀಕರಿಸಬೇಕು. ಇದನ್ನು **'ಯಜ್ಞಶಿಷ್ಟಾಮೃತ'** ಎಂದು ಗೀತೆಯಲ್ಲಿ ಕರೆದಿದೆ. ಇದೇ ಅನ್ನದಾನದ ರಹಸ್ಯವಾಗಿದೆ.

ಇನ್ನು ಭೋಕ್ತೃಗಳಿಗೂ ಕೆಲವು ನಿಯಮಗಳಿವೆ. ಪಾಪಭಯದಿಂದ ಪರಾನ್ನ ಭೋಜನವನ್ನೇ ಬಿಡುವದೂ ಸರಿಯೆನಿಸುವದಿಲ್ಲ. ಯಾರೊಬ್ಬರೂ ಭೋಕ್ತೃಗಳಾಗದೆ ಹೋದರೆ ಕರ್ಮಚಕ್ರವು ತಿರುಗುವದಾದರೂ ಹೇಗೆ ? ಆದ್ದರಿಂದ ಭೋಜನಾಹ್ವಾನವನ್ನು ಗೌರವಿಸಲೇಬೇಕು. ಅನಂತರ ಪ್ರಾಯಶ್ಚಿತ್ತರೂಪವಾಗಿ ಗಾಯತ್ರೀ ಜಪಾದಿಗಳನ್ನು ಮಾಡಬೇಕು. ಶ್ರುತಿಯಲ್ಲಿ ಹೀಗಿದೆ : ''ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನಂತು ಮಾಮಾಪಃ ಅಸತಾಂ ಚ ಪ್ರತಿಗ್ರಹಮ್ । ಸ್ವಾಹಾ ।'' ಎಂದು ಮಂತ್ರವನ್ನು ಹೇಳಿ ಜಲಪ್ರಾಶನಮಾಡಿ ಪರಾನ್ನಭೋಜನದ ದೋಷವನ್ನು ಪರಿಹರಿಸಿಕೊಳ್ಳಬೇಕು.

ಭೃಗುವಲ್ಲಿಯಲ್ಲಿ ಈಗ ಉಪಾಸನೆಗಳನ್ನು ಕುರಿತು ವಿಚಾರಮಾಡಲಾಗುತ್ತದೆ. ಈಗಾಗಲೆ ಕೆಲವು ಉಪಾಸನೆಗಳನ್ನು ಪ್ರಸ್ತಾಪಿಸಿದೆ. ಅವುಗಳನ್ನು **'ಮಾನುಷೀ'** ಎಂದು ಕರೆಯಲಾಗಿದೆ. ಉದಾಹರಣೆಗೆ ಅನ್ನೋಪಾಸನೆಯನ್ನು ನೋಡೋಣ. ಇದು ಎಲ್ಲರಿಗೂ ಸುಲಭವಾಗಿ ತಿಳಿಯುವಂಥದ್ದು. ಪ್ರಾಣಿಗಳು, ಮನುಷ್ಯರು- ಎಲ್ಲರೂ ಆಹಾರವನ್ನು ಸೇವಿಸುತ್ತಾರೆ. ಆದ್ದರಿಂದ ಅಂಥ ಆಹಾರವನ್ನೇ 'ಅನ್ನ'ವೆಂದು ಕರೆಯಲಾಗಿದೆ. ಈ ಅನ್ನವು ಬ್ರಹ್ಮವೆಂದು ಚಿಂತಿಸಬೇಕು- ಎಂದಾರಂಭಿಸಿ ಅತಿಥಿಗಳಾಗಿ ಬಂದವರಿಗೆ ಅನ್ನವನ್ನು ನೀಡಬೇಕು, ಅದಕ್ಕಾಗಿ ಹೆಚ್ಚಿನ ಅನ್ನವನ್ನು ಸಂಪಾದಿಸಬೇಕು- ಇತ್ಯಾದಿ ವಿವರಣೆಗಳನ್ನು ಕೊಡಲಾಗಿದೆ. ಈಗ ಇನ್ನೂ ಕೆಲವು ಮನುಷ್ಯರ ವ್ಯವಹಾರದಲ್ಲಿಯೇ ಹೊಂದಿಕೊಂಡಿರುವ ಉಪಾಸನೆಗಳನ್ನು ಪ್ರಸ್ತಾಪಿಸಲಾಗುವದು.

**'ಕ್ಷೇಮ ಇತಿ ವಾಚಿ'** ಎಂಬುದೊಂದು ಉಪಾಸನೆಯು. ಮನುಷ್ಯನು ವ್ಯವಹಾರಕಾಲಕ್ಕೆ ಹೇಗೂ ಮಾತುಗಳನ್ನು ಬಳಸುತ್ತಾನೆ. ಆ ಮಾತುಗಳಲ್ಲೆಲ್ಲ ಕ್ಷೇಮ- ಎಂಬ ದೃಷ್ಟಿಯನ್ನು ಮಾಡಬೇಕು. ಕ್ಷೇಮವೆಂದರೆ ನಾವು ಸಂಪಾದಿಸಿರುವ ಧನಕನಕ ಪಶುಪುತ್ರದಾರಾಕ್ಷೇತ್ರಾದಿಗಳನ್ನು ಕಳೆದುಕೊಳ್ಳದೆ ಚೆನ್ನಾಗಿ ಕಾಪಾಡಿಕೊಳ್ಳುವದು- ಎಂದರ್ಥ. ಇದು ನಾವು ಆಡುವ ಪ್ರಿಯ-ಹಿತವಾದ ಮಾತುಗಳಲ್ಲಿ ಅಡಗಿರುತ್ತದೆ. ಆದ್ದರಿಂದ ಯಾವಾಗಲೂ ಮಾತನಾಡುವಾಗ ಬೇರೊಬ್ಬರಿಗೆ ಮನನೋಯದಂತೆಯೂ, ಸತ್ಯವೂ ಪ್ರಿಯವೂ ಆಗಿರುವಂತೆಯೂ ಇರಬೇಕು. ಇದನ್ನು ಒಂದು ಉಪಾಸನೆ- ಎಂದೇ ತಿಳಿಯಬೇಕು. ಹೀಗೆ ಪ್ರಿಯಹಿತವಾದ ಮಾತುಗಳ ಪ್ರಯೋಗವು ಒಂದು ಉಪಾಸನೆಯಾಗಿಯೇ ಪರಿಗಣಿತವಾಗಿರುತ್ತದೆ. ಅನಂತರ ಮತ್ತೊಂದು ವಾಗುಪಾಸನೆಯು ಹೀಗಿದೆ. ಅದನ್ನೇ ಶ್ರುತಿಯು ''ಯೋಗಕ್ಷೇಮ ಇತಿ ಪ್ರಾಣಾಪಾನಯೋಃ'.' ಎಂದು ತಿಳಿಸುತ್ತಿದೆ. ಯೋಗವೆಂದರೆ ಪಡೆಯದೆ ಇದ್ದದ್ದನ್ನು ಹೊಸದಾಗಿ ಪಡೆಯುವದು. ಇದು ಜೀವನದಲ್ಲಿ ನಾನಾರೂಪವಾಗಿದೆ. ಹೇಗೆಂದರೆ: ಒಬ್ಬ ಸದ್ಗೃಹಸ್ಥನ ಮನೆಯಲ್ಲಿ ಸಂತಾನಾಭಿವೃದ್ಧಿಗಾಗಿ ಒಂದು ಗಂಡುಮಗು ಹುಟ್ಟಬಹುದು. ಅಥವಾ ಕನ್ಯಾದಾನಮಾಡಿ ಮಗಳ ಮಗುವನ್ನು ಪಡೆದು ಸಂತೋಷಿಸಬಹುದು ಇತ್ಯಾದಿ. ಇಂಥ ಸಂದರ್ಭಗಳನ್ನು **'ಯೋಗ'**ವೆನ್ನುತ್ತಾರೆ. ಯೋಗವೂ ಕ್ಷೇಮವೂ ನಮ್ಮ ಜೀವನದ ಉಸಿರಾಟದಲ್ಲಿವೆ- ಎಂದು ಭಾವಿಸಬೇಕು. ಆಗ ಜೀವನವು ಸಾರ್ಥಕವಾಗುತ್ತದೆ. ಹಾಗೂ ಬ್ರಹ್ಮವೇ ಯೋಗಕ್ಷೇಮಗಳ ರೂಪದಲ್ಲಿ ತನ್ನನ್ನು ಕಾಪಾಡುತ್ತಿದೆ- ಎಂದು ಭಾವಿಸಬೇಕು. ಹೇಗೂ ಉಸಿರಾಡುವದು ಜೀವನದಲ್ಲಿ ನಿರಂತರವಾಗಿ ನಡೆದೇ ಇದೆಯಷ್ಟೆ ! ಆ ಕ್ರಿಯೆಗಳನ್ನೇ ಯೋಗಕ್ಷೇಮವೆಂದು ಚಿಂತಿಸುವದೂ ಉಪಾಸನೆಯಾಗುತ್ತದೆ. ಇದರಂತೆಯೇ 'ಕರ್ಮೇತಿ

ಹಸ್ತಯೋಃ' 'ಗತಿರಿತಿ ಪಾದಯೋಃ' 'ವಿಮುಕ್ತರಿತಿ ಪಾಯೌ' ಎಂಬಿವುಗಳನ್ನೂ ಮಾನುಷಜೀವನದ ಕ್ರಿಯೆಗಳಲ್ಲಿ ದೈವೀಭಾವವನ್ನು ಅನುಸಂಧಾನಮಾಡಿಕೊಳ್ಳ ಬೇಕು. ಹೇಗೆಂದರೆ ; ನಾವು ಯಾವ ಕೆಲಸವನ್ನಾದರೂ ಕೈಗಳಿಂದಲೇ ಮಾಡುವೆವು. ಹಾಗೆ ಮಾಡುವಾಗ ಕೆಲಸವು ಯಾವದೇ ಆಗಿರಲಿ, ಇದು ಭಗವಂತನ ಸೇವೆ ಎಂದು ಅನುಸಂಧಾನಮಾಡುತ್ತಾ ಇರಬೇಕು. ಉದಾಹರಣೆಗೆ ಕಸವನ್ನು ಗುಡಿಸುವ ಕೆಲಸವೇ ಆಗಿರಲಿ- ಆ ಕಾಲಕ್ಕೆ ದೇವರನ್ನು ಸ್ಮರಿಸುತ್ತಾ ಮಾಡಿದರೆ ಅದು ಭಗವದಾರಾಧನೆಗೆ ಸಮಾನವಾಗಿರುವದು. ಇನ್ನು ನಡೆಯುತ್ತಿರುವಾಗ ದೇವರಿಗೆ ಮಾಡುವ ಪ್ರದಕ್ಷಿಣೆ- ಎಂದು ಭಾವಿಸಬೇಕು. ನಾವು ಲೌಕಿಕಕಾರ್ಯಗಳಿಗೇ ಓಡಾಡುತ್ತಿದ್ದರೂ ದೇವಾಲಯ ಗಳು ಗೋವುಗಳು, ಬ್ರಾಹ್ಮಣರು, ಮುತ್ತೈದೆಯರು, ಗುರುಹಿರಿಯರು- ಎದುರಾದರೆ ಪ್ರದಕ್ಷಿಣಾಕಾರವಾಗಿ ನಡೆದಲ್ಲಿ ಅದೇ ಉಪಾಸನೆಯಾಗುತ್ತದೆ. ಜೊತೆಗೆ ಮನಸ್ಸಿಗೂ ಭಕ್ತಿಭಾವನೆಯನ್ನು ತಂದುಕೊಳ್ಳಬೇಕು. ಹಾಗೆಯೇ ದೇಹದಿಂದ ವಾಯುವು ಹೊರ ಬಂದಾಗ ವಿಮುಕ್ತಿ- ಎಂಬ ಭಾವನೆಯನ್ನು ತಂದುಕೊಳ್ಳಬೇಕು. ಏಕೆಂದರೆ ವಿಮುಕ್ತಿಯು (ಬಿಡುಗಡೆ) ಸುಖವನ್ನು ನೀಡುತ್ತದೆ. ಪ್ರಯಾಣಕಾಲದಲ್ಲಿ ಜನಸಂದಣಿಯಿದ್ದಾಗ ವಾಹನಗಳಿಂದ ಇಳಿದ ಕೂಡಲೆ ಸಂತೋಷವುಂಟಾಗುತ್ತದೆ ಯಲ್ಲವೆ ? ಹಾಗೆಯೇ ದೇಹೇಂದ್ರಿಯವ್ಯಾಪಾರಗಳು ನಡೆಯುತ್ತಿರುವಾಗ ಅವು ಗಳಲ್ಲಿ ಅಡಚಣೆಯಾದಲ್ಲಿ ಹಿಂಸೆಯಾಗುತ್ತದೆ. ಬಿಡುಗಡೆಯಾದಲ್ಲಿ ಸುಖವಾಗುತ್ತದೆ. ಹೀಗೆ ನಮ್ಮ ಮನುಷ್ಯಜೀವನವನ್ನೆಲ್ಲ ಸಂಪೂರ್ಣವಾಗಿ ಸದ್ಭಾವನೆಗಳಿಂದ ಪರಿವರ್ತಿಸಿ ಕೊಂಡಾಗ ಬ್ರಹ್ಮೋಪಾಸನೆಯು ಸ್ವಭಾವವಾಗಿ ಬಿಡುವದು.

ಈಗ ಕೆಲವು ದೈವೀ-ಉಪಾಸನೆಗಳನ್ನು ಪ್ರಸ್ತಾಪಿಸಲಾಗುವದು. **'ತೃಪ್ತಿರಿತಿ ವೃಷ್ಟೌ'** ಎಂದು ಈ ಉಪಾಸನೆಗಳು ಪ್ರಾರಂಭವಾಗುವವು. ತೃಪ್ತಿ ಎಂಬುದು ನಮ್ಮ ಜೀವನದ ಸುಖದ ಮಜಲಾಗಿರುತ್ತದೆ. ಇದನ್ನು ಪ್ರತಿಯೊಬ್ಬನೂ ತನ್ನ ಮನಸ್ಸಿಗೆ ತಂದುಕೊಳ್ಳಬೇಕು. ಇದಕ್ಕೆ ಉಪಾಯವೇನೆಂದರೆ ನಮ್ಮ ನಮ್ಮ ಕರ್ಮಾನುಗುಣ ವಾಗಿ ಆಯಾ ಕಾಲಕ್ಕೆ ದೇವರು ಕೊಟ್ಟಿದ್ದರಲ್ಲಿ ತೃಪ್ತಿಪಟ್ಟುಕೊಳ್ಳಬೇಕು. ಉದಾಹರಣೆಗೆ ಕುಚೇಲ-ಕೃಷ್ಣರಿಬ್ಬರೂ ಬಾಲ್ಯಸ್ನೇಹಿತರು. ಒಬ್ಬರೇ ಗುರುಗಳ ಶಿಷ್ಯರು. ಆದರೆ ಕೃಷ್ಣನು ಐಶ್ವರ್ಯಸಂಪನ್ನನು. ಕುಚೇಲನು ಬಡವನು. ಆದರೂ ಸ್ವಾಭಿಮಾನಿ, ತನಗೆ ದೇವರು ಕೊಟ್ಟಷ್ಟರಲ್ಲಿಯೇ ತೃಪ್ತನಾಗಿದ್ದನು. ಮುಂದೆ ಕೃಷ್ಣಭಗವಂತನೊಡನೆ ಸಂಪರ್ಕವುಂಟಾದಾಗ ಅಷ್ಟೈಶ್ವರ್ಯಗಳೂ ದೊರಕಿದವು. ಆಗಲೂ ನಿರಹಂಕಾರಿ ಯಾಗಿಯೇ ಇದ್ದನು ; ಇದು ತೃಪ್ತಿಯ ಫಲವು. ಈ

ಆಧ್ಯಾತ್ಮಿಕಗುಣವನ್ನು ಉಪಾಸಕನು ಮಳೆಯ ಜಲಧಾರೆಯಲ್ಲಿ ಚಿಂತಿಸಬೇಕು. ಮಳೆಯು ಎಲ್ಲರಿಗೂ ತೃಪ್ತಿಯನ್ನುಂಟುಮಾಡುತ್ತದೆ. ಆದ್ದರಿಂದ ಹಾಗೆ ಚಿಂತಿಸಬೇಕು- ಎಂದು ಶ್ರುತಿಯು ತಿಳಿಸುತ್ತಿದೆ. ಅನಂತರ ವಿದ್ಯುತ್ (ಮಿಂಚು) ಆಧಿದೈವಿಕ ಪ್ರಪಂಚಕ್ಕೆ ಸೇರಿದೆ. ಮಿಂಚು ಬಂದ ಕೂಡಲೆ ಗುಡುಗು ಅಥವಾ ಸಿಡಿಲು ಉಂಟಾಗುತ್ತದೆ. ಸಿಡಿಲಿನ ಶಕ್ತಿ ಅಪಾರವಾದದ್ದು. ಆದ್ದರಿಂದ ಮಿಂಚನ್ನು ಬಲವೆಂಬ ಗುಣದಿಂದ ಚಿಂತಿಸಬೇಕು. ಹಾಗೆಯೇ ಪಶುಗಳು- ಎಂದರೆ ದನಕರುಗಳೇ ಮುಂತಾದ ಪಶುಸಂಪತ್ತನ್ನು ಯಶಸ್ಸು- ಎಂಬ ಗುಣದಿಂದ ಚಿಂತಿಸಬೇಕು. ಏಕೆಂದರೆ ಲೋಕದಲ್ಲಿ ಭೂಮಿ, ಮನೆ, ದನಕರುಗಳು- ಮುಂತಾದ ಐಶ್ವರ್ಯವುಳ್ಳವರನ್ನು ಯಶೋವಂತರೆಂದು ಕರೆಯುತ್ತಾರೆ, ಅಥವಾ ಶ್ರೀಮಂತರೆಂದು ಕರೆಯುತ್ತಾರೆ. ಆದ್ದರಿಂದ ಪಶುಗಳನ್ನು ಯಶಸ್ಸೆಂದು ಚಿಂತಿಸಬೇಕು. ಹಾಗೆಯೇ ನಕ್ಷತ್ರಗಳನ್ನು ಜ್ಯೋತಿ- ಎಂದು ಚಿಂತಿಸಬೇಕು. ಏಕೆಂದರೆ ಅವು ಸ್ವಯಂ ಪ್ರಕಾಶವುಳ್ಳ ಆಧಿದೈವಿಕವಸ್ತುಗಳಾಗಿರುತ್ತವೆ. ಹೀಗೆ ದೈವೀ- ಉಪಾಸನೆಗಳನ್ನು ತಿಳಿಸಿದ್ದಾಗಿದೆ.

ಈಗ ಮಾನವರಲ್ಲಿ ಪೂಜ್ಯನಾದ ವೈದಿಕಕರ್ಮಾನುಷ್ಠಾನತತ್ಪರನೂ ಪುತ್ರ ಪೌತ್ರವಂತನೂ ಆದ ಗೃಹಸ್ಥನನ್ನು ಉದಾಹರಿಸಿ ಆ ಗೃಹಸ್ಥನ ಸುಖವೆಲ್ಲವೂ ಅವನ ಪತ್ನೀಪುತ್ರರುಗಳಲ್ಲಿರುತ್ತದೆಯಾದ್ದರಿಂದ ಅಂಥ ಸಭ್ಯಗೃಹಸ್ಥನಲ್ಲಿ ಬ್ರಹ್ಮವು ಆನಂದ ರೂಪದಲ್ಲಿರುತ್ತದೆ- ಎಂದು ತಿಳಿಸುತ್ತಾರೆ. ಹೇಗೆಂದರೆ ಸನಾತನಧರ್ಮದ ಚೌಕಟ್ಟಿನಂತೆ ಬ್ರಾಹ್ಮಣಕುಲದಲ್ಲಿ ಹುಟ್ಟಿದವನು ಬ್ರಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನವನ್ನು ಮಾಡಿ ಸಕಾಲದಲ್ಲಿ ವಿವಾಹಮಾಡಿಕೊಂಡು ಸಹಧರ್ಮಚಾರಿಣಿಯೊಡನೆ ಕೂಡಿ ವೈದಿಕಕರ್ಮಗಳನ್ನು ಅನುಷ್ಠಾನಮಾಡುತ್ತಿದ್ದು ಕಾಲಕ್ರಮದಲ್ಲಿ ಗಂಡು ಮಕ್ಕಳನ್ನು ಪಡೆದು ಆ ಗಂಡುಮಕ್ಕಳಿಗೂ ಆಯಾ ಕಾಲದಲ್ಲಿ ಶುಭಸಂಸ್ಕಾರಗಳನ್ನು ನೆರವೇರಿಸಿ ಮೊಮ್ಮಕ್ಕಳನ್ನೂ ಪಡೆದಾಗ, ಪಿತೃಋಣದಿಂದ ಮುಕ್ತನಾಗುತ್ತಾನೆ. ಇದೆಲ್ಲಕ್ಕೂ ಸ್ತ್ರೀಪುರುಷರ ಸಂಯೋಗಕಾಲಕ್ಕೆ ದೊರಕುವ ಆನಂದವೇ ಮೂಲವಾಗಿದ್ದು ಅದು ಪತಿಪತ್ನಿಯರ ದ್ವಂದ್ವದಿಂದ ಉಂಟಾಗುವದರಿಂದ ಉಪಾಸನಾರೂಪವಾದ ಪವಿತ್ರಕರ್ಮವೆಂದು ಭಾವಿಸಿ ಅದನ್ನು ಬ್ರಹ್ಮವೆಂದೇ ಉಪಾಸನೆಮಾಡಬೇಕೆಂದು ತಿಳಿಸಿದೆ. ಹೀಗೆ ಜಗತ್ತೆಲ್ಲವೂ ಬ್ರಹ್ಮದ ಸೃಷ್ಟಿಯೇ ಆಗಿರುವದರಿಂದ ಕೆಲವು ವಿಶಿಷ್ಟೋಪಾಧಿಗಳಲ್ಲಿ ಬ್ರಹ್ಮೋಪಾಸನೆಯನ್ನು ಹೇಳಿರುತ್ತದೆ.

ಈಗ ಮತ್ತೆ ಕೆಲವು ಉಪಾಸನೆಗಳನ್ನು ಪ್ರಸ್ತಾಪಮಾಡಿ ಈ ಬ್ರಹ್ಮವಿದ್ಯೆಯನ್ನು ಉಪಸಂಹಾರಮಾಡಲಾಗುವದು. ಇಡಿಯ ಸೃಷ್ಟಿಯಲ್ಲಿ ಪಂಚಮಹಾಭೂತಗಳು,

ಅವುಗಳಲ್ಲಿ ಆಕಾಶವು ಎಲ್ಲಕ್ಕಿಂತ ದೊಡ್ಡದು. ಪ್ರಾಣಿಗಳೆಲ್ಲ ಬದುಕಿರುವದೇ ಆಕಾಶ ದಲ್ಲಿ ; ಏಕೆಂದರೆ ಅಲ್ಲಿಯೇ ವಾಯುಸಂಚಾರವಿರುತ್ತದೆ. ಆದ್ದರಿಂದ ಸರ್ವವೂ ಆಕಾಶದಲ್ಲಿ ಅಡಗಿರುತ್ತದೆ. ಆ ಆಕಾಶವು ಬ್ರಹ್ಮದಲ್ಲಿರುತ್ತದೆ. ಆದ್ದರಿಂದ ಎಲ್ಲವೂ ಆಕಾಶರೂಪವಾದ ಬ್ರಹ್ಮದಲ್ಲಿದೆ- ಎಂದು ಉಪಾಸನೆಮಾಡಬೇಕು ಮತ್ತು ಆ ಬ್ರಹ್ಮವನ್ನು ಪ್ರತಿಷ್ಠಾ ಎಂಬ ಗುಣವಿಶೇಷದಿಂದ ಉಪಾಸನೆಮಾಡಬೇಕು. ಹೀಗೆ ಉಪಾಸನೆಮಾಡಿದವನು ಪ್ರತಿಷ್ಠಾವಂತನಾಗುತ್ತಾನೆ- ಎಂದರೆ ಸಮಾಜದಲ್ಲಿ ಗಣ್ಯವ್ಯಕ್ತಿಯಾಗುತ್ತಾನೆ. ಈಗಿನ ಕಾಲದ ವ್ಯವಹಾರದಂತೆ ಪ್ರಧಾನಮಂತ್ರಿಯೊ, ರಾಷ್ಟ್ರಪತಿಯೊ- ಆಗುತ್ತಾನೆ- ಎನ್ನಬಹುದಾಗಿದೆ. ಇನ್ನು ಬ್ರಹ್ಮವನ್ನು **'ಮಹಃ'** ಎಂದು ಮಹತ್ತ್ವಗುಣವಿಶಿಷ್ಟವಾದದ್ದು ಎಂದು ಉಪಾಸನೆಮಾಡಬೇಕು. ಅಂಥವನು ಮಹಾನ್ (ಹಿರಿಯನೂ ಪೂಜ್ಯನೂ) ಆಗುತ್ತಾನೆ. ಈ ಮಹತ್ತ್ವವು ಎಲ್ಲಾ ಕ್ಷೇತ್ರ ಗಳಲ್ಲಿಯೂ ಅಂಥವನಿಗೆ ಉಂಟಾಗುತ್ತದೆ. ಮತ್ತು ಬ್ರಹ್ಮವನ್ನು **ಮನಃ** (ಸಮಷ್ಟಿ ಮನಸ್ಸು) ಎಂದು ಉಪಾಸನೆಮಾಡಬೇಕು. ಅದರ ಫಲವಾಗಿ ಮಾನವಂತ ನಾಗುತ್ತಾನೆ- ಎಂದರೆ ಎಲ್ಲರಿಂದಲೂ ಗೌರವಿಸಲ್ಪಡುತ್ತಾನೆ. ಈಗಿನ ಕಾಲದಲ್ಲಿಯೂ ಈ ಗೌರವಪ್ರಶಸ್ತಿಗಳ ಪ್ರದಾನ- ಸಮಾರಂಭಗಳು ನಡೆದೇ ಇವೆ. ಇವಕ್ಕೆಲ್ಲ ಆಧಾರವು ಬ್ರಹ್ಮವೇ ಆಗಿದೆ.

ಇನ್ನು ಬ್ರಹ್ಮವನ್ನು 'ನಮ' ಎಂದೂ ಉಪಾಸನೆಮಾಡಬೇಕು. ಇಂಥ ಉಪಾಸಕನಿಗೆ ಕಾಮಗಳೆಲ್ಲವೂ ತಲೆಬಾಗುತ್ತವೆ. ಇಂಥವನು ಕಾಮಗಳನ್ನು ಬಯಸಿ ಹುಡುಕಿಕೊಂಡು ಹೋಗಬೇಕಾದದ್ದಿಲ್ಲ. ಅವುಗಳೇ ಇವನನ್ನು ಹಿಂಬಾಲಿಸಿ ಬರು ತ್ತವೆ. ಹೀಗೆ ಬ್ರಹ್ಮವನ್ನು ಕುರಿತ ಕೆಲವು ಉಪಾಸನೆಗಳನ್ನೂ ಆಯಾ ಉಪಾಸನಾಫಲ ಗಳನ್ನೂ ಹೇಳಿದ ಅನಂತರ ಈ ಉಪಾಸನಾವಿದ್ಯೆಯನ್ನು ಉಪಸಂಹಾರಮಾಡಲು ಕಡೆಯದಾಗಿ ಆ ಬ್ರಹ್ಮವನ್ನು ಯಥಾವತ್ತಾಗಿ 'ಬ್ರಹ್ಮ'ವೆಂದೇ ಉಪಾಸನೆಮಾಡಬೇಕು- ಎಂದು ತಿಳಿಸುತ್ತಾರೆ. ಇದರ ಫಲವೇನೆಂದರೆ ಬ್ರಹ್ಮವೇ ತಾನಾಗಿಬಿಡುವದು- ಎಂದರೆ ಬ್ರಹ್ಮದಲ್ಲಿ ಒಂದಾಗಿಬಿಡುವದು. ಇದು ಉಪಾಸನೆಯೆನಿಸಿದರೂ ಫಲದಲ್ಲಿ ಬ್ರಹ್ಮವೇ ಆಗುವದರಿಂದ ಮೋಕ್ಷವೇ ದೊರಕುತ್ತದೆ. ಇದರ ಫಲವಾಗಿ ಇವನಿಗೆ ಶತ್ರುಗಳಾರೂ ಇರುವದಿಲ್ಲ. ಒಂದು ವೇಳೆ ಹಿಂದೆ ಶತ್ರುಗಳಾಗಿದ್ದವರೂ ಶತ್ರುತ್ವವನ್ನು ಕಳೆದು ಕೊಳ್ಳುತ್ತಾರೆ. ಹಾಗೆಯೇ ಕುಟುಂಬದಲ್ಲಿ ಉಳಿದ ಭ್ರಾತೃಗಳೂ ತಮ್ಮ ಭ್ರಾತೃತ್ವವನ್ನು ಕಳೆದುಕೊಳ್ಳುತ್ತಾರೆ. ಹೇಗೆಂದರೆ ಬ್ರಹ್ಮದಲ್ಲಿ ಒಂದಾದ ಸಾಧಕನಿಗೆ ದ್ವೈತಪ್ರಪಂಚದ ಸಂಪರ್ಕವೇ ಇರುವದಿಲ್ಲ- ಎಂದಭಿಪ್ರಾಯ.

## ಜ್ಞಾನದಿಂದ ಪರಮಪುರುಷಾರ್ಥ

ಈಗ ತೈತ್ತಿರೀಯೋಪನಿಷತ್ತನ್ನು ಉಪಸಂಹಾರಮಾಡಲಾಗುವದು. ಈವರೆಗೆ ಬ್ರಹ್ಮದ ಉಪಾಸನೆಗಳನ್ನೂ ಹೇಳಿದ್ದಾಯಿತು. ಹಿಂದೆ ಬ್ರಹ್ಮದಜ್ಞಾನವನ್ನು ತಿಳಿಸ ಲಾಗಿದೆ. ಹಾಗಾದರೆ 'ಜ್ಞೇಯಬ್ರಹ್ಮ' 'ಉಪಾಸ್ಯಬ್ರಹ್ಮ' ಎಂದು ಎರಡು ಬ್ರಹ್ಮ ಗಳಿವೆಯೆ ? ಎಂದು ಶಂಕಿಸಬಾರದು. ಬ್ರಹ್ಮವೆಂಬುದು ನಿತ್ಯಶುದ್ಧಬುದ್ಧಮುಕ್ತವಾದ ಸರ್ವಜ್ಞವೂ ಸರ್ವಶಕ್ತವೂ ಆದ ವಸ್ತುವು. ಅದೇ ಎಲ್ಲಾ ಪ್ರಾಣಿಗಳ ಆತ್ಮನೂ ಆಗಿರುತ್ತದೆ. ಹೀಗೆಂತ ಯಾವನು ಅರಿತುಕೊಳ್ಳುವನೋ ಅವನ ಆತ್ಮನೂ ಬ್ರಹ್ಮವೇ ಆಗಿದೆ. ಇದರಿಂದ ತಿಳಿದುಬರುವದೇನೆಂದರೆ ಬ್ರಹ್ಮವು ಯಾವಾಗಲೂ ಎಂದೆಂದಿಗೂ ಸಂಸಾರಿಯಲ್ಲ ; ಸಂಸಾರವು ಅದರ ಸ್ವಭಾವವಲ್ಲ. ಆದ್ದರಿಂದ ಯಾವನು ತನ್ನ ಆತ್ಮನೂ ಅಸಂಸಾರಿಯಾದ ಬ್ರಹ್ಮವೇ ಎಂದು ತಿಳಿದುಕೊಳ್ಳುವನೋ ಅವನೂ ಕೃತಾರ್ಥನಾಗುತ್ತಾನೆ. ಅಂಥ ಜ್ಞಾನಿಯು ಬ್ರಹ್ಮವನ್ನು ತಿಳಿದುಕೊಂಡಾಗ ಅವನ ತಿಳಿವಳಿಕೆಯು ಹೀಗಿರುತ್ತದೆ. **''ಈ ಮುಂಚೆಯೂ ನಾನು ಸಂಸಾರಿಯಾಗಿರಲಿಲ್ಲ. ಈಗಲೂ ಅಲ್ಲ ; ಮುಂದೆಯೂ ಅಲ್ಲ''** ಹೀಗೆಂದೇ ನಿಶ್ಚಯಜ್ಞಾನವುಳ್ಳವನಾಗುತ್ತಾನೆ. ಇದೇ ಬ್ರಹ್ಮವಿದ್ಯೆಯ ಪರಮಫಲವಾದ ಮೋಕ್ಷವು. ಆದರೆ ಇದು ಹೊಸದಾಗಿ ಉಂಟಾಗತಕ್ಕದ್ದಲ್ಲ. ಸ್ವರೂಪವೇ ಎಂಬಿದು ಈವರೆಗಿನ ಬ್ರಹ್ಮವಿದ್ಯೋಪದೇಶದ ಸಾರವಾಗಿದೆ.

ಇಲ್ಲಿ ಆಕ್ಷೇಪಕನು ಕೇಳುತ್ತಾನೇನೆಂದರೆ : ಜೀವಾತ್ಮನು ಸಂಸಾರಿಯಾಗಿರು ವದು ಲೋಕಾನುಭವದಲ್ಲಿ ಕಂಡುಬರುತ್ತಿದೆಯಾಗಿ ಅವನು ಸಂಸಾರಿಯಲ್ಲ- ಎಂದು ಹೇಳುವದಾದರೂ ಹೇಗಾದೀತು ? ಇದಕ್ಕೆ ಉತ್ತರವು ಹೀಗಿದೆ : ''ಉಪಲಬ್ಧುಃ ಅನುಪಲಭ್ಯತ್ವಾತ್'' (ಶಾಂಕರಭಾಷ್ಯ ೩-೧೦) ಇದರ ಅಭಿಪ್ರಾಯವು ಹೀಗಿದೆ : ಉಪಲಬ್ಧಾ- ಎಂದರೆ ಅರಿಯುವವನು. ಇವನು ಯಾವಾಗಲೂ ಅರಿಯಲ್ಪಡುವವ ನಾಗಲಾರನು. ಹೇಗೆಂದರೆ ಅನ್ನವನ್ನು ಊಟಮಾಡುವವನು ತಾನೇ ಅನ್ನವಾಗಲಾರ ನಷ್ಟೆ ! ಹಾಗೆಂದು ತಿಳಿಯಬೇಕು. ಈಗ ಆಕ್ಷೇಪಕನು ಹೇಳುತ್ತಾನೇನೆಂದರೆ : ಆತ್ಮನು ಯಾವಾಗಲೂ ಸಂಸಾರವೆಂಬ ಧರ್ಮದಿಂದ ಕೂಡಿಯೇ ಇರುತ್ತಾನಲ್ಲ ? ಎಂದರೆ : ಹಾಗಲ್ಲ, ಕೇಳಿರಿ. ಧರ್ಮಗಳು ಯಾವಾಗಲೂ ಧರ್ಮಿಯನ್ನು ಬಿಟ್ಟಿರಲಾರವು. ಸಂಸಾರವು ಆತ್ಮನ ಧರ್ಮವೆಂದಾದರೆ ಅದು ಎಂದಿಗೂ ಆತ್ಮನನ್ನು ಬಿಟ್ಟಿರಲಾರದು. ಆದರೆ ಅದು ಸುಷುಪ್ತಿಯಲ್ಲಿ ಇರುವದೇ ಇಲ್ಲ ; ಮತ್ತು ಅರಿಯಲ್ಪಡುವ ವಸ್ತುವು ಯಾವಾಗಲೂ ಅರಿಯುವಾತನ ಧರ್ಮವಾಗಿರಲಾರದು. ಈಗ ಪೂರ್ವಪಕ್ಷಿಯು

ಹೇಳುವದೇನೆಂದರೆ : ಕಪಿಲರು, ಕಣಾದರೇ ಮುಂತಾದವರು ಕರ್ತೃತ್ವಭೋಕ್ತೃತ್ವಾದಿಗಳು ಆತ್ಮನ ಧರ್ಮವೇ ಎಂದು ಅಂಗೀಕರಿಸಿರುತ್ತಾರಲ್ಲ ? ಇದಕ್ಕೆ ಉತ್ತರವೇನೆಂದರೆ: ಇರಬಹುದು. ಆದರೆ ಆ ನಂಬಿಕೆಗೆ ಏನೂ ಆಧಾರವಿಲ್ಲವಾದ್ದರಿಂದಲೂ ಅವರು ವೇದವಿರುದ್ಧವಾಗಿ ವಾದಮಾಡುವದರಿಂದಲೂ ಅದು ಬುಡವಿಲ್ಲದ ಸಿದ್ಧಾಂತವಾಗಿದ್ದು ಭ್ರಾಂತಿಯೆನಿಸಿರುತ್ತದೆ. ಆದ್ದರಿಂದ ವಿಚಾರಮಾಡಲಾಗಿ ಶ್ರುತಿ, ಯುಕ್ತಿಗಳಿಂದ ಆತ್ಮನು ಏಕನೆಂದೂ ಅಸಂಸಾರಿಯೆಂದೂ ಸಿದ್ಧವಾಗುತ್ತದೆ.

ಈಗ ತೈತ್ತಿರೀಯೋಪನಿಷತ್ತನ್ನು ಉಪಸಂಹಾರಮಾಡಲಾಗುವದು. ಹಿಂದಿನ ಆನಂದವಲ್ಲಿಯಲ್ಲಿ ವಿವರಿಸಿರುವಂತೆ ಅನ್ನಮಯಾದಿಪಂಚಕೋಶಗಳನ್ನು ಯಾವ ಕ್ಲೇಶಾದಿಗಳಾಗಲಿ, ದೇಹೇಂದ್ರಿಯಪ್ರಾಣಮನೋಬುದ್ಧ್ಯಾದಿ ಉಪಾಧಿಗಳಾಗಲಿ ಇಲ್ಲದ ಕೇವಲ ಸತ್ಯಜ್ಞಾನಾನಂದರೂಪವಾದ, ಅದ್ವಿತೀಯನೂ ಅಸಂಸಾರಿಯೂ ಆದ ಆತ್ಮನಲ್ಲಿಯೇ ಕಲ್ಪಿಸಿ ಶ್ರುತಿಯು ಉಪದೇಶಮಾಡಿದ ಅನಂತರ ನಿರ್ವಿಶೇಷನಾದ ಆತ್ಮನೇ ಪರಮಾರ್ಥವೆಂದು ತಿಳಿಸಿರುತ್ತದೆ. ಈ ಪ್ರಕ್ರಿಯೆಯನ್ನು ಪಂಚಕೋಶವಿವೇಕಪ್ರಕ್ರಿಯೆ- ಎಂದು ವೇದಾಂತಿಗಳು ಕರೆಯುತ್ತಾರೆ. ಯಾವ ಪ್ರಕ್ರಿಯೆಯೇ ಆಗಲಿ, ಅದು ಬ್ರಹ್ಮವನ್ನು ತಿಳಿಸಲು ಉಪಾಯಮಾತ್ರವಾದೀತೇ ಹೊರತು ಬ್ರಹ್ಮಸ್ವರೂಪದಲ್ಲಿ ಯಾವ ವಿಕಾರವನ್ನೂ ಉಂಟುಮಾಡಲಾರದು. ಶ್ರೀಶಂಕರಾಚಾರ್ಯರು ಒಂದು ಉದಾಹರಣೆಯನ್ನು ಹೀಗೆ ಕೊಡುತ್ತಾರೆ. ಗಣಿತಶಾಸ್ತ್ರವನ್ನು ಬೋಧಿಸುವಾಗ ಒಂದು - ಎಂಬ ಸಂಖ್ಯೆಯನ್ನು ಮಕ್ಕಳಿಗೆ ಪರಿಚಯಮಾಡಿಕೊಡಲು ಕನ್ನಡ ಅಂಕೆಯನ್ನು ೧(ಒಂದು) ಎಂದು ತಿಳಿಸಲು ಅರ್ಧಚಂದ್ರಾಕಾರದ ಗೆರೆಯನ್ನು ಬಳಸುತ್ತಾರೆ. ಅದೇ ಸಂಖ್ಯೆಯನ್ನು ಇಂಗ್ಲಿಷ್‌ನವರು (1) ಒಂದು ಎಂದು ಒಂದು ಉದ್ದನೆಯ ಗೀಟನಿಂದ ತೋರಿಸುತ್ತಾರೆ. ಹೀಗೆ ಒಂದರಿಂದ ಒಂಭತ್ತರವರೆಗಿನ ಅಂಕೆಗಳನ್ನು ಪರಿಚಯಮಾಡಿಕೊಡಲು ಭಿನ್ನಭಿನ್ನಾಕಾರದ ರೇಖೆಗಳನ್ನು ಬಳಸುತ್ತಾರೆ. ಆದರೆ ಆ ಯಾವಗೆರೆಗಳೂ ಒಂದೂ ಅಲ್ಲ. ಎರಡೂ ಅಲ್ಲ. ಏಕೆಂದರೆ ಆ ಗುರುತುಗಳು ಸಂಕೇತಮಾತ್ರವಾಗಿವೆ. **ನಿಜವಾದ ಸಂಖ್ಯೆಗಳು ನಮ್ಮ ಬುದ್ಧಿಯಲ್ಲಿ ಮೂಡುವ ಪ್ರತ್ಯಯಗಳ ರೂಪವಾಗಿರುತ್ತವೆ.** ಆದರೆ ಹೊರಗಿನ ಗುರುತುಗಳನ್ನು ನಾವು ತಿರಸ್ಕರಿಸುವಂತಿಲ್ಲ. ಏಕೆಂದರೆ ಬೇರೊಬ್ಬರಿಗೆ ಗಣಿತವನ್ನು ಬೋಧಿಸಲು ಆ ಗುರುತು ಗಳೇ ಉಪಾಯವಾಗಿರುತ್ತವೆ. ಹೀಗೆಯೇ ವೇದಾಂತಶಾಸ್ತ್ರದಲ್ಲಿಯೂ ಶ್ರುತಿಯು ಅನ್ನಮಯಾದಿಕೋಶಗಳನ್ನು ಕಲ್ಪಿಸಿ ಸೂಕ್ಷ್ಮವಾಗಿ ಹೋದಂತೆಲ್ಲ ಆಯಾ ಆತ್ಮರುಗಳನ್ನು ಕೋಶಗಳೆಂದೇ ತಿಳಿಸುತ್ತಾ ಕಡೆಗೆ ಪಂಚಕೋಶಾತೀತನೂ ನಿರ್ವಿಶೇಷನೂ ಪ್ರತ್ಯಗಾತ್ಮನೂ ಆದ ಪರಬ್ರಹ್ಮವನ್ನೇ ಜಿಜ್ಞಾಸುವಿನ ನಿಜಸ್ವರೂಪವೆಂದು

ತಿಳಿಸಿ ತಾನೂ ಶಾಂತವಾಗಿಬಿಡುತ್ತದೆ. ಇದೇ ಬ್ರಹ್ಮಜ್ಞಾನದ ಕೊನೆಯ ಮೆಟ್ಟಿಲಾಗಿರುತ್ತದೆ. ಇಲ್ಲಿಂದ ಮುಂದಕ್ಕೆ ವ್ಯವಹಾರವೇನೂ ಇರುವದಿಲ್ಲ.

ಈಗ ಬ್ರಹ್ಮಜ್ಞಾನಿಯಾದವನು ಪ್ರಪಂಚವ್ಯವಹಾರದ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾನೆ ? ಜನರಿಗೆ ಹೇಗೆ ಕಂಡುಬರುತ್ತಾನೆ ? ಎಂಬುದನ್ನು ತಿಳಿಸಲಾಗುವದು. ಬ್ರಹ್ಮಜ್ಞಾನಿಯಾದ ಮಾತ್ರಕ್ಕೆ ಅವನ ಶರೀರವೇನೂ ಬಿದ್ದುಹೋಗುವದಿಲ್ಲ. ಹಾಗೆ ಬಿದ್ದುಹೋಗುವದಾಗಿದ್ದರೆ ಯಾರೂ ಬ್ರಹ್ಮಜ್ಞಾನಿಗಳಾಗಲು ಇಷ್ಟಪಡುತ್ತಲೇ ಇರಲಿಲ್ಲ. ಆದ್ದರಿಂದ ಜ್ಞಾನಿಯಾಗುವದರಿಂದ ಯಾವ ಭಯವೂ ಇಲ್ಲ. ಅದಕ್ಕೆ ಬದಲಾಗಿ, ಇನ್ನೂ ಆನಂದದಿಂದ ವ್ಯವಹಾರಮಾಡಿಕೊಂಡು ಉಳಿದವರಿಗೂ ಆದರ್ಶನಾಗಿ ಇರಬಹುದಾಗಿದೆ. ಶ್ರುತಿಯು ಈಗ ಜ್ಞಾನಿಯಾದವನು ತನ್ನ ಆನಂದವನ್ನು ಹೊರಪಡಿಸಲು ಗಾನಮಾಡುವ ಒಂದು ಸಾಮವನ್ನು ಪ್ರಸ್ತಾಪಮಾಡುತ್ತಿದೆ. ಅದು ಹೀಗಿದೆ :-

**''ಏತತ್ ಸಾಮ ಗಾಯನ್ನಾಸ್ತೇ........ ಸುವರ್ನ ಜ್ಯೋತೀಃ'' ॥೧೦॥**

ಅಹೋ - ಎಂಬರ್ಥದಲ್ಲಿ ಶ್ರುತಿಯಲ್ಲಿ ''ಹಾಽವು'' ಎಂದಿರುತ್ತದೆ. ಆಶ್ಚರ್ಯವನ್ನು ಸೂಚಿಸುವ ಮಾತು ಅದು. ಜ್ಞಾನಿಯ ಮುಂದಿನ ಉದ್ಗಾರವು ಹೀಗೆ ಇದೆ. ''ನಾನು ಅನ್ನವು ; ನಾನು ಅನ್ನಾದನು''. ಜ್ಞಾನಿಯ ದೃಷ್ಟಿಯಲ್ಲಿ ತಿನ್ನುವವನೂ ಬ್ರಹ್ಮವೇ ; ತಿನ್ನಲ್ಪಡತಕ್ಕ ಅನ್ನವೂ ಬ್ರಹ್ಮವೇ- ಎಂದರ್ಥ. ಇದರ ಸಮನ್ವಯವು ಹೇಗೆಂದರೆ ಒಂದು ಮಣ್ಣಿನ ಗಣಪತಿಯನ್ನು ತೆಗೆದುಕೊಳ್ಳಿರಿ. ಅದರಲ್ಲಿ ಗಣಪತಿ, ಅವನ ಕೈಯ್ಯಲ್ಲಿ ಕಡುಬು, ಹೊಟ್ಟೆಯಲ್ಲಿ ಸರ್ಪ, ಕಾಲಿನ ಬಳಿಯಲ್ಲಿ ಇಲಿ- ಎಲ್ಲವೂ ಇವೆ. ಆದರೆ ಮಣ್ಣಿನ ದೃಷ್ಟಿಯಿಂದ ನೋಡಿದರೆ, ಹಾವೂ ಮಣ್ಣೇ ಕಡುಬು ಇತ್ಯಾದಿಗಳೂ ಮಣ್ಣೇ ಅಲ್ಲವೆ ? ಇಡಿಯ ಗಣಪತಿಯೇ ಮಣ್ಣಿನದಾಗಿರುವಾಗ ನಿಜವು ಮಣ್ಣೇ ಸರಿ. ಆದರೆ ವ್ಯವಹಾರದೃಷ್ಟಿಯಿಂದ ಹಾವು ಬೇರೆ, ಕಡುಬು ಬೇರೆ- ಇತ್ಯಾದಿ. ಇದರಂತೆಯೇ ಜ್ಞಾನಿಯ ದೃಷ್ಟಿಯಲ್ಲಿ ಎಲ್ಲವೂ ಬ್ರಹ್ಮವೇ. ತಿನ್ನುವವನು, ತಿನ್ನಲ್ಪಡತಕ್ಕದ್ದು- ಎಲ್ಲವೂ ತಾನೇ ; ಅಥವಾ ತಾನು ಎಂಬಿದೇ ಬ್ರಹ್ಮವಾಗಿದ್ದುಕೊಂಡು ಎಲ್ಲಾ ವ್ಯವಹಾರವನ್ನೂ ತನ್ನಲ್ಲಿ ಅಡಕಮಾಡಿಕೊಂಡಿರುತ್ತದೆ- ಎಂದಭಿಪ್ರಾಯವು. ಹೀಗೆ ಜ್ಞಾನವು ಪ್ರಪಂಚದ ದೃಶ್ಯವನ್ನೆಲ್ಲ ತನ್ನಲ್ಲಿಯೇ ಅಡಕಮಾಡಿಕೊಂಡಿದೆ. ಆದ್ದರಿಂದಲೇ ಜ್ಞಾನಿಯ ದೃಷ್ಟಿಯಲ್ಲಿ ನಾನು ಮತ್ತೊಂದು ಎಂಬ ಭೇದವಿರುವದಿಲ್ಲ. ಇಂಥ ಏಕತ್ವಾನುಸಂಧಾನವು ಯಾವನಿಗೆ ಅಳವಟ್ಟಿರುವದೋ ಅವನೇ ಜ್ಞಾನಿಯೆಂದು ಶ್ರುತಿಯ ಅಭಿಪ್ರಾಯ.

ಈಗ ಇಂಥ ಪರಮಾರ್ಥತತ್ತ್ವಜ್ಞಾನಿಯ ಉದ್ಗಾರವನ್ನು ಮುಂದುವರೆಸಿ ವಿಚಾರಮಾಡೋಣ. ಅವನು ತನ್ನ ಆನಂದಯುಕ್ತವಾದ ಅದ್ವೈತಾನುಭವಸ್ಥಿತಿಯಿಂದ ಹೇಳುವದೇನೆಂದರೆ ನಾನೇ **'ಶ್ಲೋಕಕೃತ್'** ಆಗಿರುವೆನು. ಇಲ್ಲಿ ಶ್ಲೋಕವೆಂದರೆ ಅನ್ನವನ್ನು ತಿನ್ನುವವನು ಮತ್ತು ಅನ್ನವು ಎಂದರ್ಥ. ಈ ಎರಡೂ ಜ್ಞಾನಿಯ ದೃಷ್ಟಿಯಿಂದ ಆತ್ಮನಾಗಿದ್ದು ಅವನೇ ಎರಡೂ ಆಗಿರುತ್ತಾನೆ- ಎಂದರ್ಥ. ಇನ್ನು ಮುಂದಿನ ವಾಕ್ಯದ ಅಭಿಪ್ರಾಯವು ಹೀಗಿದೆ :- ''ನಾನು ಮೂರ್ತಾಮೂರ್ತರೂಪವಾದ ಜಗತ್ತಿನ ಪ್ರಥಮಜನು- ಎಂದರೆ ಮೂರ್ತಾಮೂರ್ತಪ್ರಪಂಚವು ತೋರಿಕೊಳ್ಳುವದಕ್ಕಿಂತ ಮುಂಚೆಯೇ ಹುಟ್ಟಿದವನು''- ಇದರ ಅಭಿಪ್ರಾಯವೇನೆಂದರೆ 'ನಾನು ಎಂಬುದೇ ಆತ್ಮನು ; ಇವನು ತನಗಿಂತ ಮುಂಚೆ ಯಾರು ಹುಟ್ಟಿರಬಹುದು ? ಎಂದು ಯೋಚಿಸುವದೂ ಸಾಧ್ಯವಿಲ್ಲ. ಏಕೆಂದರೆ ಬೇರೊಬ್ಬರ ಹುಟ್ಟನ್ನು ಆಲೋಚಿಸಬೇಕಾದರೆ ಆಲೋಚನೆ ಮಾಡುವವನು ಮೊದಲೇ ಇರಬೇಕು. ಆದ್ದರಿಂದ ಆತ್ಮನಿಗೆ ಹುಟ್ಟಿಲ್ಲ. ಇಂಥ ಆತ್ಮನೇ ನಾನು- ಎಂದು ಋಷಿಯು ಹಾಡಿರುತ್ತಾನೆ. ಮುಂದುವರೆದು ದೇವತೆಗಳಿಗಿಂತಲೂ ಹಿಂದೆಯೇ ಹುಟ್ಟಿರುವ ಹಿರಣ್ಯಗರ್ಭಬ್ರಹ್ಮನೂ ನಾನೇ ಎಂದು ಹಾಡಿರುತ್ತಾನೆ. ಮತ್ತು ಆ ನಾನು ಅಮೃತದ ನಾಭಿ ಎಂದರೆ ಪ್ರಧಾನವಾಗಿದ್ದೇನೆ- ಎಂದಿರುತ್ತಾನೆ. ಎಲ್ಲಾ ಪ್ರಾಣಿಗಳಿಗೂ ದೊರಕಬೇಕಾದ ಅಮೃತತ್ವವು ನನ್ನ ಅಧೀನದಲ್ಲಿರುತ್ತದೆ- ಎಂದರ್ಥ. ಇನ್ನು ಅನ್ನರೂಪನಾದ ನನ್ನನ್ನು ಅನ್ನವು ಬೇಕೆನ್ನುವವರಿಗೆ ಯಾವನು ಕೊಡುತ್ತಾನೋ, ಮತ್ತು ಬ್ರಹ್ಮವು ಅನ್ನರೂಪವಾಗಿರುವದೆಂದು ತಿಳಿಸುತ್ತಾನೋ ಅಂಥವನು ತನ್ನ ಸ್ವತ್ತನ್ನು ನಾಶವಾಗದಂತೆ ಕಾಪಾಡಿಕೊಳ್ಳುತ್ತಾನೆ. ಇನ್ನು ಯಾವನು ದೇಶಪಾತ್ರಗಳನ್ನು ಅರಿತು ಅನ್ನರೂಪಿಯಾದ ನನ್ನನ್ನು ದಾನಮಾಡದೆ ತಾನೇ ಭೋಗಿಸುವನೋ ಅಂಥವನನ್ನು ನಾನು ತಿನ್ನುವೆನು. ಅನ್ನದಾನವನ್ನು ಮಾಡದೆ ಇರುವವನನ್ನು ನಾನೇ ತಿನ್ನುವೆನು- ಎಂದರ್ಥ. ಆದರೆ ಈ ಎಲ್ಲಾ ವ್ಯವಹಾರಗಳೂ ಪ್ರಪಂಚದೃಷ್ಟಿಯಿಂದ ಹೇಳಿದ್ದು. ನಿಜವೇನೆಂದರೆ ಜ್ಞಾನಿಯು ವಿದ್ಯೆಯಿಂದ ಅಮೃತತ್ವವನ್ನು ಪಡೆದುಕೊಂಡಿರುವದರಿಂದ ಬ್ರಹ್ಮಭಾವವನ್ನು ಹೊಗಳುವದಕ್ಕಾಗಿ ಹೀಗೆ ಹೇಳಿದೆ. ಕಡೆಯದಾಗಿ ಜ್ಞಾನನಿಷ್ಠನು ಹೇಳುವ ಮಾತು ಏನೆಂದರೆ **''ಸುವರ್ನ ಜ್ಯೋತೀಃ''** ಎಂದರೆ ಸೂರ್ಯನಂತೆ ಸದಾಕಾಲವೂ ಬೆಳಗುತ್ತಿರುವ ಆತ್ಮಜ್ಯೋತಿಯೇ ನಾನು- ಎಂದು ಗಾನಮಾಡಿರುತ್ತಾನೆ.

ವಾಚಕರೆ, ಯಥಾಮತಿಯಾಗಿ ವಿವರಿಸಲ್ಪಟ್ಟ **''ತೈತ್ತಿರೀಯೋಪನ್ಯಾಸ ಮಂಜರಿ''** ಗ್ರಂಥವು ಇಲ್ಲಿಗೆ ಮುಕ್ತಾಯವಾಗಿದೆ.

ಹರಿಃ ಓಮ್

--------

# ತೈತ್ತಿರೀಯೋಪನಿಷತ್

- ಪ್ರಥಮಃ ಪ್ರಶ್ನಃ -

## ಶೀಕ್ಷಾವಲ್ಲೀ

### ಶಾಂತಿಪಾಠಃ

ಹರಿಃ ಓಮ್ ॥ ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಮ್ । ಅವತು ವಕ್ತಾರಮ್ । ॥ ೧ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ । ವರ್ಣಃಸ್ಸ್ವರಃ । ಮಾತ್ರಾ ಬಲಮ್ । ಸಾಮ ಸಂತಾನಃ । ಇತ್ಯುಕ್ತಃಶೀಕ್ಷಾಧ್ಯಾಯಃ । ॥ ೨ ॥

ಸಹ ನೌ ಯಶಃ । ಸಹ ನೌ ಬ್ರಹ್ಮವರ್ಚಸಮ್ । ಅಥಾತಸ್ಸಗ್ಂಹಿತಾಯಾ ಉಪನಿಷದಂ ವ್ಯಾಖ್ಯಾಸ್ಯಾಮಃ । ಪಂಚಸ್ವಧಿಕರಣೇಷು । ಅಧಿಲೋಕಮಧಿಜ್ಯೌತಿಷ -ಮಧಿವಿದ್ಯ-ಮಧಿಪ್ರಜ -ಮಧ್ಯಾತ್ಮಮ್ । ತಾ ಮಹಾಸಗ್ಂಹಿತಾ ಇತ್ಯಾಚಕ್ಷತೇ । ಅಥಾಧಿಲೋಕಮ್ । ಪೃಥಿವೀ ಪೂರ್ವರೂಪಮ್। ದ್ಯೌರುತ್ತರರೂಪಮ್ । ಆಕಾಶಸ್ಸಂಧಿಃ । ॥ ೩ ॥

ವಾಯುಸ್ಸಂಧಾನಮ್ । ಇತ್ಯಧಿಲೋಕಮ್ । ಅಥಾಧಿಜ್ಯೌತಿಷಮ್ । ಅಗ್ನಿಃ ಪೂರ್ವರೂಪಮ್ । ಆದಿತ್ಯ ಉತ್ತರರೂಪಮ್ । ಆಪಸ್ಸಂಧಿಃ । ವೈದ್ಯುತಸ್ಸಂಧಾನಮ್ । ಇತ್ಯಧಿಜ್ಯೌತಿಷಮ್ । ಅಥಾಧಿವಿದ್ಯಮ್। ಆಚಾರ್ಯಃ ಪೂರ್ವರೂಪಮ್ ॥ ೪ ॥

ಅಂತೇವಾಸ್ಯುತ್ತರರೂಪಮ್ । ವಿದ್ಯಾ ಸಂಧಿಃ । ಪ್ರವಚನಗ್ಂ ಸಂಧಾನಮ್ । ಇತ್ಯಧಿವಿದ್ಯಮ್ । ಅಥಾಧಿಪ್ರಜಮ್ । ಮಾತಾ ಪೂರ್ವರೂಪಮ್ । ಪಿತೋತ್ತರರೂಪಮ್ । ಪ್ರಜಾ ಸಂಧಿಃ । ಪ್ರಜನನಗ್ಂ ಸಂಧಾನಮ್ । ಇತ್ಯಧಿಪ್ರಜಮ್। ॥ ೫ ॥

ಅಥಾಧ್ಯಾತ್ಮಮ್ । ಅಧರಾ ಹನುಃ ಪೂರ್ವರೂಪಮ್ । ಉತ್ತರಾ ಹನುರುತ್ತರ ರೂಪಮ್ । ವಾಕ್ಸಂಧಿಃ । ಜಿಹ್ವಾ ಸಂಧಾನಮ್ । ಇತ್ಯಧ್ಯಾತ್ಮಮ್ । ಇತೀಮಾ ಮಹಾಸಗ್ಂಹಿತಾಃ । ಯ ಏವಮೇತಾ ಮಹಾಸಗ್ಂಹಿತಾ ವ್ಯಾಖ್ಯಾತಾವೇದ ।

ಸಂಧೀಯತೇ ಪ್ರಜಯಾ ಪಶುಭಿಃ । ಬ್ರಹ್ಮವರ್ಚಸೇನಾನ್ನಾದ್ಯೇನ ಸುವರ್ಗ್ಯೇಣ ಲೋಕೇನ ॥ ೬ ॥

ಯಶ್ಛಂದಸಾಮೃಷಭೋ ವಿಶ್ವರೂಪಃ । ಛಂದೋಭ್ಯೋಽಧ್ಯಮೃತಾತ್‌ಸಂಬಭೂವ । ಸ ಮೇಂದ್ರೋ ಮೇಧಯಾ ಸ್ಪೃಣೋತು । ಅಮೃತಸ್ಯ ದೇವ ಧಾರಣೋ ಭೂಯಾಸಮ್ । ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿ ವಿಶ್ರುವಮ್ । ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ । ಶ್ರುತಂ ಮೇ ಗೋಪಾಯ । ಆವಹಂತೀ ವಿತನ್ವಾನಾ । ॥ ೭ ॥

ಕುರ್ವಾಣಾ ಚೀರಮಾತ್ಮನಃ । ವಾಸಾಗ್‌ಂಸಿ ಮಮ ಗಾವಶ್ಚ । ಅನ್ನಪಾನೇ ಚ ಸರ್ವದಾ । ತತೋ ಮೇ ಶ್ರಿಯಮಾವಹ । ಲೋಮಶಾಂ ಪಶುಭಿಸ್ಸಹ ಸ್ವಾಹಾ । ಆ ಮಾಯಂತು ಬ್ರಹ್ಮಚಾರಿಣಸ್ಸ್ವಾಹಾ । ವಿ ಮಾಯಂತು ಬ್ರಹ್ಮಚಾರಿಣಸ್ಸ್ವಾಹಾ । ಪ್ರಮಾಯಂತು ಬ್ರಹ್ಮಚಾರಿಣಸ್ಸ್ವಾಹಾ । ದಮಾಯಂತು ಬ್ರಹ್ಮಚಾರಿಣಸ್ಸ್ವಾಹಾ । ಶಮಾಯಂತು ಬ್ರಹ್ಮಚಾರಿಣಸ್ಸ್ವಾಹಾ ॥ ೮ ॥

ಯಶೋ ಜನೇಽಸಾನಿ ಸ್ವಾಹಾ । ಶ್ರೇಯಾನ್, ವಸ್ಯಸೋಽಸಾನಿ ಸ್ವಾಹಾ । ತಂ ತ್ವಾ ಭಗ ಪ್ರವಿಶಾನಿ ಸ್ವಾಹಾ । ಸ ಮಾ ಭಗ ಪ್ರವಿಶ ಸ್ವಾಹಾ । ತಸ್ಮಿನ್ಸ್ಸಹಸ್ರಶಾಖೇ । ನಿ ಭಗಾಹಂ ತ್ವಯಿ ಮೃಜೇ ಸ್ವಾಹಾ । ಯಥಾಪಃ ಪ್ರವತಾಯಂತಿ । ಯಥಾ ಮಾಸಾ ಅಹರ್ಜರಮ್ । ಏವಂ ಮಾಂ ಬ್ರಹ್ಮಚಾರಿಣಃ । ಧಾತರಾಯಂತು ಸರ್ವತಸ್ಸ್ವಾಹಾ । ಪ್ರತಿವೇಶೋಽಸಿ ಪ್ರ ಮಾ ಭಾಹಿ ಪ್ರ ಮಾ ಪದ್ಯಸ್ವ ॥ ೯ ॥

ಭೂ-ರ್ಭುವ-ಸ್ಸುವ-ರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ । ತಾಸಾಮು ಹಸ್ಮೈತಾಂ ಚತುರ್ಥೀಮ್ । ಮಾಹಾಚಮಸ್ಯಃ ಪ್ರವೇದಯತೇ । ಮಹ ಇತಿ । ತದ್‌ಬ್ರಹ್ಮ । ಸ ಆತ್ಮಾ । ಅಂಗಾನ್ಯನ್ಯಾ ದೇವತಾಃ । ಭೂರಿತಿ ವಾ ಅಯಂ ಲೋಕಃ । ಭುವ ಇತ್ಯಂತರಿಕ್ಷಮ್ । ಸುವರಿತ್ಯಸೌ ಲೋಕಃ ॥ ೧೦ ॥

ಮಹ ಇತ್ಯಾದಿತ್ಯಃ । ಆದಿತ್ಯೇನ ವಾವ ಸರ್ವೇ ಲೋಕಾ ಮಹೀಯಂತೇ । ಭೂರಿತಿ ವಾ ಅಗ್ನಿಃ । ಭುವ ಇತಿ ವಾಯುಃ । ಸುವರಿತ್ಯಾದಿತ್ಯಃ । ಮಹ ಇತಿ ಚಂದ್ರಮಾಃ । ಚಂದ್ರಮಸಾ ವಾವ ಸರ್ವಾಣಿ ಜ್ಯೋತೀಗ್‌ಂಷಿ ಮಹೀಯಂತೇ । ಭೂರಿತಿ ವಾ ಋಚಃ । ಭುವ ಇತಿ ಸಾಮಾನಿ । ಸುವರಿತಿ ಯಜೂಗ್‌ಂಷಿ ॥ ೧೧ ॥

ಮಹ ಇತಿ ಬ್ರಹ್ಮ । ಬ್ರಹ್ಮಣಾ ವಾವ ಸರ್ವೇ ವೇದಾ ಮಹೀಯಂತೇ । ಭೂರಿತಿ ವೈ ಪ್ರಾಣಃ । ಭುವ ಇತ್ಯಪಾನಃ । ಸುವರಿತಿ ವ್ಯಾನಃ । ಮಹ ಇತ್ಯನ್ನಮ್ । ಅನ್ನೇನ ವಾವ ಸರ್ವೇ ಪ್ರಾಣಾ ಮಹೀಯಂತೇ । ತಾ ವಾ ಏತಾಶ್ಚತಸ್ರಶ್ಚತುರ್ಧಾ । ಚತಸ್ರಶ್ಚತಸ್ರೋ

ವ್ಯಾಹೃತಯಃ । ತಾ ಯೋ ವೇದ । ಸ ವೇದ ಬ್ರಹ್ಮ । ಸರ್ವೇಽಸ್ಮೈ ದೇವಾ ಬಲಿಮಾವಹಂತಿ । ॥ ೧೨ ॥

ಸ ಯ ಏಷೋಽನ್ತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ । ಅಮೃತೋ ಹಿರಣ್ಮಯಃ । ಅಂತರೇಣ ತಾಲುಕೇ । ಯ ಏಷ ಸ್ತನ ಇವಾವಲಂಬತೇ । ಸೇಂದ್ರಯೋನಿಃ । ಯತ್ರಾಸೌ ಕೇಶಾಂತೋ ವಿವರ್ತತೇ । ವ್ಯಪೋಹ್ಯ ಶೀರ್ಷಕಪಾಲೇ । ಭೂರಿತ್ಯಗ್ನೌ ಪ್ರತಿತಿಷ್ಠತಿ । ಭುವ ಇತಿ ವಾಯೌ ॥ ೧೩ ॥

ಸುವರಿತ್ಯಾದಿತ್ಯೇ । ಮಹ ಇತಿ ಬ್ರಹ್ಮಣಿ । ಆಪ್ನೋತಿ ಸ್ವಾರಾಜ್ಯಮ್ । ಆಪ್ನೋತಿ ಮನಸಸ್ಪತಿಮ್ । ವಾಕ್ಪತಿಶ್ಚಕ್ಷುಷ್ಪತಿಃ । ಶ್ರೋತ್ರಪತಿರ್ವಿಜ್ಞಾನಪತಿಃ । ಏತತ್ತತೋ ಭವತಿ। ಆಕಾಶಶರೀರಂ ಬ್ರಹ್ಮ । ಸತ್ಯಾತ್ಮಪ್ರಾಣಾರಾಮಂ ಮನ ಆನಂದಮ್ । ಶಾಂತಿಸಮೃದ್ಧಮಮೃತಮ್ । ಇತಿ ಪ್ರಾಚೀನಯೋಗ್ಯೋಪಾಸ್ವ । ॥ ೧೪ ॥

ಪೃಥಿವ್ಯಂತರಿಕ್ಷಂ ದ್ಯೌರ್ದಿಶೋಽವಾಂತರದಿಶಾಃ । ಅಗ್ನಿರ್ವಾಯುರಾದಿತ್ಯ-ಶ್ಚಂದ್ರಮಾ ನಕ್ಷತ್ರಾಣಿ । ಆಪ ಓಷಧಯೋ ವನಸ್ಪತಯ ಆಕಾಶ ಆತ್ಮಾ । ಇತ್ಯಧಿಭೂತಮ್ । ಅಥಾಧ್ಯಾತ್ಮಮ್ । ಪ್ರಾಣೋ ವ್ಯಾನೋಽಪಾನ ಉದಾನಸ್ಸಮಾನಃ । ಚಕ್ಷುಶ್ಶ್ರೋತ್ರಂ ಮನೋ ವಾಕ್ ತ್ವಕ್ । ಚರ್ಮಮಾಗ್ಂಸಗ್ಂಸ್ನಾವಾಽಸ್ಥಿ ಮಜ್ಜಾ । ಏತದಧಿವಿಧಾಯ ಋಷಿರವೋಚತ್ । ಪಾಂಕ್ತಂ ವಾ ಇದಗ್ಂ ಸರ್ವಮ್ । ಪಾಂಕ್ತೇನೈವ ಪಾಂಕ್ತಗ್ಂ । ಸ್ಪೃಣೋತೀತಿ । ॥ ೧೫ ॥

ಓಮಿತಿ ಬ್ರಹ್ಮ । ಓಮಿತೀದಗ್ಂ ಸರ್ವಮ್ । ಓಮಿತ್ಯೇತದನುಕೃತಿ ಹ ಸ್ಮ ವಾ ಅಪ್ಯೋ ಶ್ರಾವಯೇತ್ಯಾಶ್ರಾವಯಂತಿ । ಓಮಿತಿ ಸಾಮಾನಿ ಗಾಯಂತಿ । ಓಗ್ಂ ಶೋಮಿತಿ ಶಸ್ತ್ರಾಣಿ ಶಗ್ಂಸಂತಿ । ಓಮಿತ್ಯಧ್ವರ್ಯುಃ ಪ್ರತಿಗರಂ ಪ್ರತಿಗೃಣಾತಿ । ಓಮಿತಿ ಬ್ರಹ್ಮಾ ಪ್ರಸೌತಿ । ಓಮಿತ್ಯಗ್ನಿಹೋತ್ರಮನುಜಾನಾತಿ । ಓಮಿತಿ ಬ್ರಾಹ್ಮಣಃ ಪ್ರವಕ್ಷ್ಯನ್ನಾಹ ಬ್ರಹ್ಮೋಪಾಪ್ನವಾನೀತಿ । ಬ್ರಹ್ಮೈವೋಪಾಪ್ನೋತಿ । ॥ ೧೬ ॥

ಋತಂ ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ । ತಪಶ್ಚ ಸ್ವಾಧ್ಯಾಯಪ್ರವಚನೇ ಚ । ದಮಶ್ಚ ಸ್ವಾಧ್ಯಾಯಪ್ರವಚನೇ ಚ । ಶಮಶ್ಚ ಸ್ವಾಧ್ಯಾಯಪ್ರವಚನೇ ಚ । ಅಗ್ನಯಶ್ಚ ಸ್ವಾಧ್ಯಾಯಪ್ರವಚನೇ ಚ । ಅಗ್ನಿಹೋತ್ರಂ ಚ ಸ್ವಾಧ್ಯಾಯಪ್ರವಚನೇ ಚ । ಅತಿಥಯಶ್ಚ ಸ್ವಾಧ್ಯಾಯಪ್ರವಚನೇ ಚ । ಮಾನುಷಂ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜನಶ್ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾತಿಶ್ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಮಿತಿ ಸತ್ಯವಚಾ ರಾಥೀತರಃ। ತಪ ಇತಿ ತಪೋನಿತ್ಯಃ ಪೌರುಶಿಷ್ಟಿಃ । ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ । ॥ ೧೭ ॥

ಅಹಂ ವೃಕ್ಷಸ್ಯ ರೇರಿವಾ । ಕೀರ್ತಿಃ ಪೃಷ್ಠಂ ಗಿರೇರಿವ । ಊರ್ಧ್ವಪವಿತ್ರೋ ವಾಜಿನೀವ ಸ್ವಮೃತಮಸ್ಮಿ। ದ್ರವಿಣಗ್ಂ ಸವರ್ಚಸಮ್ । ಸುಮೇಧಾ ಅಮೃತೋಕ್ಷಿತಃ । ಇತಿ ತ್ರಿಶಂಕೋರ್ವೇದಾನುವಚನಮ್ । ॥ ೧೮ ॥

ವೇದಮನೂಚ್ಯಾಚಾರ್ಯೋಽಂತೇವಾಸಿನಮನುಶಾಸ್ತಿ । ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ಮಾ ಪ್ರಮದಃ । ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ । ಸತ್ಯಾನ್ನ ಪ್ರಮದಿತವ್ಯಮ್ । ಧರ್ಮಾನ್ನ ಪ್ರಮದಿತವ್ಯಮ್ । ಕುಶಲಾನ್ನ ಪ್ರಮದಿತವ್ಯಮ್ । ಭೂತ್ಯೈ ನ ಪ್ರಮದಿತವ್ಯಮ್। ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಮ್ । ॥ ೧೯ ॥

ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್ । ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ ಭವ । ಅತಿಥಿದೇವೋ ಭವ । ಯಾನ್ಯನವದ್ಯಾನಿ ಕರ್ಮಾಣಿ । ತಾನಿ ಸೇವಿತವ್ಯಾನಿ । ನೋ ಇತರಾಣಿ । ಯಾನ್ಯಸ್ಮಾಕಗ್ಂ ಸುಚರಿತಾನಿ । ತಾನಿ ತ್ವಯೋಪಾಸ್ಯಾನಿ । ॥ ೨೦ ॥

ನೋ ಇತರಾಣಿ । ಯೇ ಕೇ ಚಾಸ್ಮಚ್ಛ್ರೇಯಾಗ್ಂಸೋ ಬ್ರಾಹ್ಮಣಾಃ । ತೇಷಾಂ ತ್ವಯಾಽಽಸನೇ ನ ಪ್ರಶ್ವಸಿತವ್ಯಮ್ । ಶ್ರದ್ಧಯಾ ದೇಯಮ್ । ಅಶ್ರದ್ಧಯಾಽದೇಯಮ್। ಶ್ರಿಯಾ ದೇಯಮ್ । ಹ್ರಿಯಾ ದೇಯಮ್ । ಭಿಯಾ ದೇಯಮ್ । ಸಂವಿದಾ ದೇಯಮ್ । ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವೃತ್ತವಿಚಿಕಿತ್ಸಾ ವಾ ಸ್ಯಾತ್ ॥ ೨೧ ॥

ಯೇ ತತ್ರ ಬ್ರಾಹ್ಮಣಾಸ್ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಸ್ಸ್ಯುಃ । ಯಥಾ ತೇ ತತ್ರ ವರ್ತೇರನ್ । ತಥಾ ತತ್ರ ವರ್ತೇಥಾಃ । ಅಥಾಭ್ಯಾಖ್ಯಾತೇಷು । ಯೇ ತತ್ರ ಬ್ರಾಹ್ಮಣಾ ಸ್ಸಂಮರ್ಶಿನಃ । ಯುಕ್ತಾ ಆಯುಕ್ತಾಃ । ಅಲೂಕ್ಷಾ ಧರ್ಮಕಾಮಾಸ್ಸ್ಯುಃ । ಯಥಾ ತೇ ತೇಷು ವರ್ತೇರನ್ । ತಥಾ ತೇಷು ವರ್ತೇಥಾಃ । ಏಷ ಆದೇಶಃ । ಏಷ ಉಪದೇಶಃ । ಏಷಾ ವೇದೋಪನಿಷತ್ । ಏತದನುಶಾಸನಮ್ । ಏವಮುಪಾಸಿತವ್ಯಮ್ । ಏವಮು ಚೈತದುಪಾಸ್ಯಮ್ ॥ ೨೨॥

ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ ಪ್ರತ್ಯಕ್ಷಂ ಬ್ರಹ್ಮಾವಾದಿಷಮ್ । ಋತಮವಾದಿಷಮ್ । ಸತ್ಯಮವಾದಿಷಮ್ । ತನ್ಮಾಮಾವೀತ್। ತದ್ವಕ್ತಾರಮಾವೀತ್ । ಆವೀನ್ಮಾಮ್ । ಆವೀದ್ವಕ್ತಾರಮ್ ।

ಓಂ ಶಾಂತಿಃ ಶಾಂತಿಃ ಶಾಂತಿಃ ॥

- ದ್ವಿತೀಯಃ ಪ್ರಶ್ನಃ -

# ಬ್ರಹ್ಮಾನಂದವಲ್ಲೀ

## ಶಾಂತಿಪಾಠಃ

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓಂ ಬ್ರಹ್ಮವಿದಾಪ್ನೋತಿ ಪರಮ್ । ತದೇಷಾಽಭ್ಯುಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ । ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ। ಪೃಥಿವ್ಯಾ ಓಷಧಯಃ । ಓಷಧೀಭ್ಯೋಽನ್ನಮ್ । ಅನ್ನಾತ್‌ಪುರುಷಃ । ಸ ವಾ ಏಷ ಪುರುಷೋಽನ್ನರಸಮಯಃ । ತಸ್ಯೇದಮೇವ ಶಿರಃ । ಅಯಂ ದಕ್ಷಿಣಃ ಪಕ್ಷಃ । ಅಯಮುತ್ತರಃ ಪಕ್ಷಃ । ಅಯಮಾತ್ಮಾ । ಇದಂ ಪುಚ್ಛಂ ಪ್ರತಿಷ್ಠಾ । ತದಪ್ಯೇಷ ಶ್ಲೋಕೋ ಭವತಿ । ॥೧॥

ಅನ್ನಾದ್ವೈ ಪ್ರಜಾಃ ಪ್ರಜಾಯಂತೇ । ಯಾಃ ಕಾಶ್ಚ ಪೃಥಿವೀಗ್‌ಶ್ರಿತಾಃ। ಅಥೋ ಅನ್ನೇನೈವ ಜೀವಂತಿ ।ಅಥೈನದಪಿಯಂತ್ಯಂತತಃ । ಅನ್ನಗ್‌ಂ ಹಿ ಭೂತಾನಾಂ ಜ್ಯೇಷ್ಠಮ್। ತಸ್ಮಾತ್ಸರ್ವೌಷಧಮುಚ್ಯತೇ । ಸರ್ವಂ ವೈ ತೇಽನ್ನಮಾಪ್ನುವಂತಿ । ಯೇಽನ್ನಂ ಬ್ರಹ್ಮೋಪಾಸತೇ । ಅನ್ನಗ್‌ಂಹಿ ಭೂತಾನಾಂ ಜ್ಯೇಷ್ಠಮ್ । ತಸ್ಮಾತ್ಸರ್ವೌಷಧಮುಚ್ಯತೇ । ಅನ್ನಾದ್ಭೂತಾನಿ ಜಾಯಂತೇ । ಜಾತಾನ್ಯನ್ನೇನ ವರ್ಧಂತೇ । ಅದ್ಯತೇಽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ ಇತಿ । ತಸ್ಮಾದ್ವಾ ಏತಸ್ಮಾದನ್ನರಸಮಯಾತ್ । ಅನ್ಯೋಽನ್ತರ ಆತ್ಮಾ ಪ್ರಾಣಮಯಃ । ತೇನೈಷ ಪೂರ್ಣಃ । ಸ ವಾ ಏಷ ಪುರುಷವಿಧ ಏವ। ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಪ್ರಾಣ ಏವ ಶಿರಃ । ವ್ಯಾನೋ ದಕ್ಷಿಣಃ ಪಕ್ಷಃ । ಅಪಾನ ಉತ್ತರಃ ಪಕ್ಷಃ । ಆಕಾಶ ಆತ್ಮಾ । ಪೃಥಿವೀ ಪುಚ್ಛಂ ಪ್ರತಿಷ್ಠಾ । ತದಪ್ಯೇಷ ಶ್ಲೋಕೋ ಭವತಿ । ॥೨॥

ಪ್ರಾಣಂ ದೇವಾ ಅನು ಪ್ರಾಣಂತಿ । ಮನುಷ್ಯಾಃ ಪಶವಶ್ಚ ಯೇ । ಪ್ರಾಣೋ ಹಿ ಭೂತಾನಾಮಾಯುಃ । ತಸ್ಮಾತ್ಸರ್ವಾಯುಷಮುಚ್ಯತೇ । ಸರ್ವಮೇವ ತ ಆಯುರ್ಯಂತಿ । ಯೇ ಪ್ರಾಣಂ ಬ್ರಹ್ಮೋಪಾಸತೇ । ಪ್ರಾಣೋ ಹಿ ಭೂತಾನಾಮಾಯುಃ । ತಸ್ಮಾತ್ಸರ್ವಾಯುಷಮುಚ್ಯತ ಇತಿ । ತಸ್ಯೈಷ ಏವ ಶಾರೀರ

ಆತ್ಮಾ । ಯಃ ಪೂರ್ವಸ್ಯ। ತಸ್ಮಾದ್ವಾ ಏತಸ್ಮಾತ್ ಪ್ರಾಣಮಯಾತ್ । ಅನ್ಯೋಽಂತರ ಆತ್ಮಾ ಮನೋಮಯಃ । ತೇನೈಷ ಪೂರ್ಣಃ । ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಯಜುರೇವ ಶಿರಃ । ಋಗ್ದಕ್ಷಿಣಃ ಪಕ್ಷಃ । ಸಾಮೋತ್ತರಃ ಪಕ್ಷಃ । ಆದೇಶ ಆತ್ಮಾ । ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ । ತದಪ್ಯೇಷ ಶ್ಲೋಕೋ ಭವತಿ । ॥ ೩ ॥

ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ । ಆನಂದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕದಾಚನೇತಿ । ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ । ತಸ್ಮಾದ್ವಾ ಏತಸ್ಮಾನ್ಮನೋಮಯಾತ್ । ಅನ್ಯೋಽಂತರ ಆತ್ಮಾ ವಿಜ್ಞಾನಮಯಃ । ತೇನೈಷ ಪೂರ್ಣಃ । ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಶ್ರದ್ಧೈವ ಶಿರಃ । ಋತಂ ದಕ್ಷಿಣಃ ಪಕ್ಷಃ । ಸತ್ಯಮುತ್ತರಃ ಪಕ್ಷಃ । ಯೋಗ ಆತ್ಮಾ । ಮಹಃ ಪುಚ್ಛಂ ಪ್ರತಿಷ್ಠಾ । ತದಪ್ಯೇಷ ಶ್ಲೋಕೋ ಭವತಿ । ॥ ೪ ॥

ವಿಜ್ಞಾನಂ ಯಜ್ಞಂ ತನುತೇ । ಕರ್ಮಾಣಿ ತನುತೇಽಪಿ ಚ । ವಿಜ್ಞಾನಂ ದೇವಾಸ್ಸರ್ವೇ । ಬ್ರಹ್ಮ ಜ್ಯೇಷ್ಠಮುಪಾಸತೇ । ವಿಜ್ಞಾನಂ ಬ್ರಹ್ಮ ಚೇದ್ವೇದ । ತಸ್ಮಾಚ್ಚೇನ್ನ ಪ್ರಮಾದ್ಯತಿ । ಶರೀರೇ ಪಾಪ್ಮನೋ ಹಿತ್ವಾ । ಸರ್ವಾನ್ಕಾಮಾನ್ತ್ಸಮಶ್ನುತ ಇತಿ । ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ । ತಸ್ಮಾದ್ವಾ ಏತಸ್ಮಾದ್ವಿಜ್ಞಾನಮಯಾತ್। ಅನ್ಯೋಽಂತರ ಆತ್ಮಾಽಽನಂದಮಯಃ । ತೇನೈಷ ಪೂರ್ಣಃ । ಸ ವಾ ಏಷ ಪುರುಷವಿಧ ಏವ । ತಸ್ಯ ಪುರುಷವಿಧತಾಮ್ । ಅನ್ವಯಂ ಪುರುಷವಿಧಃ । ತಸ್ಯ ಪ್ರಿಯಮೇವ ಶಿರಃ । ಮೋದೋ ದಕ್ಷಿಣಃ ಪಕ್ಷಃ । ಪ್ರಮೋದ ಉತ್ತರಃ ಪಕ್ಷಃ । ಆನಂದ ಆತ್ಮಾ । ಬ್ರಹ್ಮ ಪುಚ್ಛಂ ಪ್ರತಿಷ್ಠಾ । ತದಪ್ಯೇಷ ಶ್ಲೋಕೋ ಭವತಿ । ॥ ೫ ॥

ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ವೇದ । ಸಂತಮೇನಂ ತತೋ ವಿದುರಿತಿ । ತಸ್ಯೈಷ ಏವ ಶಾರೀರ ಆತ್ಮಾ । ಯಃ ಪೂರ್ವಸ್ಯ । ಅಥಾತೋಽನುಪ್ರಶ್ನಾಃ । ಉತಾವಿದ್ವಾನಮುಂ ಲೋಕಂ ಪ್ರೇತ್ಯ । ಕಶ್ಚನ ಗಚ್ಛತೀ ೩ । ಆಹೋ ವಿದ್ವಾನಮುಂ ಲೋಕಂ ಪ್ರೇತ್ಯ । ಕಶ್ಚಿತ್ಸಮಶ್ನುತಾ ೩ ಉ । ಸೋಽಕಾಮಯತ। ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ। ಇದಗ್ಂ ಸರ್ವಮಸೃಜತ । ಯದಿದಂ ಕಿಂ ಚ । ತತ್ಸೃಷ್ಟ್ವಾ । ತದೇವಾನುಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ

ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಚ ಸತ್ಯಮಭವತ್ । ಯದಿದಂ ಕಿಂಚ । ತತ್ಸತ್ಯಮಿತ್ಯಾಚಕ್ಷತೇ । ತದಪ್ಯೇಷ ಶ್ಲೋಕೋ ಭವತಿ ॥ ೬ ॥

ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ । ತದಾತ್ಮಾನಗ್ಂ ಸ್ವಯಮಕುರುತ । ತಸ್ಮಾತ್ತತ್ಸುಕೃತಮುಚ್ಯತ ಇತಿ । ಯದ್ವೈ ತತ್ಸುಕೃತಮ್ । ರಸೋ ವೈ ಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ ಭವತಿ । ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್ । ಏಷ ಹ್ಯೇವಾನಂದಯಾತಿ । ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽಭಯಂ ಪ್ರತಿಷ್ಠಾಂ ವಿಂದತೇ । ಅಥ ಸೋಽಭಯಂ ಗತೋ ಭವತಿ । ಯದಾಹ್ಯೇವೈಷ ಏತಸ್ಮಿನ್ನುದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ । ತತ್ತ್ವೇವ ಭಯಂ ವಿದುಷೋಽಮನ್ವಾನಸ್ಯ । ತದಪ್ಯೇಷ ಶ್ಲೋಕೋ ಭವತಿ । ॥ ೭ ॥

ಭೀಷಾಽಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ । ಸೈಷಾಽಽನಂದಸ್ಯ ಮೀಮಾಂಗ್ಂಸಾ ಭವತಿ । ಯುವಾ ಸ್ಯಾತ್ಸಾಧು ಯುವಾಧ್ಯಾಯಕಃ । ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ । ತಸ್ಯೇಯಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್ । ಸ ಏಕೋ ಮಾನುಷ ಆನಂದಃ । ತೇ ಯೇ ಶತಂ ಮಾನುಷಾ ಆನಂದಾಃ । ಸ ಏಕೋ ಮನುಷ್ಯಗಂಧರ್ವಾಣಾಮಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ ।

ತೇ ಯೇ ಶತಂ ಮನುಷ್ಯಗಂಧರ್ವಾಣಾಮಾನಂದಾಃ । ಸ ಏಕೋ ದೇವ-ಗಂಧರ್ವಾಣಾಮಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ದೇವಗಂಧರ್ವಾಣಾಮಾನಂದಾಃ । ಸ ಏಕಃ ಪಿತೃಣಾಂ ಚಿರಲೋಕ-ಲೋಕಾನಾಮಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ಪಿತೃಣಾಂ ಚಿರಲೋಕಲೋಕಾನಾಮಾನಂದಾಃ । ಸ ಏಕ ಆಜಾನಜಾನಾಂ ದೇವಾನಾಮಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಮಾಜಾನಜಾನಾಂ ದೇವಾನಾಮಾನಂದಾಃ । ಸ ಏಕಃ ಕರ್ಮದೇವಾನಾಂ ದೇವಾನಾಮಾನಂದಃ । ಯೇ ಕರ್ಮಣಾ ದೇವಾನಪಿಯಂತಿ । ಶ್ರೋತ್ರಿಯಸ್ಯ ಚಾಕಾಮಹತಸ್ಯ ।

ತೇ ಯೇ ಶತಂ ಕರ್ಮದೇವಾನಾಂ ದೇವಾನಾಮಾನಂದಾಃ । ಸ ಏಕೋ ದೇವಾನಾಮಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ದೇವಾನಾಮಾನಂದಾಃ । ಸ ಏಕ ಇಂದ್ರಸ್ಯಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ ।

ತೇ ಯೇ ಶತಮಿಂದ್ರಸ್ಯಾನಂದಾಃ । ಸ ಏಕೋ ಬೃಹಸ್ಪತೇರಾನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ತೇ ಯೇ ಶತಂ ಬೃಹಸ್ಪತೇರಾನಂದಾಃ । ಸ ಏಕಃ ಪ್ರಜಾಪತೇರಾನಂದಃ। ಶ್ರೋತ್ರಿಯಸ್ಯ ಚಾಕಾಮಹತಸ್ಯ ।

ತೇ ಯೇ ಶತಂ ಪ್ರಜಾಪತೇರಾನಂದಾಃ । ಸ ಏಕೋ ಬ್ರಹ್ಮಣ ಆನಂದಃ । ಶ್ರೋತ್ರಿಯಸ್ಯ ಚಾಕಾಮಹತಸ್ಯ । ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ । ಸ ಯ ಏವಂವಿತ್ । ಅಸ್ಮಾಲ್ಲೋಕಾತ್ಪ್ರೇತ್ಯ । ಏತಮನ್ನಮಯಾಮಾತ್ಮಾನ-ಮುಪಸಂಕ್ರಾಮತಿ । ಏತಂ ಪ್ರಾಣಮಯಮಾತ್ಮಾನಮುಪಸಂಕ್ರಾಮತಿ । ಏತಂ ಮನೋಮಯಮಾತ್ಮಾನಮುಪಸಂಕ್ರಾಮತಿ । ಏತಂ ವಿಜ್ಞಾನಮಯಮಾತ್ಮಾನ-ಮುಪಸಂಕ್ರಾಮತಿ । ಏತಮಾನಂದಮಯಮಾತ್ಮಾನಮುಪಸಂಕ್ರಾಮತಿ । ತದಪ್ಯೇಷ ಶ್ಲೋಕೋ ಭವತಿ ॥ ೮ ॥

ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ । ಆನಂದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನೇತಿ । ಏತಗ್ಂ ಹ ವಾವ ನ ತಪತಿ । ಕಿಮಹಗ್ಂ ಸಾಧು ನಾಕರವಮ್ । ಕಿಮಹಂ ಪಾಪಮಕರವಮಿತಿ । ಸ ಯ ಏವಂ ವಿದ್ವಾನೇತೇ ಆತ್ಮಾನಗ್ಂ ಸ್ಪೃಣುತೇ । ಉಭೇ ಹ್ಯೇವೈಷ ಏತೇ ಆತ್ಮಾನಗ್ಂ ಸ್ಪೃಣುತೇ । ಯ ಏವಂ ವೇದ । ಇತ್ಯುಪನಿಷತ್ ॥ ೯ ॥

ಓಂ ಸಹ ನಾವವತು ।............ ಓಂ ಶಾಂತಿಃ ಶಾಂತಿಃ ಶಾಂತಿಃ ॥

-----------

- ತೃತೀಯಃ ಪ್ರಶ್ನಃ -

# ಭೃಗುವಲ್ಲೀ

## ಶಾಂತಿಪಾಠಃ

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ ।

ಓಂ ಶಾಂತಿಃ ಶಾಂತಿಃ ಶಾಂತಿಃ ॥

ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ। ತಸ್ಮಾ ಏತತ್ ಪ್ರೋವಾಚ । ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಮಿತಿ । ತಗ್ಂ ಹೋವಾಚ । ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ । ಯತ್ ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥ ೧ ॥

ಅನ್ನಂ ಬ್ರಹ್ಮೇತಿ ವ್ಯಜಾನಾತ್ । ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ। ಅನ್ನೇನ ಜಾತಾನಿ ಜೀವಂತಿ । ಅನ್ನಂ ಪ್ರಯಂತ್ಯಭಿಸಂವಿಶಂತೀತಿ । ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥ ೨ ॥

ಪ್ರಾಣೋ ಬ್ರಹ್ಮೇತಿ ವ್ಯಜಾನಾತ್ । ಪ್ರಾಣಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಪ್ರಾಣೇನ ಜಾತಾನಿ ಜೀವಂತಿ । ಪ್ರಾಣಂ ಪ್ರಯಂತ್ಯಭಿಸಂವಿಶಂತೀತಿ । ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥ ೩ ॥

ಮನೋ ಬ್ರಹ್ಮೇತಿ ವ್ಯಜಾನಾತ್ । ಮನಸೋ ಹ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಮನಸಾ ಜಾತಾನಿ ಜೀವಂತಿ । ಮನಃ ಪ್ರಯಂತ್ಯಭಿಸಂವಿಶಂತೀತಿ । ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥ ೪ ॥

ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ । ವಿಜ್ಞಾನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ವಿಜ್ಞಾನೇನ ಜಾತಾನಿ ಜೀವಂತಿ । ವಿಜ್ಞಾನಂ ಪ್ರಯಂತ್ಯಭಿಸಂವಿಶಂತೀತಿ ।

ತದ್ವಿಜ್ಞಾಯ । ಪುನರೇವ ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಗ್ಂ ಹೋವಾಚ । ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ ॥ ೫ ॥

ಆನಂದೋ ಬ್ರಹ್ಮೇತಿ ವ್ಯಜಾನಾತ್ । ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಆನಂದೇನ ಜಾತಾನಿ ಜೀವಂತಿ । ಆನಂದಂ ಪ್ರಯಂತ್ಯಭಿಸಂವಿಶಂತೀತಿ । ಸೈಷಾ ಭಾರ್ಗವೀ-ವಾರುಣೀ-ವಿದ್ಯಾ । ಪರಮೇ ವ್ಯೋಮನ್ ಪ್ರತಿಷ್ಠಿತಾ । ಯ ಏವಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥ ೬ ॥

ಅನ್ನಂ ನ ನಿಂದ್ಯಾತ್ । ತದ್ ವ್ರತಮ್ । ಪ್ರಾಣೋ ವಾ ಅನ್ನಮ್ । ಶರೀರ-ಮನ್ನಾದಮ್ । ಪ್ರಾಣೇ ಶರೀರಂ ಪ್ರತಿಷ್ಠಿತಮ್ । ಶರೀರೇ ಪ್ರಾಣಃ ಪ್ರತಿಷ್ಠಿತಃ। ತದೇತದನ್ನಮನ್ನೇ ಪ್ರತಿಷ್ಠಿತಮ್ । ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿ-ರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥ ೭ ॥

ಅನ್ನಂ ನ ಪರಿಚಕ್ಷೀತ । ತದ್ ವ್ರತಮ್ । ಆಪೋ ವಾ ಅನ್ನಮ್ । ಜ್ಯೋತಿರನ್ನಾದಮ್ । ಅಪ್ಸು ಜ್ಯೋತಿಃ ಪ್ರತಿಷ್ಠಿತಮ್ । ಜ್ಯೋತಿಷ್ಯಾಪಃ ಪ್ರತಿಷ್ಠಿತಾಃ । ತದೇತದನ್ನಮನ್ನೇ ಪ್ರತಿಷ್ಠಿತಮ್ । ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥ ೮ ॥

ಅನ್ನಂ ಬಹು ಕುರ್ವೀತ । ತದ್ ವ್ರತಮ್ । ಪೃಥಿವೀ ವಾ ಅನ್ನಮ್ । ಆಕಾಶೋಽನ್ನಾದಃ । ಪೃಥಿವ್ಯಾಮಾಕಾಶಃ ಪ್ರತಿಷ್ಠಿತಃ । ಆಕಾಶೇ ಪೃಥಿವೀ ಪ್ರತಿಷ್ಠಿತಾ । ತದೇತದನ್ನಮನ್ನೇ ಪ್ರತಿಷ್ಠಿತಮ್ । ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ । ಅನ್ನವಾನನ್ನಾದೋ ಭವತಿ । ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ । ಮಹಾನ್ ಕೀರ್ತ್ಯಾ ॥ ೯ ॥

ನ ಕಂಚನ ವಸತೌ ಪ್ರತ್ಯಾಚಕ್ಷೀತ । ತದ್ ವ್ರತಮ್ । ತಸ್ಮಾದ್ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್ । ಅರಾಧ್ಯಸ್ಮಾ ಅನ್ನಮಿತ್ಯಾಚಕ್ಷತೇ । ಏತದ್ವೈ ಮುಖತೋಽನ್ನಗ್ಂ ರಾದ್ಧಮ್ । ಮುಖತೋಽಸ್ಮಾ ಅನ್ನಗ್ಂ ರಾಧ್ಯತೇ । ಏತದ್ವೈ ಮಧ್ಯತೋಽನ್ನಗ್ಂ ರಾದ್ಧಮ್ । ಮಧ್ಯತೋಽಸ್ಮಾ ಅನ್ನಗ್ಂ ರಾಧ್ಯತೇ । ಏತದ್ವಾ ಅಂತತೋಽನ್ನಗ್ಂ ರಾದ್ಧಮ್ । ಅಂತತೋಽಸ್ಮಾ ಅನ್ನಗ್ಂ ರಾಧ್ಯತೇ । ಯ ಏವಂ ವೇದ ।

ಕ್ಷೇಮ ಇತಿ ವಾಚಿ । ಯೋಗಕ್ಷೇಮ ಇತಿ ಪ್ರಾಣಾಪಾನಯೋಃ । ಕರ್ಮೇತಿ ಹಸ್ತಯೋಃ । ಗತಿರಿತಿ ಪಾದಯೋಃ । ವಿಮುಕ್ತಿರಿತಿ ಪಾಯೌ । ಇತಿ ಮಾನುಷೀಸ್ಸಮಾಜ್ಞಾಃ। ಅಥ ದೈವೀಃ । ತೃಪ್ತಿರಿತಿ ವೃಷ್ಟೌ । ಬಲಮಿತಿ ವಿದ್ಯುತಿ । ಯಶ ಇತಿ ಪಶುಷು । ಜ್ಯೋತಿರಿತಿ ನಕ್ಷತ್ರೇಷು । ಪ್ರಜಾತಿರಮೃತಮಾನಂದ ಇತ್ಯುಪಸ್ಥೇ । ಸರ್ವಮಿತ್ಯಾಕಾಶೇ ।

ತತ್ ಪ್ರತಿಷ್ಠೇತ್ಯುಪಾಸೀತ । ಪ್ರತಿಷ್ಠಾವಾನ್ ಭವತಿ । ತನ್ಮಹ ಇತ್ಯುಪಾಸೀತ । ಮಹಾನ್ ಭವತಿ । ತನ್ಮನ ಇತ್ಯುಪಾಸೀತ । ಮಾನವಾನ್ ಭವತಿ । ತನ್ನಮ ಇತ್ಯುಪಾಸೀತ । ನಮ್ಯಂತೇಽಸ್ಮೈ ಕಾಮಾಃ । ತದ್‌ಬ್ರಹ್ಮೇತ್ಯುಪಾಸೀತ । ಬ್ರಹ್ಮವಾನ್ ಭವತಿ । ತದ್ ಬ್ರಹ್ಮಣಃ ಪರಿಮರ ಇತ್ಯುಪಾಸೀತ । ಪರ್ಯೇಣಂ ಮ್ರಿಯಂತೇ ದ್ವಿಷಂತಸ್ಸಪತ್ನಾಃ । ಪರಿ ಯೇಽಪ್ರಿಯಾ ಭ್ರಾತೃವ್ಯಾಃ ।

ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ । ಸ ಯ ಏವಂ ವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯಮಾತ್ಮಾನಮುಪಸಂಕ್ರಮ್ಯ । ಏತಂ ಪ್ರಾಣಮಯಮಾತ್ಮಾನಮುಪಸಂಕ್ರಮ್ಯ । ಏತಂ ಮನೋಮಯಮಾತ್ಮಾನಮುಪ-ಸಂಕ್ರಮ್ಯ । ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಮ್ಯ । ಏತಮಾನಂದಮಯ-ಮಾತ್ಮಾನಮುಪಸಂಕ್ರಮ್ಯ । ಇಮಾನ್ ಲೋಕಾನ್ ಕಾಮಾನ್ನೀ ಕಾಮ-ರೂಪ್ಯನುಸಂಚರನ್। ಏತತ್ಸಾಮ ಗಾಯನ್ನಾಸ್ತೇ ।

ಹಾ೩ವು ಹಾ೩ವು ಹಾ೩ವು । ಅಹಮನ್ನಮಹಮನ್ನಮಹಮನ್ನಮ್ । ಅಹಮನ್ನಾದೋ೨ಽಹಮನ್ನಾದೋ೨ಽಹಮನ್ನಾದಃ । ಅಹಗ್ಂ ಶ್ಲೋಕಕೃದಹಗ್ಂ ಶ್ಲೋಕಕೃದಹಗ್ಂ ಶ್ಲೋಕಕೃತ್ । ಅಹಮಸ್ಮಿ ಪ್ರಥಮಜಾ ಋತಾ೩ ಸ್ಯ ।

ಪೂರ್ವಂ ದೇವೇಭ್ಯೋ ಅಮೃತಸ್ಯ ನಾ೩ಭಾಯಿ । ಯೋ ಮಾ ದದಾತಿ ಸ ಇದೇವ ಮಾ೩ವಾಃ । ಅಹಮನ್ನಮನ್ನಮದಂತಮಾ೩ದ್ಮಿ । ಅಹಂ ವಿಶ್ವಂ ಭುವನಮಭ್ಯಭವಾಮ್ । ಸುವರ್ನ ಜ್ಯೋತೀಃ । ಯ ಏವಂ ವೇದ । ಇತ್ಯುಪನಿಷತ್ । ॥೧೦॥

ಓಂ ಸಹ ನಾವವತು ।.................... ಓಂ ಶಾಂತಿಃ ಶಾಂತಿಃ ಶಾಂತಿಃ ॥

------------

# ಕೆಲವು ಪ್ರಕಟನೆಗಳು

(ಶ್ರೀಶ್ರೀಗಳವರ ಉಪನ್ಯಾಸಮಾಲಿಕೆಗಳು)


| | | ಪುಟಗಳು |
|---|---|---|
| ೧. | ವೇದಾಂತವೂ ಆಧುನಿಕಜನಜೀವನವೂ | ೪೯ |
| ೨. | ಬ್ರಹ್ಮವಿದ್ಯೆ | ೬೪ |
| ೩. | ಅನುಭವಪರ್ಯಂತವಾದ ಆತ್ಮವಿಚಾರ | ೭೨ |
| ೪. | ಪರಿಪೂರ್ಣದರ್ಶನ | ೬೨ |
| ೫. | ಸರ್ವವ್ಯವಹಾರಾತೀತವಾದ ಪರಮಾರ್ಥ | ೫೨ |
| ೬. | ಶಾಂಕರವೇದಾಂತದ ಮೂಲತತ್ತ್ವಗಳು | ೧೧೦ |
| ೭. | ಅಧ್ಯಾತ್ಮವಿದ್ಯೆ | ೧೬೬ |
| ೮. | ಜೀವಂತವೇದಾಂತ | ೩೧೦ |
| ೯. | ಅನುಭವಗಮ್ಯವೇದಾಂತ | ೨೯೪ |
| ೧೦. | ದಕ್ಷಿಣಾಮೂರ್ತಿಸ್ತೋತ್ರ | ೭೪ |


ಈ ಉಪನ್ಯಾಸಮಾಲಿಕೆಗಳಲ್ಲಿ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಶಂಕರವೇದಾಂತವನ್ನು ಅಂಗೈನೆಲ್ಲಿಯಕಾಯಿಯಂತೆ ಸ್ಪಷ್ಟವಾಗಿ ಪ್ರತಿಪಾದಿಸಿರುತ್ತಾರೆ. ಶ್ರೀಶಂಕರಭಗವತ್ಪಾದರ ಶಿಷ್ಯರು ನಾವೆಂದು ಹೇಳಿಕೊಳ್ಳುವ ಎಲ್ಲಾ ವಾಚಕರೂ ತಿಳಿದಿರಲೇಬೇಕಾದ ವೇದಾಂತವಿಚಾರಗಳು ಇವುಗಳಲ್ಲಿ ತುಂಬಿತುಳುಕುತ್ತಿವೆ. ಈ ಉಪನ್ಯಾಸಗಳನ್ನು ಓದಿದವರಿಗೆ ನೇರಾಗಿ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳನ್ನು ಅಧ್ಯಯನಮಾಡುವ ಅರ್ಹತೆಯುಂಟಾಗುವದರಲ್ಲಿ ಸಂಶಯವಿಲ್ಲ. ವೇದಾಂತ ಉಪನ್ಯಾಸಕರುಗಳಿಗೂ ವಿದ್ಯಾರ್ಥಿಗಳಿಗೂ ಸಹ ಈ ಗ್ರಂಥಗಳು ಕೈಪಿಡಿಗಳಾಗಿವೆ.

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ


**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211

ದೂ. : 08175-73820

**೭. ತೈತ್ತಿರಿಯೋಪನ್ಯಾಸಮಂಜರಿ : ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ 1999ನೇ ಸೆಪ್ಟೆಂಬರ್‌ನಿಂದ 2000ನೇ ಮೇ ಪೂರ , ಸಂಪಾದಕರು ಧಾರಾವಾಹಿಯಾಗಿ ಈ ಉಪನಿಷತ್ತಿನ ಮುಖ್ಯೋಪದೇಶಗಳನ್ನು ಸಂಗ್ರಹಿಸಿ ಬರೆದಿದ್ದ ಲೇಖನಗಳನ್ನು ಒಟ್ಟುಗೂಡಿಸಿ ಗ್ರಂಥವಾಗಿ ಪರಿವರ್ತಿಸಿ ಮಂಜರಿಗಳ ಮಾಲೆಯಲ್ಲಿ ಈಗ ಪ್ರಕಟಿಸಲಾಗಿದೆ. ಪುಟ ೧ ರಿಂದ ೨೮ರವರೆಗೆ ಶ್ರೀಶ್ರೀಗಳವರೇ ಬರೆದಿಟ್ಟಿದ್ದ ಕೈಬರಹದ ಕರಡುಪ್ರತಿಯನ್ನು ಯಥಾವತ್ತಾಗಿ ಅಳವಡಿಸಿ ಅಲ್ಲಿಂದ ಮುಂದಕ್ಕೆ ಲೇಖಕರೇ ವಿವರಣೆಯನ್ನು ಬರೆದಿರುತ್ತಾರೆ. **ಈಗ ಇದು ನಿಮ್ಮ ಕೈಯಲ್ಲಿದೆ.**

**(ಪ್ರಥಮ ಮುದ್ರಣ: ೨೦೦೦ ಪು. ಡೆಮ್ಮಿ ೪+೭೯)**

**೮. ಛಾಂದೋಗ್ಯೋಪನ್ಯಾಸಮಂಜರಿ** : 1981ನೇ ಸೆಪ್ಟೆಂಬರ್‌ನಿಂದ 1987ನೇ ಆಗಸ್ಟ್ ಪೂರಾ **ಅಧ್ಯಾತ್ಮ ಪ್ರಕಾಶ** ಮಾಸಪತ್ರಿಕೆಯಲ್ಲಿ ಸಂಪಾದಕರು ಈ ಉಪನಿಷತ್ತಿನ ಮುಖ್ಯೋಪದೇಶಗಳನ್ನು ಸಂಗ್ರಹಿಸಿ ಬರೆದಿದ್ದ ಲೇಖನಗಳನ್ನು ಒಂದುಗೂಡಿಸಿ ಗ್ರಂಥರೂಪವಾಗಿ ಮಾರ್ಪಡಿಸಿ **ಮಂಜರಿ**ಗಳ ಮಾಲೆಯಲ್ಲಿ ಪ್ರಕಟಿಸಲಾಗಿದೆ. ವಿಷಯಗಳೆಲ್ಲವೂ ಶ್ರೀಶಾಂಕರಭಾಷ್ಯಾನುಗುಣವಾಗಿವೆ. ಪ್ರತಿಪಾದನ ಸರಣಿಯು ಸರಳವಾಗಿದ್ದು ವೇದಾಂತಸಿದ್ಧಾಂತದಲ್ಲಿನ ಉಪಾಸನೆ ಹಾಗೂ ತತ್ತ್ವಜ್ಞಾನಗಳ ತಿರುಳನ್ನು ಒಳಗೊಂಡಿದೆ. ಜಿಜ್ಞಾಸುಗಳು ಈ ಗ್ರಂಥವನ್ನು ಪಠನಮಾಡುವದರಿಂದ ಛಾಂದೋಗ್ಯೋಪನಿಷತ್ತಿನ ಸಾರವನ್ನು ಅನುಸಂಧಾನ ಮಾಡಿ ಕೃತಾರ್ಥರಾಗಬಹುದಾಗಿದೆ.

**(ಪ್ರಥಮ ಮುದ್ರಣ: ೧೯೯೯ ಪುಟಗಳು ಡೆಮ್ಮಿ, ೮+೩೩೦,**

**೯. ಬೃಹದಾರಣ್ಯಕೋಪನ್ಯಾಸಮಂಜರಿ :** 1975 ನೇ ಸಪ್ಟೆಂಬರ್‌ನಿಂದ 1981ನೇ ಆಗಸ್ಟ್ ಪೂರ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಸಂಪಾದಕರು ಈ ಉಪನಿಷತ್ತಿನ ಮುಖ್ಯೋಪದೇಶಗಳನ್ನು ಸಂಗ್ರಹಿಸಿ ಬರೆದಿದ್ದ ಲೇಖನಗಳನ್ನು ಒಟ್ಟುಗೂಡಿಸಿ ಗ್ರಂಥರೂಪವಾಗಿ ಪರಿವರ್ತಿಸಿ **ಮಂಜರಿ**ಗಳ ಮಾಲೆಯಲ್ಲಿ ಈಗ ಪ್ರಕಟಿಸಲಾಗಿದೆ. ಉಪನಿಷತ್ತುಗಳಲ್ಲೆಲ್ಲ ದೊಡ್ಡದಾದ ಬೃಹದಾರಣ್ಯಕದ ಶಾಂಕರಭಾಷ್ಯವೂ ವಿಸ್ತಾರವಾಗಿಯೇ ಇದೆ. ಅದರ ಸಾರಸಂಗ್ರಹವೇ ಈ ಗ್ರಂಥವಾಗಿದೆ. ಜಿಜ್ಞಾಸುಗಳು ಅತ್ಯವಶ್ಯವಾಗಿ ಅಧ್ಯಯನ ಮಾಡಿ ಅನುಸಂಧಾನಮಾಡಬೇಕಾದ ಗ್ರಂಥವಿದು.

**(ಪ್ರಥಮ ಮುದ್ರಣ: ೧೯೯೯ ಪುಟಗಳು ಡೆಮ್ಮಿ, ೮+೩೩೨)**

**೧೦. ಶ್ವೇತಾಶ್ವತರೋಪನ್ಯಾಸಮಂಜರಿ :** 1981ನೇ ಸೆಪ್ಟೆಂಬರ್‌ನಿಂದ 1987ನೇ ಮಾರ್ಚ್‌ಪೂರ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಸಂಪಾದಕರು ಈ ಉಪನಿಷತ್ತಿನ ಮುಖ್ಯೋಪದೇಶಗಳನ್ನು ಸಂಗ್ರಹಿಸಿ ಬರೆದಿದ್ದ ಲೇಖನಗಳನ್ನು ಒಟ್ಟುಗೂಡಿಸಿ ಗ್ರಂಥರೂಪವಾಗಿ ಪರಿವರ್ತಿಸಿ ಮಂಜರಿಗಳ ಮಾಲೆಯಲ್ಲಿ ಈಗ ಪ್ರಕಟಿಸಲಾಗಿದೆ. ಶ್ರೀಶಂಕರಾಚಾರ್ಯರು ದಶೋಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದಂತೆ ಶ್ವೇತಾಶ್ವತರೋಪನಿಷತ್ತಿಗೆ ಭಾಷ್ಯರಚಿಸದಿದ್ದರೂ ಈ ಉಪನಿಷತ್ತಿನ ಅನೇಕ ಮಂತ್ರಗಳನ್ನು ತಮ್ಮ ಗ್ರಂಥದಲ್ಲಿ ಪ್ರಮಾಣವಚನಗಳಾಗಿ ಉದಾಹರಿಸಿರುತ್ತಾರೆ. ಜಿಜ್ಞಾಸುಗಳ ಅನುಕೂಲಕ್ಕಾಗಿ ಮಂತ್ರಗಳನ್ನೆಲ್ಲ ಒಟ್ಟುಗೂಡಿಸಿ ಕೊನೆಯಲ್ಲಿ ಮುದ್ರಿಸಲಾಗಿದೆ. ಜಿಜ್ಞಾಸುಗಳು ಅತ್ಯವಶ್ಯಕವಾಗಿ ಅಧ್ಯಯನಮಾಡಿ ಅನುಸಂಧಾನಮಾಡಬೇಕಾದ ಗ್ರಂಥವಿದು

**(ಪ್ರಥಮ ಮುದ್ರಣ : ೧೯೯೯ ಪು. ಡೆಮ್ಮಿ ೮+ ೩೪೬)**

**ವಿಶೇಷ ಸೂಚನೆ: ದಶೋಪನಿಷದ್ಭಾಷ್ಯಗಳಲ್ಲಿ ಒಂಬತ್ತು ಉಪನಿಷತ್ತುಗಳು ಮತ್ತು ಶ್ವೇತಾಶ್ವತರೋಪನಿಷತ್ತು ಸೇರಿ ಒಟ್ಟು ಹತ್ತು ಮಂಜರಿಗಳು ಈಗ ವಾಚಕರ ಕರಕಮಲವನ್ನು ಅಲಂಕರಿಸಿವೆ. ಈಗ ಐತರೇಯ ಉಪನಿಷತ್‌ನ್ನು ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯಲ್ಲಿ ಜೂನ್ ೨೦೦೦ದಿಂದ ಪ್ರತಿ ತಿಂಗಳು ಎಂಟು ಪುಟಗಳಂತೆ ಧಾರಾವಾಹಿಯಾಗಿ ಪ್ರಕಟಿಸಲಾಗುತ್ತಿದೆ. ಉಪನಿಷತ್ ಮುಗಿದ ಮೇಲೆ ಪುಸ್ತಕ ರೂಪದಲ್ಲಿ ಹೊರಬರಲಿದೆ.**

**ಜಿಜ್ಞಾಸುಗಳು ಶ್ರೀ ಶಾಂಕರಭಾಷ್ಯವನ್ನು ಓದುವ ಮೊದಲು ಅಥವಾ ಅಧ್ಯಯನ ಮಾಡಿದ ಮೇಲೂ ಉಪನಿಷತ್ತಿನ ತಾತ್ಪರ್ಯವನ್ನು ಗ್ರಹಿಸಲು ಮಂಜರಿಗಳು ಬಹಳ ಸಹಾಯಕವಾಗುತ್ತವೆ.**

## ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತಪುತ್ರ **ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು** ತಾ|| 2-6-1928ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರ ವೇದಾಂತಾಧ್ಯಯನವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952ರಲ್ಲಿ ''ಅಧ್ಯಾತ್ಮವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು **'ಅಧ್ಯಾತ್ಮಪ್ರಕಾಶ'** ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆ ಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 48 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರನಂತರ ಈವರೆಗೆ 26 ಅಧ್ಯಾತ್ಮಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರ ಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್‌ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.

**ತಾ || 29-7-2000** **ಅಧ್ಯಕ್ಷರು**